
# ಸಮುದಾಯದ ಅರಿವು ಆಗ್ರಹಿತ ಅಭಿವೃದ್ಧಿ

## ಸಮುದಾಯ ಸಂಚಲನ ಕೈಪಿಡಿ

ಜೋಸೆಫ್ ಕ್ಷೇವಿಯರ್



# ಸಮುದಾಯದ ಅರಿವು ಆಗ್ರಹಿತ ಅಭಿವೃದ್ಧಿ

## ಸಮುದಾಯ ಸಂಚಲನ ಕೈಪಿಡಿ

ಜೋಸೆಫ್ ಕ್ಷೇವಿಯರ್

ಸಹಪಾಠಿಗಳು
ಶ್ರೀಮತಿ ಶ್ರೀ ವಿದ್ಯಾ ಸಾಯಿನಾಥನ್
ಡಾ. ಸದಾನಂದ್ ಭಾಗ್

ಭಾಷಾಂತರ: ವಂ. ಜಾರ್ಜ್ ಡಿಸೋಜ

**ಸಮುದಾಯದ ಅರಿವು ಆಗ್ರಹಿತ ಅಭಿವೃದ್ಧಿ**
ಸಮುದಾಯ ಸಂಚಲನ ಕೈಪಿಡಿ

**ಲೇಖಕರು: ಜೋಸೆಫ್ ಕ್ಷೇವಿಯರ್**

© ಇಂಡಿಯನ್ ಸೋಶಿಯಲ್ ಇನ್ಸ್ಟಿಟ್ಯೂಟ್, ಬೆಂಗಳೂರು
ಕಾರಿತಾಸ್ ಇಂಡಿಯಾ, ನವದೆಹಲಿ

**ಮೊದಲನೆಯ ಪ್ರಕಟಣೆ: 2021**

ISBN: 978-81-947949-1-2

**ಪ್ರಕಾಶಕರು:**

ಇಂಡಿಯನ್ ಸೋಶಿಯಲ್ ಇನ್ಸ್ಟಿಟ್ಯೂಟ್,
೨೪ ಬೆನ್ಸನ್ ರೋಡ್, ಬೆನ್ಸನ್ ಟೌನ್,
ಬೆಂಗಳೂರು – ೫೬೦೦೪೬

ಕಾರಿತಾಸ್ ಇಂಡಿಯಾ
ಸಿಬಿಸಿಐ ಸೆಂಟರ್, ೧ ಅಶೋಕ್ ಪ್ಲೇಸ್,
ನವದೆಹಲಿ – ೧೧೦೦೦೧

ಮುಖಪುಟ ಮತ್ತು ವಿನ್ಯಾಸ: ಜ್ಯೋತಿ ಪ್ರಿಂಟರ್ಸ್

ಮುದ್ರಣ: ಜ್ಯೋತಿ ಪ್ರಿಂಟರ್ಸ್, ಸಿ–೧೭, ಸೆಕ್ಟರ್–೮, ನೊಯಿಡಾ – ೨೦೧೩೦೧

ಪ್ರಕಾಶಕರಿಗೆ ಮಾನ್ಯತೆ ನೀಡುವುದರೊಂದಿಗೆ, ಈ ಪುಸ್ತಕದ ತರ್ಜುಮೆಯನ್ನು ಅಥವಾ ಈ ಪುಸ್ತಕದಲ್ಲಿರುವ ವಿಷಯವನ್ನು ಪ್ರಕಟಿಸಬಹುದು.

ಈ ಪುಸ್ತಕವನ್ನು ಸ್ವತ: ಅಥವಾ ಬೇರೆ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಭಾಷಾಂತರಿಸುವ, ತಿದ್ದುಪಡಿ ಮಾಡುವ ಅಥವಾ ಮರು ಪ್ರಕಟಿಸುವ ಎಲ್ಲ ಹಕ್ಕನ್ನು ಕಾರಿತಾಸ್ ಇಂಡಿಯಾ ಅಥವಾ ಇಂಡಿಯನ್ ಸೋಶಿಯಲ್ ಇನ್ಸ್ಟಿಟ್ಯೂಟ್, ಬೆಂಗಳೂರು ಹೊಂದಿದೆ.

# ಪರಿವಿಡಿ


ಪ್ರಸ್ತಾವನೆ 4
ಸ್ವೀಕಾರ 8
ಸಂದೇಶಗಳು 10
ಸಂಕ್ಷಿಪ್ತ ರೂಪಗಳು 13

1. ಸಮುದಾಯ ಆಗ್ರಹಿತ ಅಭಿವೃದ್ಧಿ ಪ್ರಕ್ರಿಯೆಗಳು 15
2. ನಂಬಿಕೆ ಮತ್ತು ಆತ್ಮ ವಿಶ್ವಾಸ ನಿರ್ಮಾಣ 28
3. ನಿಯೋಗ ಮತ್ತು ಮೌಲ್ಯಗಳ ಹಂಚಿಕಾ ಅರಿವಿನ ಅಭಿವೃದ್ಧಿ 34
4. ಸಮಂಜಸ ಹಾಗೂ ವಿಭಿನ್ನ ಗುಂಪುಗಳು ಮತ್ತು CBOಗಳ ಸ್ಥಾಪನೆ ಮತ್ತು ಕ್ರಿಯಾತ್ಮಕತೆ 40
5. ವಿಮರ್ಶಾತ್ಮಕ ಪ್ರಜ್ಞೆಯ ನಿರ್ಮಾಣ, ಮುಖಂಡತ್ವ ಮತ್ತು ಅರಿವಿನ ಅಭಿವೃದ್ಧಿ 48
6. ಸಾಮಾಜಿಕ ಸಮಸ್ಯೆಗಳ ಗುರುತಿಸುವಿಕೆ ಮತ್ತು ಶ್ರೇಣೀಕರಣ 56
7. ಕರ್ತವ್ಯ ನಿರ್ವಾಹಕರೊಂದಿಗೆ ಮಧ್ಯಂತರ, ಜೀವನೋಪಾಯ ಅವಕಾಶ ವಿಸ್ತರಣೆ 64
8. ಕ್ಷೇತ್ರ ದರ್ಶನ ಮತ್ತು ಪೂರಕ ಕಲಿಕೆ 74
9. ಕ್ರಿಯೆ–ಚಿಂತನಾ ಪ್ರಕ್ರಿಯೆ ಮತ್ತು ವ್ಯಾವಹಾರಿಕ ಪಾಠಗಳು 82
10. ಸಹಯೋಗ, ಜಾಲತಾಣ ಮತ್ತು ಪರವಾದದ ಕ್ರಿಯೆಗಳು 90
11. ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆ 98
12. ಆಚರಣೆ, ಹೊರ ನೋಟ ಮತ್ತು ಮಾನ್ಯತೆ 106
13. ಪರಿಪೋಷಕ ಸಂಸ್ಥೆಯ ಬದಲಿ ಪಾತ್ರಗಳು 112

ಉಪಸಂಹಾರ 119
ಆಯ್ದ ಗ್ರಂಥಗಳ ಪಟ್ಟಿ 123

# ಪ್ರಸ್ತಾವನೆ



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾಜಿಕ ಆಂದೋಲನಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅವುಗಳ ಮುಖಾಂತರ ಸಾಮೂಹಿಕ ಅರಿವಿನ ಗಳಿಕೆಯ ಜೊತೆಗೆ ಸಾಮೂಹಿಕ ಕೂಗು ಸದ್ದು ಮಾಡುತ್ತದೆ. ಈ ಸ್ವರ ಮಾನವ ಹಕ್ಕು, ಲೋಕ ಕಲ್ಯಾಣ ಮತ್ತು ಸಮುದಾಯದ ಹೂಡಿಕೆದಾರರ ಕಾಳಜಿಯಿಂದಲೂ ಹೊರಹೊಮ್ಮುತ್ತದೆ. ಅವರು ವಿವಿಧ ರೀತಿಯ ಪರವಾದ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಹಿಂದಿನ ೫೦ಕ್ಕೂ ಹೆಚ್ಚು ವರ್ಷಗಳಲ್ಲಿ ನಾವು ಹಲವಾರು ಸಾಮಾಜಿಕ ಸಂಚಲನ ಮತ್ತು ಬೃಹತ್ ಆಂದೋಲನಗಳಿಗೆ ಸಾಕ್ಷಿಯಾಗಿದ್ದೇವೆ. ಅವು ಅಪಾರ ಸುಧಾರಣಾ ಸಾಮರ್ಥ್ಯವನ್ನು ಹೊಂದಿದ್ದು ಪ್ರಬಲ ಸಿದ್ಧಾಂತಗಳ ಮೇಲೆ ಸವಾಲನ್ನು ಎಸೆದು ಶ್ರೀ ಸಾಮಾನ್ಯರ ಬೇಡಿಕೆಗಳನ್ನು ಮುಂದಿಟ್ಟವು. ಅವು ಯುವಜನರ, ಕಾರ್ಮಿಕರ, ಕೃಷಿಕರ, ಬುಡಕಟ್ಟು ಮತ್ತು ಅಲ್ಪಸಂಖ್ಯಾತರ, ಮಹಿಳೆಯರ ಹಾಗೂ ತೃತೀಯ ಲಿಂಗ ಸಮುದಾಯಗಳ ಕನಸು ಮತ್ತು ಅಭಿಲಾಷೆಗಳಾಗಿದ್ದವು. ಈ ಆಂದೋಲನಗಳು ಸಮುದಾಯ ಸಂಚಲನ, ಚೌಕಟ್ಟು ನಿರ್ಮಾಣ, ಸಮುದಾಯಗಳು ಮುಕ್ತವಾಗಿ ತೀರ್ಮಾನ ಕೈಗೊಳ್ಳಲು ಮುಖಂಡತ್ವ ವಹಿಸುವಲ್ಲಿ ಪ್ರಭಾವಶಾಲಿಯಾಗಿದ್ದವು. ತಮ್ಮ ತಮ್ಮ ಘಟಕಗಳಿಗೆ ಪಾರದರ್ಶಕವಾಗಿದ್ದವು. ಇಂತಹ ಸಂಘಟನೆಯ ಕೆಲಸವನ್ನು ಕೈಗೆತ್ತಿಕೊಂಡು ಸಮುದಾಯದಲ್ಲಿ ಬೇರೂರಿ ಸೇವೆ ಸಲ್ಲಿಸುವ ಸ್ವಯಂ ಸೇವಕರಿಗೆ ತರಬೇತಿ ಕೊಡುವ ಒಂದು ಕೈಪಿಡಿಯ ಬೇಡಿಕೆ ಬಹುಕಾಲದ್ದು. ಅದನ್ನು ಡಾ. ಜೋಸೆಫ್ ಕ್ಷೇವಿಯರ್‌ರವರು ಶ್ರೀಮತಿ ಶ್ರೀ ವಿದ್ಯಾ ಸಾಯಿನಾಥನ್ ಮತ್ತು ಸದಾನಂದ್ ಭಾಗ್ ಇವರುಗಳ ಸಹಕಾರದಿಂದ ಪ್ರಕಾಶಕ್ಕೆ ತಂದ "**ಸಮುದಾಯದ ಅರಿವು ಆಗ್ರಹಿತ ಅಭಿವೃದ್ಧಿ**" ಸಮುದಾಯ ಸಂಚಲನ ಕೈಪಿಡಿಯು ನೀಗಿಸಿದೆ.

**ಅಧ್ಯಾಯ ಒಂದು: ಸಮುದಾಯ ಆಧಾರಿತ ಅಭಿವೃದ್ಧಿ ಪ್ರಕ್ರಿಯೆಗಳು;** ಕೈಪಿಡಿಯ ಈ ಅಧ್ಯಾಯವು ಸಾಮಾಜಿಕ ಪರಿವರ್ತನೆಗೆ ವೇದಿಕೆಯನ್ನು ನಿರ್ಮಿಸಿ ಸಮಾಜದ ಪ್ರಜ್ಞಾಪೂರ್ವಕ ಸಚೇತನ ಕಾರ್ಯ ವೈಚಾರಿಕ ಚೌಕಟ್ಟಿನಲ್ಲಿ ಇದು ಸಾಧ್ಯವೆನ್ನುತ್ತದೆ. ಅದು ಐತಿಹಾಸಿಕ ಪ್ರಭಾವಶಾಲಿ ಅಭಿವೃದ್ಧಿ ಸಿದ್ಧಾಂತಗಳ ವೈಚಾರಿಕ ಚಿಂತನೆಯನ್ನು ಎರಡನೇ ಮಹಾಯುದ್ಧದ ನಂತರದ ಬೆಳವಣಿಗೆಯನ್ನು ನಿರೂಪಿಸುತ್ತದೆ. ಆ ಸಿದ್ಧಾಂತಗಳು ಯಾವುವೆಂದರೆ; ಪರಾವಲಂಬಿವಾದ, ಆಧುನಿಕತೆವಾದ, ಕ್ಷಣಿಕ ವಿಕಾಸವಾದ, ಸಾಮಾಜಿಕ ಅಭಿವೃದ್ಧಿವಾದ. ಸ್ವಾವಲಂಬಿ ಅಭಿವೃದ್ಧಿವಾದ ಇದು ಅಭಿವೃದ್ಧಿ ಕಾರ್ಯದ ನಾಲ್ಕು ಮಾದರಿಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತದೆ. ಆ ನಾಲ್ಕು ಮಾದರಿಗಳು ಇವು: ದಾನಧರ್ಮ ವಿಧಾನ, ಅಭಿವೃದ್ಧಿ ಮಾರ್ಗೋಪಾಯ, ಸಾಮಾಜಿಕ ಕ್ರಿಯಾ ಮಾರ್ಗೋಪಾಯ ಮತ್ತು ಮಾನವಹಕ್ಕು ವಿಧಾನ, ತಳಮೇಲು ಸಾಮಾಜಿಕ – ಸಾಂಸ್ಕೃತಿಕ ಮತ್ತು ವಿನ್ಯಾಸ ಪರಿವರ್ತನಾ ವಿಧಾನ ಹಾಗೂ ಡಾ॥ ಅಮರ್ತ್ಯಸೇನ್‌ರವರ ಸಬಲೀಕರಣ ವಿಧಾನಗಳು ಸಹಪಠ್ಯಪುಸ್ತಕದ ಚರ್ಚಾ ವಿಷಯಗಳಾಗಿವೆ.

ಇವು ಅನುಭವ ಕಲಿಕೆಯನ್ನು ಕ್ರಮಬದ್ಧ ಕಲಿಕೆಯ ಆಯಕಟ್ಟಿನ ಒಳಗೆ ತಂದಿದೆ. ಸಮುದಾಯ ಸಂಚಲನ ಪ್ರಕ್ರಿಯೆಯು ಅನಾಯಾಸವಾಗಿ ಚಿತ್ರಪಟಗಳ ಮೂಲಕ ಪ್ರಚಲಿತವಾಗಿದೆ. ಅದು ಸಮುದಾಯ ಅಭಿವೃದ್ಧಿಯ ನೈತಿಕ ಸೂತ್ರಗಳ ಉಲ್ಲಂಘನೆ, ಶೋಷಣಾ ಸಂಶೋಧನೆಯ ಅಪಾಯಗಳನ್ನು ಪ್ರತಿಬಿಂಬಿಸುತ್ತದೆ. ತಳಮೇಲು ವಿಧಾನದಲ್ಲಿ ಸಹಭಾಗಿತ್ವದೊಂದಿಗೆ ತೀರ್ಮಾನ ಕೈಗೊಳ್ಳುವಲ್ಲಿ ಪರಸ್ಪರ ಗೌರವ ಕಾಣೆಯಾದರೆ ಪರಸ್ಪರ ಏಕರೂಪದ ಆಧಾರದ ಮೇಲೆ ದೀರ್ಘಕಾಲ

ಸೇವೆ ಸಲ್ಲಿಸುವ ಕಾರ್ಯಕರ್ತರ ತಂಡ ಕಟ್ಟುವುದು ಕಷ್ಟಸಾಧ್ಯ. **ಅಧ್ಯಾಯ ಎರಡು, ನಂಬಿಕೆ ಮತ್ತು ಆತ್ಮವಿಶ್ವಾಸದ ನಿರ್ಮಾಣ,** ಪ್ರಜಾಪ್ರಭುತ್ವ, ಸಹಭಾಗಿತ್ವದ ಮಾದರಿಯಲ್ಲಿ ಸಮುದಾಯ ಸಂಚಲನ ಮಾಡುವ ವಿಧಾನ ಸಚೇತಕರಲ್ಲಿ ಸ್ವಯಂ ಪ್ರತಿಫಲನೆಯನ್ನು ಪ್ರೋತ್ಸಾಹಿಸುತ್ತದೆ.

ಸಮಾಜ ಕಾರ್ಯಕರ್ತರು ದರ್ಶನ, ದರ್ಶನ ಕ್ರಿಯೆ, ಗುರಿ ಮತ್ತು ಉದ್ದೇಶಗಳ ಬಗ್ಗೆ ಮಾರ್ಗದರ್ಶನ ಪಡೆದುಕೊಳ್ಳುವುದು ಅಗತ್ಯವಾಗಿದ್ದು ಅದರ ಮುಖಾಂತರ ಸಮುದಾಯದಲ್ಲಿ ಕೈಗೊಳ್ಳುವ ಆ ಕ್ಷಣದ ತಂತ್ರಗಳು ದೀರ್ಘಕಾಲಿಕ ಕ್ರಿಯಾ ಯೋಜನೆಯೊಂದಿಗೆ ಪರಸ್ಪರ ಹೊಂದಿಕೊಳ್ಳುವುದು ಅಗತ್ಯ. **ಅಧ್ಯಾಯ ಮೂರು, ದರ್ಶನ ಕ್ರಿಯೆ ಮತ್ತು ಮೌಲ್ಯಗಳ ಬಗ್ಗೆ ಅರಿವಿನ ಸಮಾನ ಹಂಚಿಕೆ**. ಈ ಅಧ್ಯಾಯ ಸಾಮಾನ್ಯ ಹಿತಾಸಕ್ತಿ, ಮೌಲ್ಯ ಹಾಗೂ ಸೌಹಾರ್ದ ಸಾಮಾಜಿಕ ಹೊಂದಾಣಿಕೆ, ಸಾಮಾಜಿಕ ನ್ಯಾಯ, ಅನುಕಂಪ ಮತ್ತು ಪರಿಸರದ ಬಗ್ಗೆ ಕಾಳಜಿಯಂತಹ ಗುಣಗಳನ್ನು ಕುರಿತು ಚರ್ಚಿಸುತ್ತದೆ.

ಸಮುದಾಯ ಆಧಾರಿತ ಸಂಸ್ಥೆಗಳು/ಸಮೂಹಗಳು (CBO) ಯಾವುದೇ ಕಾರ್ಯಕ್ರಮ ಅಥವಾ ಯೋಜನೆಯ ಯಶಸ್ಸಿಗೆ ಕಾರಣವಾಗಿವೆ. **ಅಧ್ಯಾಯ ನಾಲ್ಕು, ಸಮಂಜಸ ಹಾಗೂ ವಿಭಿನ್ನ ಗುಂಪುಗಳು ಮತ್ತು CBO ಗಳ ಸ್ಥಾಪನೆ**. ಈ ಅಧ್ಯಾಯ ಸಾಮಾನ್ಯ ಹಿತಾಸಕ್ತಿ, ಒಳಪಡುವಿಕೆ ಮತ್ತು ವೈವಿಧ್ಯತೆ, ವಿಸ್ತೃತ ಚಾಮರ ಸಂಸ್ಥೆಗಳ ಸ್ಥಾಪನೆಯಲ್ಲಿ ಬೇಕು ಬೇಡಗಳು, ಸಾಮಾಜಿಕ ಸೌಹಾರ್ದವಿರುವ ಎಲ್ಲೆ ಗುಂಪಾಗಿರುವವರೊಂದಿಗೆ ಸಂಬಂಧದ ಬಗ್ಗೆ ಪ್ರಸ್ಥಾಪಿಸುತ್ತದೆ.

ಸಾಮಾಜಿಕ ನ್ಯಾಯ, ಹಂಚಿಕೆಯ ನ್ಯಾಯ ಮತ್ತು ಲಿಂಗ ಆಧಾರಿತ ನ್ಯಾಯ ಸಮುದಾಯ ಕೇಂದ್ರೀಕೃತ ವಿಶ್ವರೂಪಕ್ಕೆ ಅಸ್ತಿವಾರವಾಗಿರಬೇಕು. ಈ ವಿಷಯವನ್ನು ಗಮನದಲ್ಲಿರಿಸಿಕೊಂಡು **ಅಧ್ಯಾಯ ಐದು, ವಿಮರ್ಶಾತ್ಮಕ ಜಾಗೃತಿ ನಿರ್ಮಾಣ, ಮುಖಂಡತ್ವ ಮತ್ತು ಜ್ಞಾನದ ಬೆಳವಣಿಗೆಗೆ** ಮರದ ರೂಪಕವನ್ನು ಬಳಸಿಕೊಳ್ಳುತ್ತದೆ. ಅದರ ಕಾಂಡವು ಸಮುದಾಯವಾಗಿದ್ದು ಬೇರುಗಳು ಮಹಿಳೆ, ಪುರುಷರು, ಯುವಜನರು ಮತ್ತು ಮಕ್ಕಳನ್ನು ಸಂಕೇತಿಸುತ್ತವೆ. ಅದು ವಿಮರ್ಶಾತ್ಮಕ ಜಾಗೃತಿಯ ಮುಖಾಂತರ ವಿಭಿನ್ನ ಅಸಮಾನತೆ ಭಾದಿಸಲ್ಪಟ್ಟವರು ಮತ್ತು ಪಕ್ಷಪಾತಿಗಳ ಸೂಚಿಯನ್ನಿತ್ತು ಸಮುದಾಯದ ಸಂಚಲನಕ್ಕೆ ಸವಾಲನ್ನು ಎಸೆಯುತ್ತದೆ. ಈ ಅಧ್ಯಾಯದ ಅಂತ್ಯದಲ್ಲಿ ನಿರೂಪಿಸಿದ ಒಂದು ಘಟನೆ ಹೇಗೆ ಒಂದು ಏಜೆನ್ಸಿಯು ಬಾಲಕಿ ತನ್ನ ಸೋದರಿಯ ಅಪಹರಣದ ವಿರುದ್ಧ ನಡೆಸಿದ ಹೋರಾಟವನ್ನು ಎತ್ತಿ ಹಿಡಿಯುತ್ತದೆ.

ಪರಿಣಾಮಕಾರಿ ಸಮುದಾಯ ಸಂಚಲನಕ್ಕೆ ಕೊರತೆಯ ವಿಶ್ಲೇಷಣೆ ಮತ್ತು ಕನಿಷ್ಟ ಯೋಜನೆಯ ಸಿದ್ಧತೆ ಅಗತ್ಯ. **ಅಧ್ಯಾಯ ಆರು, ಸಾಮಾಜಿಕ ಸಮಸ್ಯೆಗಳ ಗುರುತಿಸುವಿಕೆ ಮತ್ತು ಶ್ರೇಣೀಕರಣ**. ಇವು ಸಹಭಾಗಿತ್ವ ಶೋಧನೆಯ ಪ್ರಾಮುಖ್ಯತೆ ಮತ್ತು ಕ್ರಿಯಾತ್ಮಕವಾಗಲು ಸಹಾಯಕ ಸಲಕರಣೆಯ ಅವಿಶ್ವಾಸದ ಬಗ್ಗೆ ತಿಳಿಸುತ್ತದೆ. ಇಲ್ಲಿ SMART ಮಂತ್ರ ಸಂಜೀವಿನಿಯಾಗಿದೆ. ಅದು Specific (ನಿರ್ದಿಷ್ಟ), Measurable (ಮಾಪನಾರ್ಹ), Achievable (ಗುರಿಸಾಧ್ಯ), Relevant (ಸಮಂಜಸ) ಮತ್ತು Time bound (ಸಮಯೋಚಿತ) ಅಂಶಗಳನ್ನು ಒಳಗೊಂಡಿರಬೇಕು. ಇದು ಉಪಯುಕ್ತ ಸೂಚನೆಗಳನ್ನು ನೀಡುತ್ತ ಅಭ್ಯಾಸಿತರು ಒಂದೇ ಬಾರಿ ಅನೇಕ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳದಂತೆ ತಡೆಯುತ್ತದೆ. ಶ್ರೇಣೀಕರಣದ ನಂತರ ಕಾರ್ಯಮಗ್ನವಾಗುವುದು ಸಂಪನ್ಮೂಲಗಳ ಫಲಕಾರಿ ಉಪಯೋಗಕ್ಕೆ ಅತಿ ಮುಖ್ಯವಾದುದು.

ನೈಜ ಬಂಡವಾಳದ ಮೊತ್ತ, ಕಾರ್ಯಕ್ರಮಗಳು ಎದುರು ನೋಡುವುದು ಏನೆಂದರೆ ಕಾರ್ಯಕರ್ತರು ಸೂಕ್ತ ಅಧಿಕಾರಿ ಮತ್ತು ಕಛೇರಿಗಳ ಮಾಹಿತಿಯುಳ್ಳವರಾಗಿರಬೇಕು. ಅವರು ಕಾನೂನು ಮತ್ತು ಕಾನೂನು ವ್ಯವಸ್ಥೆಯ ಕಾರ್ಯವಿಧಾನ, ಮಾಹಿತಿ ಹಕ್ಕನ್ನು ಬಳಸಿಕೊಂಡು ವ್ಯವಹರಿಸಲು ಅಧಿಕಾರಿಗಳಿಗೆ ಮನವಿ ಸಲ್ಲಿಸಲು ತಿಳಿದವರಾಗಿರಬೇಕು. ಆನ್‌ಲೈನ್ ಮುಖಾಂತರ ದೂರನ್ನು ಸಲ್ಲಿಸಲು, ಕಾನೂನು ಬದ್ಧವಾಗಿ ತರ್ಕ ಮಾಡಲು, ಶಾಂತಿಯುತರಾಗಿ ಸಂಧಾನ ಮಾಡಲು, ಏಕರೂಪದಲ್ಲಿ ಪರಿಶೀಲನೆ ಮಾಡಲು ಗುಂಪುಗಳ ಸ್ಪಂದನೆ ನಿರಾಶಾದಾಯಕವಾಗಿದ್ದರೂ ಸಮಂಜತೆಯನ್ನು ಕಾಪಾಡಲು ತಿಳಿದಿರಬೇಕು. ಸಂಘರ್ಷದ ಶಮನ, ಹೊಸ ವಿಚಾರಗಳನ್ನು ಕಂಡುಕೊಂಡು ಸಾರ್ವಜನಿಕ ಹಿತಾಸಕ್ತಿಗಳನ್ನು ಸಾಮಾಜಿಕ ಮಾಧ್ಯಮ ಹಾಗೂ ವಿದ್ಯುನ್ಮಯ ಮತ್ತು ಮುದ್ರಣ ಮೂಲ ವಾಹಿನಿಗೆ ತಲುಪಿಸುವುದು; ಜೀವನಾಧಾರ ಅವಕಾಶಗಳನ್ನು ವಿಸ್ತರಿಸುವುದು ಹಾಗೂ ಸಾಮಾಜಿಕ ಸುರಕ್ಷಾ ವಿಧಾನಗಳನ್ನು ಸಾರ್ವಜನಿಕರಿಗೆ ಖಾತರಿಪಡಿಸುವುದು ಇತ್ಯಾದಿ. **ಅಧ್ಯಾಯ ಏಳು, ಕರ್ತವ್ಯ ನಿರ್ವಾಹಕರೊಂದಿಗೆ ಜೀವನೋಪಾಯ ಅವಕಾಶ ವಿಸ್ತರಣೆಯ ಮಧ್ಯಂತರ**. ಈ ಅಧ್ಯಾಯ ಅಧಿಕೃತ ಹಕ್ಕು ಮತ್ತು ಸಾಮಾಜಿಕ ಖರ್ಚು ವೆಚ್ಚಗಳ ಸಾಧಕ ಬಾಧಕಗಳ ಬಗ್ಗೆ ಚರ್ಚಿಸುತ್ತದೆ. ಈ ಚರ್ಚೆ ಸ್ಥಳೀಯ ಅಧಿಕಾರಿಗಳೊಂದಿಗೆ ವ್ಯವಹರಿಸುವಾಗ ಸ್ಥಳೀಯ ಸಂಘ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗದೆ ಅಪರಾಧ ನ್ಯಾಯ ವ್ಯವಸ್ಥೆ, ರಾಜಕೀಯ ಮತ್ತು ಸರಕಾರಿ ಆಡಳಿತ ವಿನ್ಯಾಸಗಳಿಗೂ ವಿಸ್ತರಿಸುತ್ತದೆ.

ಸಮುದಾಯ ಸಂಚಲನದ ಸದಸ್ಯರಿಗೆ ವಿವಿಧ ಯೋಜನೆ, ಕಾರ್ಯಕ್ರಮ, ಸಂಸ್ಥೆಗಳು ಮತ್ತು ಆಂದೋಲನಗಳ ಕ್ಷೇತ್ರ ದರ್ಶನ/ಭೇಟಿ ಅತೀ ಮುಖ್ಯವಾದುದು. ಇದರ ಮುಖಾಂತರ ಸದಸ್ಯರು ವಿವಿಧ ಸರಕಾರೇತರ ಸಂಸ್ಥೆಗಳ, ಪೌರ ಸಮಾಜ ಸಂಸ್ಥೆಗಳ, ಸೌಹಾರ್ದ ಸಂಚಲನಗಳ ಉತ್ತಮ ಕಾರ್ಯವೈಖರಿ ಮತ್ತು ಇತಿಮಿತಿಗಳ ಬಗ್ಗೆ ಪ್ರತ್ಯಕ್ಷ ಅನುಭವವನ್ನು ಪಡೆದುಕೊಳ್ಳಬಹುದು. ಇಲ್ಲಿ ಅವರು ಪ್ರಾದೇಶಿಕ, ರಾಷ್ಟ್ರೀಯ-ವಿಶ್ವವ್ಯಾಪಿ ಜಾಲಗಳು ವಿವಿಧ ಸಾಮಾಜಿಕ-ಸಾಂಸ್ಕೃತಿಕ ಮತ್ತು ಭೌಗೋಳಿಕ ಕಕ್ಷೆಯಲ್ಲಿ ಮಾಡುತ್ತಿರುವ ಪ್ರಯತ್ನಗಳನ್ನು ಗಮನಿಸಬಹುದು. **ಅಧ್ಯಾಯ ಎಂಟು, ಕ್ಷೇತ್ರ ದರ್ಶನ ಮತ್ತು ಪೂರಕ ಕಲಿಕೆ**. ಈ ಅಧ್ಯಾಯ ಕ್ಷೇತ್ರ ಪ್ರಾತಕ್ಷತೆಯ ಪ್ರಾಮುಖ್ಯತೆ ಮತ್ತು ಉದ್ದೇಶವನ್ನು ವಿವರಿಸುತ್ತದೆ. ಅದು ಸಮಾನ ದೃಷ್ಟಿಯವರೊಂದಿಗೆ ಚರ್ಚಿಸಿ, ಪರ್ಯಾಲೋಚಿಸಬೇಕಾದ ಅಂಶಗಳ ಬಗ್ಗೆ ವಿವರಗಳನ್ನು ನೀಡುತ್ತದೆ.

ಮೌಲ್ಯಮಾಪನ ಮತ್ತು ಕೆಲಸದ ಮೌಲ್ಯ ನಿರ್ಧಾರದ ಮಾಹಿತಿ ಕಾರ್ಯಕ್ರಮದ ಯಶಸ್ಸು ಅಥವಾ ಸೋಲಿನ ಸೂಕ್ಷ್ಮ ವಿವರಗಳಾದ ಹೇಗೆ? ಏಕೆ? ಯಾವಾಗ? ಎಂಬುದನ್ನು ತಿಳಿಸುತ್ತದೆ. ಇದು ಕಲಿಕೆಯ ಮುಖ್ಯ ವಿಷಯವಾಗಿದೆ. **ಅಧ್ಯಾಯ ಒಂಬತ್ತು, ಕ್ರಿಯೆ-ಚಿಂತನಾ ಪ್ರಕ್ರಿಯೆ ಮತ್ತು ವ್ಯಾವಹಾರಿಕ ಪಾಠಗಳು.** ಈ ಪಾಠಗಳು ಅರ್ಥಗರ್ಭಿತವಾಗಿದ್ದು ಅವುಗಳು ವಿವಿಧ ಮಾದರಿಗಳ ಬಗ್ಗೆ ಚರ್ಚಿಸುತ್ತದೆ. ಕ್ರಿಯಾ ಚಿತ್ರಪಠ (Action Charts), ಚಿಂತನೆ (Reflection), ಕಲಿಕೆ (Learning) ಮತ್ತು ರಚನಾ ಕ್ರಮ (Planning) ಇದನ್ನು ARLP ಮಾದರಿ ಎನ್ನುತ್ತಾರೆ. ಗಿಬ್ಸ್‌ನ ಪ್ರತಿಫಲನಾ ಚಕ್ರ, ವ್ಯವಸ್ಥಿತ ಉಪಕರಣ, ಇಗ್ನೇಷಿಯನ್ ಆಳ ಸಂವಾದ ಮಾದರಿಗಳ ಅಳವಡಿಕೆ "ಕ್ರಿಯೆಯ ಮುಖಾಂತರ ಕಲಿಕೆ" ವಿಧಾನದ ಮೇಲೆ ಪರಿಣಾಮ ಬೀರುತ್ತದೆ.

ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಕೆಲವು ಸಂಸ್ಥೆಗಳು ಮಾನವ ಹಕ್ಕುಗಳನ್ನು ಪೋಷಿಸುತ್ತವೆ, ಸಂರಕ್ಷಿಸುತ್ತವೆ. ಅವು ಈ ಉಲ್ಲಂಘನೆಯಿಂದ ಭಾದಿಸಲ್ಪಟ್ಟವರೊಂದಿಗೆ ಗುರುತಿಸಿಕೊಳ್ಳುತ್ತವೆ. ಜನರು ಏಕೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಅಶಕ್ತರಾಗಿದ್ದಾರೆ; ಈ ಹಕ್ಕುಗಳ ಉಲ್ಲಂಘನೆಯನ್ನು ಎದುರಿಸಲು ಮಾರ್ಗೋಪಾಯವೇನು? ಅಧಿಕಾರದ ಅಸಮಾನ ಹಂಚಿಕೆ, ಹೊಂದಿರುವ ಹಕ್ಕನ್ನು ಪ್ರಯೋಗಿಸುವಂತೆ ಭಾದಿತರನ್ನು ಬಲಪಡಿಸುವುದು, ಇಲ್ಲಿ ಕರ್ತವ್ಯ ನಿರ್ವಾಹಕರು ತಮ್ಮ ಹೊಣೆಗಾರಿಕೆಯನ್ನು ನೆರವೇರಿಸಿ ಸಹಕರಿಸುವಂತೆ ಒತ್ತಡ ತರುವುದು. ಈ ಗುರಿಯನ್ನು ತಲುಪಲು ಶ್ರೇಣೀಕರಣದ ಸೂಚಿಯಂತೆ ಕಾರ್ಯಮಗ್ನರಾಗಲು ಜಾಲತಾಣ ಮತ್ತು ಇತರ ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನಕ್ಕೆ ತರುವುದು. **ಅಧ್ಯಾಯ ಹತ್ತು, ಸಹಯೋಗ, ಜಾಲತಾಣ ಮತ್ತು ಪರವಾದದ ಕ್ರಿಯೆಗಳು**. ಇವು ಹಕ್ಕು ಮತ್ತು ಅರ್ಹತೆಯನ್ನು ಗಳಿಸಿಕೊಳ್ಳಲು ಸಮುದಾಯ ಆಧಾರಿತ ಪ್ರಕ್ರಿಯೆಗಳ ಮುಖಾಂತರ ಸಹಯೋಗಿ ಮತ್ತು ಸಂಪನ್ಮೂಲ ಸಹಪಾಠಿಗಳ ಸಹಕಾರದಿಂದ ಸಾಧ್ಯವಾಗುತ್ತದೆ.

ಸ್ವಯಂ ಸೇವಾ ಮನೋಭಾವವನ್ನು ಹುರುಪು ಆಗ್ರಹಿಸುತ್ತದೆ. ಅದು ನಮ್ಮ ಸಮಯ ಮತ್ತು ಸಾಮರ್ಥ್ಯದ ಕೊಡುಗೆಯಿಂದ ಸಮಾಜದಲ್ಲಿ ಮಹತ್ಕಾರ್ಯ ಸಾಧನೆ ಹಾಗೂ ಸಮುದಾಯದ ಪ್ರಗತಿಗೆ ಕಾರಣವಾಗುತ್ತದೆ. ಇಲ್ಲಿ ನಮ್ಮ ಸೇವಾ ನಿಯೋಗದ ಸಂಸ್ಕೃತಿ, ಭೌತಿಕ, ಭೌದಿಕ ಮತ್ತು ಮಾನವ ಸಂಪನ್ಮೂಲಗಳನ್ನು ಭರಿಸಬಲ್ಲದು. ಸಾಕಷ್ಟು ಮಾಹಿತಿ ಹಂಚಿಕೆ, ಕೌಶಲ್ಯ, ಜ್ಞಾನ, ಸುಪ್ತ ಶಕ್ತಿ, ಸಮಯದ ಜೊತೆಗೆ ಸ್ವಯಂ ಸೇವೆ ಮತ್ತು ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುವ ಉದಾರ ಮನಸ್ಸಿದ್ದರೆ ಯಾವ ಕೊರತೆಯೂ ಎದುರಾಗದು. **ಅಧ್ಯಾಯ ಹನ್ನೊಂದು, ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆ:** ಇವು ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ಮಾಡಲು, ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಪ್ರೇರಣೆಯನ್ನು ನೀಡುತ್ತವೆ. ಸ್ವಯಂ ಸೇವಾ ಪರಿಶೀಲನೆ ಮಾಡಲು ಅಗತ್ಯ ಸೂಚಿಗಳನ್ನು ನಾವು ಇಲ್ಲೇ ಕಂಡುಕೊಳ್ಳಬಹುದು.

ಸಮುದಾಯದ ಅಂತರಾತ್ಮವನ್ನು ಪುನಶ್ಚೇತನಗೊಳಿಸಲು ಆಚರಣೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅವು ಸಮುದಾಯದ ಸದಸ್ಯರನ್ನು ಪರಸ್ಪರ ಬಂಧಿಸುತ್ತವೆ. ಸಹ ಪ್ರಯಾಣಿಕರನ್ನೂ ಸಹಾನುಭೂತಿಗಳಲ್ಲೂ ಅನ್ಯೋನ್ಯತೆಯನ್ನು ಮೂಡಿಸುತ್ತದೆ. ಈ ಆಚರಣೆಗಳಲ್ಲಿ ಭಾಗವಹಿಸುವವರು ಸಂತುಷ್ಟರಾಗುವುದಲ್ಲದೆ ತಮ್ಮನ್ನು ಗುರುತಿಸಿರುವುದರಿಂದ ಸಂತೃಪ್ತರಾಗಿರುತ್ತಾರೆ. ಅಧಿಕ ಸಂಖ್ಯೆಯಲ್ಲಿ ಹಿತೈಷಿಗಳು ಸಂಭ್ರಮಕ್ಕೆ ಆಗಮಿಸುವುದರಿಂದ ಸಮುದಾಯದ ಚಟುವಟಿಕೆಗಳ ಪ್ರದರ್ಶನವಾಗುವುದರ ಜೊತೆಗೆ ಬೆಂಬಲಿಗರ ವಿಶ್ವಾಸನೀಯ ಹಾಗೂ ದೀರ್ಘಕಾಲಿಕ ನೆರವು ಸಮಷ್ಠಿ ಪ್ರಯತ್ನಕ್ಕೆ ಲಭಿಸುತ್ತದೆ.

**ಅಧ್ಯಾಯ ಹನ್ನೆರಡು, ಆಚರಣೆ, ಹೊರನೋಟ ಮತ್ತು ಮಾನ್ಯತೆ**. ಆಚರಣೆಗಳು ಸಮುದಾಯದ ಸದಸ್ಯರ ಕೊಡುಗೆಯನ್ನು ವ್ಯಕ್ತಪಡಿಸುವುದಲ್ಲದೇ ಅವರ ಪ್ರಯತ್ನ ಅವರಿಗೆ ಅಗ್ರಸ್ಥಾನವನ್ನು ಸಮಾಜದಲ್ಲಿ ಗಳಿಸಿಕೊಡುತ್ತದೆ. ಆದರೆ ಸಮಾರಂಭಗಳನ್ನು ಸಂಘಟಿಸುವಾಗ ಅವರು ತೊಡಕು, ಸವಾಲುಗಳನ್ನು ಎದುರಿಸುವಾಗ ಎಚ್ಚರಿಕೆಯ ಅನೇಕ ಪಾಠಗಳನ್ನು ಕಲಿಯುತ್ತಾರೆ.

ಸಮುದಾಯ ಸಂಚಲನದ ಮುಖ್ಯ ಉದ್ದೇಶ ಸದಸ್ಯರಲ್ಲಿ ಸಾಮರ್ಥ್ಯದ ಪ್ರಗತಿ, ಆತ್ಮವಿಶ್ವಾಸದ ಬೆಳವಣಿಗೆ, ಸ್ವಾವಲಂಬನದ ಸಬಲೀಕರಣ ಹಾಗೂ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಸ್ವ ನಿಯಂತ್ರಣ, ವೈಯಕ್ತಿಕ ಸಕ್ರಿಯತೆಯಲ್ಲಿ ವಿಕಾಸ ಮತ್ತು ಸಮುದಾಯ ಸಂಘಟನೆಯಲ್ಲಿ ಕ್ರಮಬದ್ಧತೆ.

**ಅಧ್ಯಾಯ ಹದಿಮೂರು, "ಪರಿಪೋಷಕ" ಸಂಸ್ಥೆಯ ಬದಲಿ ಪಾತ್ರ:** ಈ ಅಧ್ಯಾಯ ಪರಿಪೋಷಕ ಮಾತೃ ಸಂಸ್ಥೆ ತಾನು ಕಾರ್ಯ ನಿರ್ವಹಿಸುತ್ತಿರುವ ಸಂಘ ಸಮುದಾಯಕ್ಕೆ ತನ್ನ ಕೊಡುಗೆ, ಸಮುದಾಯ ತನ್ನ ಸ್ವಾವಲಂಬನೆಗೆ ಅಳವಡಿಸಿಕೊಂಡ ವಿಧಾನಗಳನ್ನು ನಿರೂಪಿಸುತ್ತದೆ. ಅದು ಅಭಿವೃದ್ಧಿ ಪ್ರಯತ್ನಗಳನ್ನು ಮುಂದುವರಿಸುವ ಹಾಗೂ ಅದಕ್ಕೆ ಕಾರಣಕರ್ತರಾದ ವ್ಯಕ್ತಿ ಮತ್ತು ಗುಂಪುಗಳನ್ನು ವಿಶೇಷವಾಗಿ ಗುರುತಿಸುತ್ತದೆ.

ಈ ಕೈಪಿಡಿಯು ಉಪಸಂಹಾರ ಸ್ಪಷ್ಟವಾಗಿ ನಿರೂಪಿಸುವುದು ಏನೆಂದರೆ, "ಈ ಕೈಪಿಡಿ ಸಮುದಾಯ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ತೊಡಗಿರುವ ಅಭ್ಯಾಸಿತರಿಗೆ ಸಹಪಾಠಿ" ಎಂದು ಕಲ್ಪಿಸಲಾಗಿದೆ. ಈ ಕೈಪಿಡಿ ಸಮುದಾಯದ ಸದಸ್ಯರು, ಸರಕಾರೇತರ ಸಂಸ್ಥೆಗಳ (NGO) ಸದಸ್ಯರು, ಸಚೇತಕರು, ಲೋಕೋಪಯೋಗಿಗಳು ಮತ್ತು ಪೋಷಕರಾಗಿರುವ ತರಬೇತಿದಾರರು ಸಮುದಾಯ ಅಭಿವೃದ್ಧಿಯ "ಕೇಂದ್ರ ವಾಹಕರು" ಎಂದು ಪರಿಗಣಿಸುತ್ತದೆ. ಸಮುದಾಯ ಪ್ರಗತಿಯ ವಿಧಾನದಲ್ಲಿ ನಾವು "ವಿಧಾನ ಮಾರ್ಪಾಟ"ನ್ನು ಗಮನಿಸಬಹುದು. ಹಿಂದಿನ ದಾನಧರ್ಮ ಅಥವಾ ಲೋಕೋಪಯೋಗಿ ವಿಧಾನದಿಂದ ನಾವು "ಹಕ್ಕು ಆಧಾರಿತ" ವಿಧಾನಕ್ಕೂ ನಾವು ಜಿಗಿದಿದ್ದೇವೆ. ಅಭಿವೃದ್ಧಿಯನ್ನು ಕೇವಲ ಆರ್ಥಿಕ ಬೆಳವಣಿಗೆಯೆಂದು ಸಂಕುಚಿತ ಅರ್ಥದಲ್ಲಿ ಅವಲೋಕಿಸುವುದಿಲ್ಲ. ಈ ಕೈಪಿಡಿ ಸಮಗ್ರ ಮಾನವ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಆ ಚಿಂತನೆಯಿಂದ ಮಾರ್ಗದರ್ಶಿತವಾಗಿದೆ. ಅದರಲ್ಲಿ ಶಿಕ್ಷಣ, ಆರೋಗ್ಯ, ಗೌರವಾನ್ವಿತ ಉದ್ಯೋಗ, ವ್ಯಕ್ತಿತ್ವದ ಘನತೆ, ಪೌರತ್ವ ಶೋಷಣೆ, ಮುಕ್ತ ಸ್ವಾತಂತ್ರ್ಯ, ದಬ್ಬಾಳಿಕೆ, ಅನ್ಯಾಯ ಮತ್ತು ಜೀತ ಒಳಗೊಂಡಿದೆ.

ಈ ಪುಸ್ತಕದ ಅಂತ್ಯಭಾಗದಲ್ಲಿ ನಮೂದಿಸಿರುವ ಉಪಯಕ್ತ ಗ್ರಂಥಗಳ ಪಟ್ಟಿಯಲ್ಲಿ ಸಮುದಾಯ ಅಭಿವೃದ್ಧಿಯ ಬಗ್ಗೆ ಸೂಕ್ತ ಪುಸ್ತಕ ಮತ್ತು ಲೇಖನಗಳು ಸಿದ್ಧಾಂತ ಮತ್ತು ಪದ್ಧತಿಯನ್ನು ಒಳಗೊಂಡಿವೆ.

ಈ ಕೈಪಿಡಿ ಸಾರ್ವತ್ರಿಕ ಬೇಡಿಕೆಯನ್ನು ಹೊಂದಿದೆ. ಪಕ್ಷ ಪಂಗಡಗಳಿಂದ ಜನರನ್ನು ಬಿಡಿಸಲು ಹಾಗೂ ಮಾನವ ಘನತೆಯನ್ನು ಪುನರ್‌ಸ್ಥಾಪಿಸಲು ಸಮಾಜ ಅಭಿವೃದ್ಧಿಯಲ್ಲಿ ತೊಡಗಿರುವ ಎಲ್ಲ ಸಂಘ ಸಂಸ್ಥೆ ಮತ್ತು ಸಂಘಟನೆಗಳು ಈ ಪುಸ್ತಕವನ್ನು ಪಠ್ಯಕ್ರಮ ಮತ್ತು ತರಬೇತಿಗೆ ಉಪಯುಕ್ತ ಸಾಧನವನ್ನಾಗಿ ಸ್ವೀಕರಿಸುವರು. NGO, CBOಗಳು, ಸಮಾಜ ಸೇವಾ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಅಭಿವೃದ್ಧಿ ಅಭ್ಯಾಸಿತರು ಈ ಪುಸ್ತಕವನ್ನು ಸೇವಾ ಸಂಗಾತಿಯನ್ನಾಗಿ ಸ್ವೀಕರಿಸಬಹುದು.

ನಾನು ಡಾ॥ ಜೋಸೆಫ್ ಕ್ಷೇವಿಯರ್, ಶ್ರೀಮತಿ ಶ್ರೀ ವಿದ್ಯಾ ಸಾಯಿನಾಥನ್ ಮತ್ತು ಡಾ॥ ಸದಾನಂದ್ ಭಾಗ್‌ರವರನ್ನು ಅವರ ಅವಿತರ ಕಷ್ಟ ದುಡಿಮೆಗೆ ಅಭಿನಂದಿಸುತ್ತೇನೆ. ಜೊತೆಗೆ ಕಾರಿತಾಸ್ ಜರ್ಮನಿ, ಕಾರಿತಾಸ್ ಇಂಡಿಯಾ ನವದೆಹಲಿ ಮತ್ತು ಇಂಡಿಯನ್ ಸೋಷಿಯಲ್ ಇನ್ಸ್ಟಿಟ್ಯೂಟ್, ಬೆಂಗಳೂರು ಅವರ ಸಮಯೋಚಿತ ಪ್ರಕಟಣೆಗೆ ಅವರನ್ನು ಅಭಿನಂದಿಸುತ್ತೇನೆ.

**ಡಾ॥ ವಿಭೂತಿ ಪಟೇಲ್**
**ಮಾಜಿ ಪ್ರೊಫೆಸರ್**
**ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸಾಯನ್ಸಸ್, ಮುಂಬೈ**

# ಸ್ವೀಕಾರ



ಅಭಿವೃದ್ಧಿ ಕ್ಷೇತ್ರದಲ್ಲಿ ಒಂದು ಯೋಜನೆಯ ಮೌಲ್ಯಮಾಪನ ಮತ್ತು ಅದರ ಪರಿಶೀಲನಾ ಅಭ್ಯಾಸಗಳು ಸರ್ವೇಸಾಮಾನ್ಯ. ಪ್ರತಿ ದಾನಿ ಪಾಲುಗಾರ ಹಾಗೂ ಕಾರ್ಯರೂಪಕ್ಕೆ ತರುವ ಸಂಸ್ಥೆ ಈ ಯೋಜನೆಯ ಮುಖಾಂತರ ಸಮುದಾಯದ ಜೀವನದಲ್ಲಿ ತಂದ ಬದಲಾವಣೆಯ ಬಗ್ಗೆ ತಿಳಿಯಲು ಕಾತರನಾಗಿರುತ್ತಾನೆ. ಇಂತಹ ಅಧ್ಯಯನ ಸಂಪತ್ಭರಿತ ಒಳನೋಟ ಮತ್ತು ಕಲಿಕೆಗಳನ್ನು ಹೊರತರುತ್ತದೆ. ಆದರೆ ಇಂತಹ ಒಳನೋಟಗಳು ಮತ್ತು ಅರಿವು ಇತರರೊಂದಿಗೆ ಹಂಚಿಕೊಳ್ಳುವ ಜ್ಞಾನಕೋಶಗಳಿರುವುದು ಬಹು ವಿರಳ. ಈ ಕೊರತೆಯನ್ನು ನೀಗಿಸಲು ಈ ಕೈಪಿಡಿಯು ಒಂದು ಅಪರೂಪದ ಪ್ರಯತ್ನವನ್ನು ಮಾಡಿದೆ.

ಭಾರತದಲ್ಲಿ ಕಾರಿತಾಸ್ ಜರ್ಮನಿ ಮತ್ತು ಮಿಸೆರಿಯೋರ್ ಸಂಸ್ಥೆಗಳು ಭಾದಿತ ಸಮುದಾಯ ಬೆಂಬಲಿತ ಪ್ರಕ್ರಿಯೆಗಳನ್ನು ಅನೇಕ ಧರ್ಮಕ್ಷೇತ್ರಗಳಲ್ಲಿ ಹಲವಾರು ವರ್ಷಗಳಿಂದ ಹಮ್ಮಿಕೊಳ್ಳುತ್ತಾ ಬಂದಿದೆ. ಕಾರಿತಾಸ್ ಇಂಡಿಯಾ ಇಂತಹ ಮೌಲ್ಯ ಪರಿಶೀಲನಾ ಅಧ್ಯಯನವನ್ನು ಐದು ಸ್ಥಳಗಳಲ್ಲಿ ಉಪಕ್ರಮಿಸಿತು. ಅವು ಯಾವುವೆಂದರೆ, ಮಿಸೆರಿಯೋರ್‌ದ SKC, ನವದೆಹಲಿಯ ಚೇತನಾಲಯ, ಅಹಮದಾಬಾದಿನ SXSSS, ಉಜ್ಜಯಿನಿಯ ಕೃಪಾ ಸಂಸ್ಥೆ ಮತ್ತು ಘೋರಖ್‌ಪುರದ PGSS. ಈ ಸಮುದಾಯಗಳ ಸಂಪತ್ಭರಿತ ಅನುಭವ ಮತ್ತು ಪೋಷಕ ಸಂಘಟನೆಗಳ ಆಧಾರದ ಮೇಲೆ ಒಂದು ಕೈಪಿಡಿಯನ್ನು ಸಿದ್ಧ ಮಾಡುವ ಆಲೋಚನೆಯನ್ನು ಮಾಡಲಾಯಿತು. ಈ ಕೈಪಿಡಿಯನ್ನು ಭಾರತದ ಪರಿಸರದಲ್ಲಿ ಮತ್ತು ಇತರ ಸ್ಥಳಗಳಲ್ಲಿ ಅಭಿವೃದ್ಧಿ ಸಂಚಲನ ಪ್ರಕ್ರಿಯೆಯಲ್ಲಿ ಅಭ್ಯಾಸಿತರು ಉಪಯೋಗಿಸಬಹುದೆಂದು ತೀರ್ಮಾನಿಸಲಾಯಿತು.

ಈ ಕೈಪಿಡಿಯನ್ನು ಸಿದ್ಧ ಮಾಡುವ ಸಂದರ್ಭದಲ್ಲಿ ಅನೇಕ ಹಿತೈಷಿಗಳು ನೀಡಿದ ಷರತ್ತು ರಹಿತ ಕೊಡುಗೆ ಮತ್ತು ಬೆಂಬಲವನ್ನು ಸಂತೋಷದಿಂದ ಸ್ಮರಿಸುತ್ತಾ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇದರ ಸಿದ್ಧತೆಯ ಪ್ರಾರಂಭದಿಂದ ಅಂತ್ಯದವರೆಗೂ ಕಾರಿತಾಸ್ ಜರ್ಮನಿ ಏಷಿಯ ವೇದಿಕೆಯ ಶ್ರೀ ಪೀಟರ್ ಸ್ಯೆಡಲ್, ಕಾರಿತಾಸ್ ಇಂಡಿಯಾದ ಕಾರ್ಯನಿರ್ವಾಹಕ ನಿರ್ದೇಶಕ ಫಾ॥ ಪೌಲ್ ಮೂಂಜಲಿ, ಕಾರಿತಾಸ್ ಇಂಡಿಯಾದ ಕಾರ್ಯಕ್ರಮಗಳ ಮುಖ್ಯಸ್ಥ ಶ್ರೀ ರಾಜೇಶ್ ಉಪಾಧ್ಯಾಯ ಮತ್ತು ಕಾರಿತಾಸ್ ಜರ್ಮನಿಯ ಸಲಹೆಗಾರ ಶ್ರೀ ಜೇಮ್ಸ್ ಇವರು ತಮ್ಮ ಉದಾರ ಮನಸ್ಸಿನ ಸಹಕಾರವನ್ನು ನೀಡಿರುತ್ತಾರೆ. ನಾನು ವಿಶೇಷ ವಂದನೆಗಳನ್ನು ಕಾರಿತಾಸ್ ಜರ್ಮನಿಯ ಕಾರ್ಯನಿರ್ವಾಹಕ ನಿರ್ದೇಶಕ ಪ್ರೊಫೆಸರ್ ಜೋಹಾನ್ನೆಸ್ ನಿಫ್‌ಕಿ ಮತ್ತು IGSSS ನ ಕಾರ್ಯನಿರ್ವಾಹಕ ನಿರ್ದೇಶಕ ಶ್ರೀ ಜಾನ್ ಪೀಟರ್ ನೆಲ್ಸನ್ ಅವರು ಕರಡು ಪ್ರತಿಯ ಬಗ್ಗೆ ಕೆಲವು ಸೂಕ್ಷ್ಮ ಒಳನೋಟಗಳನ್ನು ವ್ಯಕ್ತಪಡಿಸಿರುವರು, ಇವರೆಲ್ಲರಿಗೆ ನಾನು ಅಭಾರಿಯಾಗಿದ್ದೇನೆ.

ಸಮಾಜ ಸೇವಾ ಕೇಂದ್ರಗಳ ಐವರು ನಿರ್ದೇಶಕ ಫಾದರ್‌ಗಳಾದ ಫ್ರಾಂಕ್ಲಿನ್ ಮಿನೆಜಸ್, ಜಾನ್ ಬ್ರಿಟ್ಟೊ, ಐಸಕ್ ರುಮಾವೊ, ಸುನಿಲ್ ಜಾರ್ಜ್ ಮತ್ತು SXSSS ಹಿಂದಿನ ನಿರ್ದೇಶಕರಾದ ಫಾ. ರಾಜೀವ್ ಚಕ್ರನಾರಾಯಣ್ ಅವರು ಸೂಕ್ಷ್ಮ ಒಳನೋಟ ಮತ್ತು ಸಕ್ರಿಯ ಟೀಕೆಗಳನ್ನು ಹಂಚಿಕೊಂಡಿರುತ್ತಾರೆ. ಇವುಗಳಿಂದ ಬಹುಮುಖ ಆಯಾಮದ ಪ್ರಕ್ರಿಯೆಗಳ ಸವಾಲು ಮತ್ತು ಸಂತೃಪ್ತಿಯನ್ನು ನಾನು ಸವಿಯುವಂತಾಯಿತು. ಇವರೆಲ್ಲರ ಸ್ಫೂರ್ತಿದಾಯಕ ನಿರೂಪಣೆಗಳನ್ನು ಆಲಿಸುವುದು ಆನಂದದಾಯಕವಾಗಿರುತ್ತಿತ್ತು. ಇವರ ಮನವರಿಕೆ ಮತ್ತು ಸಮರ್ಪಣೆಯಿಂದ ನಾನು ಭಾವಪರವಶನಾಗಿದ್ದೇನೆ. ಈ ಸಂಸ್ಥೆಗಳ ಯೋಜನಾ ಸಂಯೋಜಕರು ಮತ್ತು ಸಿಬ್ಬಂಧಿ ವರ್ಗದವರು ಹಲವಾರು ವಿಧದಲ್ಲಿ ನನಗೆ ಸಹಾಯಕರಾಗಿದ್ದಾರೆ.

ನಾನು ಅಧ್ಯಯನ ಕ್ಷೇತ್ರಗಳ ಜನರ ಬಗ್ಗೆ ಮೆಚ್ಚುಗೆಯನ್ನು ವಿಶೇಷ ರೀತಿಯಲ್ಲಿ ವ್ಯಕ್ತಪಡಿಸುತ್ತೇನೆ. ಇವರು ಮುಕ್ತ ಮನಸ್ಸಿನಿಂದ ತಮ್ಮ ಅಭಿಪ್ರಾಯ ಮತ್ತು ಇಂಗಿತಗಳನ್ನು, ವಿಮರ್ಶಾತ್ಮಕ ಅಂಶಗಳನ್ನು ಹಂಚಿಕೊಂಡಿರುತ್ತಾರೆ. ವಿಶೇಷವಾಗಿ ನಾನು ಸಂದರ್ಶಿಸಿದ ಹಿರಿಯರು, ಧಾರ್ಮಿಕ ಮುಖಂಡರು, PRI ಸದಸ್ಯರು, ಅಂತರ್ ಜಾಲ ಸಹಪಾಠಿಗಳು, ಶಿಕ್ಷಕರು, ಸರಕಾರಿ ಅಧಿಕಾರಿಗಳು, ಗುರುಗಳು ಮತ್ತು ಧರ್ಮಾಧ್ಯಕ್ಷರುಗಳು, FGDಯ ಸಹೋದ್ಯೋಗಿಗಳು, ವ್ಯವಸ್ಥಾಪಿತ ಕಾರ್ಯಗಾರಗಳೊಂದಿಗೆ ಮಹಿಳೆಯರು, ಯುವಜನರು, ಮಕ್ಕಳು ಹಾಗೂ CBO ಗುಂಪಿನ ಸದಸ್ಯರು ಮತ್ತು ಮುಖಂಡರು ತಮ್ಮ ಅಮೂಲ್ಯ ವೈಯಕ್ತಿಕ, ಸಾಮೂಹಿಕ ಅನುಭವಗಳನ್ನು ನೀಡಿರುತ್ತಾರೆ. ಇವರಿಂದ ನಾನು ಸಮುದಾಯದ ಸಮಷ್ಠಿ ಅರಿವನ್ನು ಸೆಳೆದುಕೊಳ್ಳಲು ಶಕ್ತನಾದ್ದೇನೆ. ಇವರೆಲ್ಲರಿಗೆ ನಾನು ವಂದನೆಯನ್ನು ಸಲ್ಲಿಸುತ್ತೇನೆ.

ನಾನು ಪ್ರೊ. ವಿಭೂತಿ ಪಟೇಲ್ ಅವರ ಮನಮುಟ್ಟುವ ಮುನ್ನುಡಿಗೆ ಫಾ॥ ಪೌಲ್ ಮೂಂಜಲಿ, ಶ್ರೀಮತಿ ರೋಜ್ ಜೋಸೆಫ್ ಮತ್ತು ಶ್ರೀ ಪೀಟರ್ ಸೈಡಲ್ ಅವರಿಗೆ ಅನಂತ ನಮನಗಳನ್ನು ಸಲ್ಲಿಸುತ್ತೇನೆ. ನಾನು ಕೃಷ್ಣನಗರ ಧರ್ಮಕ್ಷೇತ್ರದ ಫಾ॥ ಪ್ರದೀಪ್ ರಾಯ್ ಅವರ ಅಭಿಪ್ರಾಯ, ಸೂಚನೆಗಳಿಗೆ ಪ್ರತ್ಯೇಕ ವಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು ಪ್ರತ್ಯೇಕವಾಗಿ ಕಾರಿತಾಸ್ ಇಂಡಿಯಾದ ಚಿತ್ರಗಾರ ಶ್ರೀ ಬಿಜೋಯ್ ಜೋಸೆಫ್, ಶ್ರೀ ಪ್ಯಾಟ್ರಿಕ್ ಹನ್ಸ್‌ಡಾ, ಪುಸ್ತಕವನ್ನು ಆಕರ್ಷಕವಾಗಿ ಪ್ರಕಾಶನಕ್ಕೆ ತಂದ ನವ ದೆಹಲಿಯ ಜ್ಯೋತಿ ಪ್ರಿಂಟರ್ಸ್‌ರವರನ್ನು ವಂದಿಸುತ್ತೇನೆ. ನನ್ನ ವಿಶೇಷ ನಮನಗಳು ಅಪರೂಪ ಚಿತ್ರಗಳನಿತ್ತ ಶ್ರೀ. ಬಿಜು ಕೆ. ಜಾರ್ಜ್, ಕರಡಚ್ಚನ್ನು ಮುದ್ರಣದವರೆಗೆ ತಿದ್ದಿ ತೀಡಿ ನೆರವಾದ ಡಾ॥ ಸದಾನಂದ್ ಭಾಗ್, ಶ್ರೀಮತಿ ಹರ್ಷಿತ ಮತ್ತು ಸುಜಾಯತ್ತುಲ್ಲಾ ಅವರಿಗೆ, ಅಂತಿಮವಾಗಿ ಈ ಕೈಪಿಡಿಯನ್ನು ಅಣಿಗೊಳಿಸಲು ಬೆಂಗಳೂರಿನ ಇಂಡಿಯನ್ ಸೋಷಿಯಲ್ ಇನ್ಸ್ಟಿಟ್ಯೂಟ್‌ನ್ನು ಗುರುತಿಸಿದ ಕಾರಿತಾಸ್ ಇಂಡಿಯಾಗೆ ನಾನು ಹೃದಯದಾಳದಿಂದ ವಂದಿಸುತ್ತೇನೆ. ಈ ಪುಸ್ತಕದಲ್ಲಿರುವ ಮಾಹಿತಿ ಸರಕಾರೇತರ ಮತ್ತು ಸಮುದಾಯ ಬೆಂಬಲಿತ ಸಂಘಟನೆಗಳಿಗೆ, ಜನ ಸಂಚಲನ, ಜನಾಧಾರಿತ ಹಿತಾಸಕ್ತಿ ಗುಂಪುಗಳಿಗೆ ಮತ್ತು ಭಾರತ ಹಾಗೂ ಜಗತ್ತಿನಾದ್ಯಂತ ಸಮುದಾಯ ಆಧಾರಿತ ಪ್ರಕ್ರಿಯೆಗಳಿಗೆ ಉಪಯುಕ್ತವೆಂದು ನಾನು ಭಾವಿಸುತ್ತೇನೆ.

**ಡಾ॥ ಜೋಸೆಫ್ ಕ್ಷೇವಿಯರ್ ಎಸ್.ಜೆ**<br>
**ನಿರ್ದೇಶಕರು: ಇಂಡಿಯನ್ ಸೋಷಿಯಲ್ ಇನ್ಸ್ಟಿಟ್ಯೂಟ್**<br>
**ಬೆಂಗಳೂರು**

# ಸಂದೇಶ



ನಲ್ಮೆಯ ಗೆಳೆಯರೇ,

"ಸಮುದಾಯದ ಅರಿವು ಆಗ್ರಹಿತ ಅಭಿವೃದ್ಧಿ" ಸಾಮಾಜಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಸಚೇತನ ಕಾರ್ಯಕ್ಕಾಗಿ ರೂಪಿಸಿರುವ ಕೈಪಿಡಿಯನ್ನು ನಿಮ್ಮ ಕರಗಳಲ್ಲಿಡಲು ನನಗೆ ಅಪಾರ ಸಂತೋಷವೆನಿಸುತ್ತದೆ.

ಕಾರಿತಾಸ್ ಇಂಡಿಯಾ ಸಚೇತನ ಕಾರ್ಯವನ್ನು "ಸಾಮಾಜಿಕ ಪರಿವರ್ತನೆಯಲ್ಲಿ ವಿಶೇಷವಾಗಿ ಬಡವರು ಮತ್ತು ಮೂಲೆಗುಂಪಾದವರನ್ನು ಗುರಿಯನ್ನಾಗಿಸಿ ಕ್ರಿಯಾ ಕೇಂದ್ರಿತ ಜಾಗೃತಿ ಪ್ರಕ್ರಿಯೆ" ಎಂದು ನಿರೂಪಿಸುತ್ತದೆ. ಇದು ಸಮಾಜದಲ್ಲಿ ಮೂಲೆಗುಂಪಾಗಿರುವ ಜನರ ಮನಸಾಕ್ಷಿಯನ್ನು ಜಾಗೃತಗೊಳಿಸುವ ಶಿಕ್ಷಣ ಕ್ರಮವಾಗಿದೆ. ಸಮಾಜದ ಶೋಷಣೆಯ ಶಕ್ತಿಗಳನ್ನು ವಿಮರ್ಶಾತ್ಮಕ ವಿಶ್ಲೇಷಣೆಯ ಮುಖಾಂತರ ವಾಸ್ತವಕ್ಕೆ ತಂದು ಈ ವರ್ಗದ ಜನರನ್ನು ಉತ್ತೇಜಿಸಿ ಅವರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಿ ಅವರಲ್ಲಿ ಪ್ರಸ್ತುತ ಸಾಮಾಜಿಕ ವಾಸ್ತವತೆಯಲ್ಲಿ ಅವರನ್ನು ಜೊತೆಗೂಡಿಸಿ ಸಂಘಟನೆಯಲ್ಲಿ ಕ್ರಿಯಾತ್ಮಕಗೊಳಿಸುವುದರಲ್ಲಿ ಅಡಗಿದೆ.

ಸಮುದಾಯದ ಸಂಚಲನವು ಕಾರಿತಾಸ್ ಇಂಡಿಯಾದ ಸಬಲ ಆದೇಶ ಮತ್ತು ಶಕ್ತಿಯಾಗಿದ್ದು ಅದು ಬಡತನ, ಮೂಲೆಗುಂಪಿನಂತಹ ಸನ್ನಿವೇಶಗಳಲ್ಲಿ ಸ್ವಯಂಚಾಲಿತ ಅಸ್ತ್ರವಾಗಿ, ವ್ಯಕ್ತಿಗಳ ಘನತೆಯನ್ನು ಸಮರ್ಥಿಸುತ್ತಾ ನ್ಯಾಯಬದ್ಧ ಸಮಾಜವನ್ನು ಸ್ಥಾಪಿಸಲು ಸಹಾಯಕವಾಗಿದೆ. ನಾವು ಕಾರಿತಾಸ್ ಜರ್ಮನಿಯ ಆಶ್ರಯದಲ್ಲಿ ಜೊತೆ ಜೊತೆಯಾಗಿ ಪಯಣಿಸುತ್ತಿದ್ದು ಸಬಲೀಕರಣ ಪ್ರಕ್ರಿಯೆಯ ಮುಖಾಂತರ ಸಮುದಾಯಗಳೊಂದಿಗೆ ಸಾಗುತ್ತಾ ಅದರ ಪರಿಸರದಲ್ಲಿ ಮಧ್ಯಸ್ತಿಕೆಯನ್ನು ವಹಿಸುತ್ತಾ, ವಿಶ್ಲೇಷಣೆ ಮಾಡುತ್ತಾ ಬಂದಿದ್ದೇವೆ.

ಈ ಸಮುದಾಯ ಬೆಂಬಲಿತ ಪಯಣದ ಭೂಮಿಕೆಯಲ್ಲಿ ನಮ್ಮ ಸ್ಥಳೀಯ ಪೂರ್ವಗಾಮಿಗಳು ತೆಗೆದುಕೊಂಡ ಉಪಕ್ರಮಗಳನ್ನು ಜೊತೆಗೂಡಿಸಿ ಈ ಪುಸ್ತಕವನ್ನು ಆವಿಷ್ಕರಿಸಲಾಗಿದೆ. ಇದು ಅನುಭವ, ಕುಶಲತೆ, ಸಂವೇದನೆ ಮತ್ತು ಅರಿವಿನ ವಿಶಿಷ್ಟತೆಯಾಗಿದೆ. ಅದನ್ನೇ ಅವರು ವಿಸ್ತೃತ ಸಾಮಾಜಿಕ ಪರಿಸರದಲ್ಲಿ ಹೂಡಿಕೆ ಮಾಡಿ ಅದಕ್ಕೆ ಅಧಿಕ ಮೌಲ್ಯವನ್ನು ಸೇರಿಸಿದ್ದಾರೆ.

ಕಾರಿತಾಸ್ ಕುಟುಂಬವು ಈ ಅಸ್ತ್ರವನ್ನು ವಿಶಾಲ ಹಾಗೂ ಪರಿಣಾಮಕಾರಿಯಾಗಿ ಸಮರ್ಪಣಾ ಭಾವದಿಂದ ಪ್ರದರ್ಶಿಸಿದೆ. ಅದನ್ನು ಸಮುದಾಯ ತರಬೇತಿದಾರರ ಮುಖಾಂತರ ವಿವಿಧ ಭಾಷೆಗಳಲ್ಲಿ ಅನುವಾದಿಸಿ ಬಳಕೆ ಮಾಡುತ್ತಾ ಬಂದಿದೆ. ಈ ಅಸ್ತ್ರವು ಸಮುದಾಯ ಸಂಚಲನ ಕಾರ್ಯದಲ್ಲಿ ಹರಿತಗೊಂಡು ಇತರ ಕೌಶಲ್ಯಗಳೊಂದಿಗೆ ಸಮ್ಮಿಳಿತಗೊಂಡು ಮಾರ್ಪಾಟಿನ ಹೊಸ ವಿಧಾನಕ್ಕೆ ಅವಕಾಶ ಮಾಡಿ ಕೊಡುತ್ತಾ ಬಂದಿರುವುದರಿಂದ ಅಧಿಕ ಸಮುದಾಯಗಳಲ್ಲಿ ಸ್ವಾಮ್ಯವನ್ನು ಸ್ಥಾಪಿಸುತ್ತಾ ಅಧಿಕ ಫಲವತ್ತತೆಗೆ ನಾಂದಿಯಾಗಬಹುದು.

ಕಾರಿತಾಸ್ ಇಂಡಿಯಾದ ಪರವಾಗಿ ಡಾ|| ಜೋಸೆಫ್ ಕ್ಷೇವಿಯರ್ ಅವರ ನೇತೃತ್ವದಲ್ಲಿ ನಮ್ಮ ಸಂಶೋಧನ ಸಹಪಾಠಿಗಳು ಆಯಾಸವರಿಯದೆ ಮಾಡಿದ ಸಾಧನೆಯನ್ನು ನಾನು ಪ್ರಶಂಸಿಸುತ್ತೇನೆ. ನನ್ನ ವಿಶೇಷ ವಂದನೆಗಳು ಕೊಲ್ಕೊತ್ತ, ಉಜ್ಜಯಿನಿ, ಅಹಮದಾಬಾದ್, ದೆಹಲಿ ಮತ್ತು ಘೋರಖ್‌ಪುರ ಧರ್ಮಕ್ಷೇತ್ರಗಳಿಗೆ ಸಲ್ಲುತ್ತವೆ. ಅವರ ನಿರಂತರ ಬೆಂಬಲದ ಫಲವಾಗಿ ಈ ಶಕ್ತಿಯುತ ಉಜ್ಜೀವನ ಮತ್ತು ಪ್ರಗತಿಯ ಸಬಲ ಸಲಕರಣೆ ಕೈಪಿಡಿಯಾಗಿ ಹೊರಹೊಮ್ಮಿದೆ.

**ಫಾ|| ಪೌಲ್ ಮೂಂಜಲಿ,**
**ಕಾರ್ಯನಿರ್ವಾಹಕ ನಿರ್ದೇಶಕರು**
**ಕಾರಿತಾಸ್ ಇಂಡಿಯಾ**

# ಸಂದೇಶ



ಸಮುದಾಯ ಸಂಚಲನದ ಬಗ್ಗೆ ಅಧ್ಯಯನ ಮಾಡಿದ ಕಾರಿತಾಸ್ ಇಂಡಿಯಾ ಮತ್ತು ಬೆಂಗಳೂರಿನ ಇಂಡಿಯನ್ ಸೋಷಿಯಲ್ ಇನ್ಸ್ಟಿಟ್ಯೂಟ್‌ಗಳನ್ನು ನಾನು ಅಭಿನಂದಿಸುತ್ತೇನೆ. ಸಮುದಾಯ ಸಂಚಲನ ಎಲ್ಲಾ ಯೋಜನೆಗಳ ಹೃದಯ ಭಾಗವಾಗಿದ್ದು ಅದು ಜನ ಜೀವನವನ್ನು ಅಸಂಖ್ಯಾತ ವಿಧಾನಗಳಿಂದ ಉತ್ತಮಗೊಳಿಸುವ ಉದ್ದೇಶವನ್ನು ಹೊಂದಿದೆ.

ಈ ಸಂಶೋಧನಾ ಪ್ರಕಿಯೆ ಮತ್ತು ಅದರ ಫಲಿತಾಂಶಗಳು ಸರಕಾರಿ ಮತ್ತು ಸರಕಾರೇತರ ಏಜೆನ್ಸಿಗಳಿಗೆ ಬಹು ಪ್ರಯೋಜನಾಕಾರಿಯಾಗಿದೆ. ಕಾರಿತಾಸ್ ಇಂಡಿಯಾ ಅಭಿವೃದ್ಧಿ ಕ್ಷೇತ್ರಕ್ಕೆ ಆಧಾರವಾಗಲೆಂದು ಈ ಕೈಪಿಡಿಯ ಸಿದ್ಧತೆಗೆ ಸಹಯೋಗ ನೀಡುತ್ತಾ ಬಂದಿದೆ. ಅದು ಪ್ರತಿ ಕಾರ್ಯಕರ್ತರಿಗೆ, ಈ ಕ್ಷೇತ್ರದಲ್ಲಿರುವವರಿಗೆ ಹಾಗೂ ಮುಂದೆ ನಿರ್ದಿಷ್ಟವಾಗಿ ಬರುವವರಿಗೆ ಉತ್ತಮ ಸಂಶೋಧನೆಯ ಮಾರ್ಗವನ್ನು ರೂಪಿಸುತ್ತಾ ಬಂದಿದೆ. ಸಮುದಾಯ ಸಂಚಲನದ ಮಾರ್ಗ ಬಹುಬಾರಿ ತುಳಿಯದ ದಾರಿಯಾಗಿರುವುದರಿಂದ ಈ ಕೈಪಿಡಿಯು ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ಪಷ್ಟ ಮಾರ್ಗದರ್ಶಿಯಾಗಿದೆ. ಸಂಸ್ಕೃತಿ ಮತ್ತು ಲೋಕಚಾರದಲ್ಲಿ ವಿಭಿನ್ನತೆ ಮತ್ತು ಗೊಂದಲವಿದ್ದರೂ ಗ್ರಂಥಕರ್ತರು ಮಾಹಿತಿಯನ್ನು ಸಂಗ್ರಹಿಸಿ ಸಲಕರಣೆಯನ್ನು ಸೃಷ್ಟಿಸುವಲ್ಲಿ ಸಫಲರಾಗಿದ್ದಾರೆ. ಈ ಅದ್ವಿತೀಯ ಅಸ್ತ್ರ ಸಮಾಜ ಸೇವಕರಿಗೆ ಅಪರೂಪದ್ದಾಗಿದ್ದು ಅವರ ಮುಂದಿನ ಸಂಶೋಧನೆಗೆ ಸಾಕ್ಷಿಯಾಗಿರುತ್ತದೆ.

ಸಮಾಜ ಸಚೇತಕರಿಗೆ ಒಂದು ನಿರ್ದಿಷ್ಟ ಗಡಿಯಿದೆ. ಅವರು ವಾಹಕನ ಆಸನದಲ್ಲಿ ಕುಳ್ಳಿತುಕೊಳ್ಳಬಾರದು ಎಂಬ ಎಚ್ಚರಿಕೆ ನೀಡಲಾಗಿದೆ. ಅದು ಸಮುದಾಯದ ಸದಸ್ಯರ ವಿಶೇಷ ಹಕ್ಕು. ಸಚೇತಕರು ಮತ್ತು ಸಂಸ್ಥೆಗಳು ಈ ಪ್ರಕ್ರಿಯೆಯಲ್ಲಿ ಕೇವಲ "ಪರಿಪೋಷಕರು" ಆಗಿರುತ್ತಾರೆ. ಸಮುದಾಯವು ಸ್ವಾವಲಂಬಿಯಾಗಿ ಪರಿವರ್ತನೆಯಾಗಬೇಕಾದರೆ ಸಮುದಾಯದ ಸದಸ್ಯರು ಈ ಆಂದೋಲನದ ಮುಂಚೂಣಿಯಲ್ಲಿರಬೇಕು.

ಈ ಕೈಪಿಡಿಯು ಸಮುದಾಯ ಸಂಚಲನವನ್ನು ನಿಚ್ಚಳವಾಗಿ ಚಿತ್ರಿಸುತ್ತದೆ. ಅದು ಕ್ರಮಿಸಬೇಕಾದ ಮಾರ್ಗಗಳು, ಉಪಯುಕ್ತ ಸೂಚಿಗಳು, ಪ್ರಯೋಜನಕಾರಿ ಎಚ್ಚರಿಕೆ, ಮಾತೃಕೆ ಸಲಕರಣೆಗಳು ಮತ್ತು ಚಿಂತನೆಗೆ ಪ್ರಶ್ನೆಗಳನ್ನು ಸರಳ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಸಮುದಾಯ ಸಂಚಲನ ಜೊತೆ ಜೊತೆಯಾಗಿ "ಸಚೇತನ"ದ ಎಳೆ ಇನ್ನೊಂದು ವಿಷಯವಾಗಿ ಪ್ರವಹಿಸುತ್ತದೆ. ಸಚೇತನ ಕಾರ್ಯ ಜನರೊಂದಿಗೆ ಮತ್ತು ಗುಂಪುಗಳೊಂದಿಗೆ ನಿಕಟವಾಗಿ ಸಹಕರಿಸುವ ಕ್ರಿಯೆಯಲ್ಲಿ ಅಡಗಿದೆ. ಫಲಾನುಭವಿಗಳು ತಮ್ಮ ಸಮುದಾಯಗಳೊಂದಿಗೆ ಸಹಭಾಗಿಗಳಾಗಿದ್ದು ಅವುಗಳನ್ನು ನಿರ್ವಹಿಸುವ ಪರಿಪೋಷಕರಾಗಿ, ಮೇಲ್ವಿಚಾರಣೆ ಮಾಡುತ್ತ ಅವುಗಳಿಗೆ ಜೀವ ತುಂಬುತ್ತ ಇರಬೇಕಾಗುತ್ತದೆ. ಅವರು ಪ್ರತಿಯೊಂದು ಕಾರ್ಯವು ಸುಗಮವಾಗಿ ಮತ್ತು ತ್ವರಿತವಾಗಿ ಗುರಿ ಸೇರುವಂತೆ ಕ್ರಿಯಾತ್ಮಕವಾಗಿರಬೇಕು. ಈ ನಿರೂಪಣೆಯ ಹಿಂದಿರುವ ಸಂದೇಶವೇನೆಂದರೆ, ಸಮುದಾಯದ ಅರಿವು ಪ್ರತಿಯೊಬ್ಬ ವ್ಯಕ್ತಿಯ ಪೌರತ್ವ ಉನ್ನತಿಗೇರಿ ಸಮುದಾಯ ಮನವರಿಕೆಯು ಮೂಲೆಗುಂಪಾದವರ ಬಾಳನ್ನು ಉತ್ತಮಗೊಳಿಸುವುದರಲ್ಲಿ ಮಗ್ನವಾಗಬೇಕು.

ಸಮುದಾಯ ಸಂಚಲನದ ಬಗ್ಗೆ ಈ ಕೈಪಿಡಿಯು ಪರಿಣಾಮಕಾರಿ ಸಲಕರಣೆಯಾಗಿದ್ದು ಇದನ್ನು ಕ್ಷೇತ್ರ ಸಚೇತಕರು, ಸಿಬ್ಬಂದಿ ಮತ್ತು NGO ಅಥವಾ CSO ಸ್ವಯಂ ಸೇವಕರು ಮುಂದೆ ಉಗಮಿಸಲಿರುವ ಸಮುದಾಯ ಮುಖಂಡರು ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿರುವ ಇತರೆ ವ್ಯಕ್ತಿಗಳು ಬಳಸಬಹುದಾಗಿದೆ.

**ಶ್ರೀಮತಿ ರೋಜ್ ಜೋಸೆಫ್**
**ನಿರ್ದೇಶಕ ಮಂಡಳಿಯ ಸದಸ್ಯರು**
**ಕಾರಿತಾಸ್ ಇಂಡಿಯಾ**

# ಸಂದೇಶ



"ನಾವು ಒಂಟಿಯಾಗಿ ಕನಸು ಕಂಡರೆ ಅದು ಕನಸಾಗಿಯೇ ಇರುತ್ತದೆ. ಆದರೆ ಬಹುಜನರು ಜೊತೆಯಾಗಿ ಕಂಡರೆ, ಅದು ಹೊಸ ವಾಸ್ತವತೆಗೆ ನಾಂದಿಯಗುತ್ತದೆ"

**ಡಾಮ್ ಹೆಲ್ಡೆರ್ ಕಾಮೆರ, ರೈಸೆಪ್/ಬ್ರೆಜಿಲ್‌ನ ಮಹಾಧರ್ಮಾಧ್ಯಕ್ಷರು**
**ಫ್ರಿಡನ್ಸ್ ರೈಷ್ ಹುಂಡೆರ್ಟ್ ವಾಸನ್/ಆಷ್ಟ್ರಿಯಾದ ಕಲಾಕಾರ**

ಜನರನ್ನು ಸಚೇತನ, ಸಂಚಲನಗೊಳಿಸಿದಾಗ ಅವರು ಪರ್ಯಾಲೋಚಿಸುತ್ತಾರೆ, ವಿಮರ್ಶಿಸುತ್ತಾರೆ, ಕನವರಿಸುತ್ತಾರೆ ಮತ್ತು ಕ್ರಿಯಾತ್ಮಕರಾಗುತ್ತಾರೆ ಈ ಪ್ರಕ್ರಿಯೆಗಳ ಸಮಾಜ ಸೇವೆಯ ಪ್ರಮುಖ ಅಂಶಗಳು ಹೊಸ ಸಾಮಾಜಿಕ ಸಂಪರ್ಕ ಸಂಬಂಧಗಳನ್ನು ಸೃಷ್ಟಿಸುವುದು, ಹೊಸ ಬಗೆಯ ಸಂಸ್ಥೆಗಳನ್ನು ಬೆಂಬಲಿಸುವುದು, ಜಾಲತಾಣ, ಹೊಸ ಸಾಂಸ್ಕೃತಿಕ ನಂಬಿಕೆ ಮತ್ತು ಸಹಕಾರವನ್ನು ಪೋಷಿಸುವುದರಿಂದ ಅಪಾರ ಸಂಪನ್ಮೂಲವನ್ನು ಕ್ರೋಡೀಕರಿಸಬಹುದು. ಕಾರಿತಾಸ್‌ನಂಥಹ ಸಾಮಾಜಿಕ ಸಂಸ್ಥೆಗಳಲ್ಲಿ ಸೌಹಾರ್ದವನ್ನು ಪೋಷಿಸುವ ಪ್ರಮುಖ ಕಾರ್ಯವನ್ನು ಮಾಡಲಾಗುತ್ತಿದೆ.

ಈ ಪ್ರಕಾಶನ ವಾಸ್ತವ ಅನುಭವ ಆಧಾರಿತವಾಗಿದ್ದು ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಮತ್ತು ವ್ಯವಸ್ಥಾಪಕರು ತಮ್ಮ ಕಾರ್ಯಕ್ರಮಗಳ ಕ್ರಿಯಾ ವಿಧಾನದ ಅರಿವು ಮತ್ತು ಅಸ್ತ್ರಗಳನ್ನು ಗಣನೀಯವಾಗಿ ಅಭಿವೃದ್ಧಿಪಡಿಸಿಕೊಳ್ಳುತ್ತಾ ಅತೀ ಶಿಥಿಲವಾದ ಸನ್ನಿವೇಶಗಳಲ್ಲಿ ಸಹಕಾರವನ್ನು ಪೋಷಿಸಬಹುದು: ನಾವು ವೈವಿಧ್ಯತೆಯ ಜನರನ್ನು ಗುಂಪುಗಳನ್ನಾಗಿ ಸಂಘಟಿಸಲೂ ಆದರ್ಶ ಪೌರರನ್ನಾಗಿಸಲೂ ಯಾವ ಸಿದ್ಧತೆ ಮಾಡುತ್ತೇವೆ? ಅವರನ್ನು ಯಶಸ್ವಿಯಾಗಿ ಪರಿವರ್ತಿಸಿ ಜಂಟಿ ಕಾರ್ಯಕ್ರಮಗಳನ್ನು ಹೇಗೆ ಹಮ್ಮಿಕೊಳ್ಳಬಹುದು? "ಹಂಚಿಕೆಯ ಸಮುದಾಯ"ಗಳನ್ನು ಸಹಕಾರದ ಸಂಸ್ಕೃತಿಗೆ ಅವರನ್ನು ಪರಿಣಾಮಕಾರಿಯಾಗಿ ಉತ್ತೇಜಿಸುವುದು ಹೇಗೆ? ನಾವು ವ್ಯಾವಹಾರಿಕವಾಗಿ ಸಾಂಸ್ಥಿಕ ಪ್ರಕ್ರಿಯೆಗಳನ್ನೂ ಜಾಲತಾಣಗಳನ್ನೂ ಕೇವಲ ಬಾಯಿ ಮಾತಿನಿಂದ ಅಥವಾ ಸಿದ್ಧಾಂತಗಳ ಬಿತ್ತರಿಕೆಯಿಂದ ಪೋಷಿಸುತ್ತೇವೆಯೇ?

ಭಾರತದಲ್ಲಿ ಶ್ರಮದಾನ ಸಾಂಪ್ರದಾಯಿಕ ಸಾಂಸ್ಕೃತಿಕ ಸಹಕಾರದ ಪ್ರಕ್ರಿಯೆಯಾಗಿದ್ದು ಅದು ಎಲ್ಲಾ ಜನರನ್ನು ಒಂದುಗೂಡಿಸಿ ಸಾಮಾನ್ಯ ಗುರಿಯನ್ನು ಗುರುತಿಸಲೂ ಅದನ್ನು ಅನುಷ್ಠಾನಕ್ಕೆ ತರಲೂ ಸಹಾಯಕವಾಗಿದೆ. ಸಚೇತನ ಕಾರ್ಯದ ಸಬಲೀಕರಣ ಮತ್ತು ಸಮುದಾಯ ಸಂಚಲನದಂಥಹ ವಿಧಾನಗಳು ಕೋವಿಡ್ – ೧೯ ನಂತಹ ಜಾಗತಿಕ ಪಿಡುಗಿನ ಸವಾಲನ್ನು ಎದುರಿಸಲು ಅತ್ಯಗತ್ಯ ಎನಿಸುತ್ತದೆ.

ನಾವು ಕಾರಿತಾಸ್ ಇಂಡಿಯಾ ಮತ್ತು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟನ್ನು ಈ ಪುಸ್ತಕದ ಪ್ರಕಾಶನಕ್ಕಾಗಿ ಅಭಿನಂದಿಸುತ್ತೇವೆ. ಇದು ದಕ್ಷಿಣ ಭಾರತದ ವ್ಯಾಪಕ ಆಯಾಮದ ಸಭಿಕರಿಗೆ ಪ್ರಯೋಜನಕಾರಿ ಎಂದು ಭಾವಿಸುತ್ತೇವೆ.

ನಾವು ಜರ್ಮನಿಯ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಚಿವಾಲಯವನ್ನು ವಿವಿಧ ಕಾರ್ಯಕ್ರಮಗಳಿಗೆ ಹಾಗೂ ವಿಶ್ಲೇಷಣಾ ಅಧ್ಯಯನ ಮತ್ತು ಈ ಕೈಪಿಡಿಗೆ ನೀಡಿದ ಆರ್ಥಿಕ ನೆರವಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

**ಪೀಟರ್ ಸೈಡಲ್**
**ವೇದಿಕೆ ಅಧಿಕಾರಿ, ಕಾರಿತಾಸ್ ಜರ್ಮನಿ**

# Abbreviations

| | |
|---|---|
| ARLP | Action, Reflection, Learning and Planning / ಕ್ರಿಯೆ, ಚಿಂತನೆ, ಕಲಿಕೆ ಮತ್ತು ಯೋಜನೆ |
| BED | Bachelor of Education / ಶಿಕ್ಷಣ ಶಾಸ್ತ್ರಜ್ಞ |
| BPL | Below Poverty Line / ಬಡತನ ರೇಖೆಯಡಿ |
| CBO | Community Based Organization / ಸಮುದಾಯ ಆಧಾರಿತ ಸಂಸ್ಥೆ |
| CBR | Community Based Rehabilitation / ಸಮುದಾಯ ಆಧಾರಿತ ಪುನರ್ವಸತಿ |
| CD | Community Development / ಸಮುದಾಯ ಅಭಿವೃದ್ಧಿ |
| CM | Community Mobilization / ಸಮುದಾಯ ಸಂಚಲನ |
| CO | Community Organization / ಸಮುದಾಯ ಸಂಘಟನೆ (ಸಂಸ್ಥೆ) |
| CSR | Corporate Social Responsibility / ಸಂಯುಕ್ತ ಸಾಮಾಜಿಕ ಹೊಣೆಗಾರಿಕೆ |
| DPO | Disability People's Organization / ವಿಕಲ ಚೇತನರ ಸಂಘಟನೆ |
| HR | Human Resources / ಮಾನವ ಸಂಪನ್ಮೂಲ |
| IEC | Information, Education and Communication / ಮಾಹಿತಿ, ಶಿಕ್ಷಣ ಮತ್ತು ಸಂವಹನ |
| KSWS | Kripa Social Welfare Society / ಕೃಪಾ ಸಮಾಜ ಸೇವಾ ಸಂಸ್ಥೆ |
| NGO | Non-Government Organization / ಸರ್ಕಾರೇತರ ಸಂಘಟನೆ (ಸಂಸ್ಥೆ) |
| PANEL | Participation, Accountability, Nondiscrimination and Equality<br>ಸಹಭಾಗಿತ್ವ, ಉತ್ತರದಾಯಿತ್ವ, ತಾರತಮ್ಯರಹಿತ ಮತ್ತು ಸಮಾನ |
| PGSS | Purvanchal Gramin Seva Samiti / ಪೂರ್ವಾಂಚಲ್ ಗ್ರಾಮೀಣ ಸೇವಾ ಸಮಿತಿ |
| PLA | Participatory Learning and Action / ಸಹಭಾಗಿತ್ವ ಕಲಿಕೆ ಮತ್ತು ಕ್ರಿಯೆ |
| PRA | Particiapatory Rural Appraisal / ಸಹಭಾಗಿತ್ವ ಗ್ರಾಮೀಣ ಅಂದಾಜು |
| PWD | People with Disability / ಅಂಗವಿಕಲರು, ವಿಭಿನ್ನಚೇತನರು |
| RTI | Right to Information / ಮಾಹಿತಿ ಹಕ್ಕು |
| SHG | Self Help Group / ಸ್ವ ಸಹಾಯ ಗುಂಪು |
| SKC | Seva Kendra Calcutta / ಸೇವಾ ಕೇಂದ್ರ ಕೊಲ್ಕೊತ್ತ |
| SMART | Specific, Measurable, Achievable, Realistic and Time bound<br>ನಿರ್ದಿಷ್ಟ, ಮಾಪನಾರ್ಹ, ಗುರಿಸಾಧ್ಯ, ಸಮಂಜಸ ಮತ್ತು ಸಮಯೋಚಿತ |
| SXSSS | St. Xavier's Social Service Society / ಸ್ಯೆಂಟ್ ಕ್ಷೇವಿಯರ್ ಸಮಾಜ ಸೇವಾ ಸಂಸ್ಥೆ |
| UNTERN | United Nations Terminology Database<br>ಸಂಯುಕ್ತ ರಾಷ್ಟ್ರಗಳ ಅಂತಿಮ ಅಂಕಿ ಅಂಶ ಮಾಹಿತಿ |

CHAPTER 1

# ಸಮುದಾಯ ಆಗ್ರಹಿತ ಅಭಿವೃದ್ಧಿ ಪ್ರಕ್ರಿಯೆಗಳು



# ಸಮುದಾಯ ಆಗ್ರಹಿತ ಅಭಿವೃದ್ಧಿ ಪ್ರಕ್ರಿಯೆ

## ಪ್ರಸ್ತಾವನೆ

## ಸಮುದಾಯ ಮತ್ತು ಸಮುದಾಯ ಅಭಿವೃದ್ಧಿ

ಸಮುದಾಯದ ಬಗ್ಗೆ ಪರಿಚಿತ ಹೇಳಿಕೆ ಇದು: ಒಂದು ಪ್ರತ್ಯೇಕ ಸ್ಥಳದಲ್ಲಿ ವಾಸಿಸುವ ಜನರು ತಮ್ಮನ್ನೇ ಒಂದು ಘಟಕವನ್ನಾಗಿ ಪರಿಗಣಿಸುತ್ತಾ ತಮ್ಮ ಹಿತಾಸಕ್ತಿ, ಅಭಿಲಾಷೆಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಾರೆ. ಇವರು ತಮ್ಮ ಬಗ್ಗೆ ನಿರ್ಲಿಪ್ತ ಅಥವಾ ಬೇರ್ಪಡುವ ಮನೋಭಾವವನ್ನು ಇಟ್ಟುಕೊಳ್ಳದೆ ಸಶಕ್ತರಾಗಿ ತಮ್ಮ ಜೀವನದಲ್ಲಿ ಆಶಾಭರಿತರಾಗಿ ಪ್ರಗತಿಯತ್ತ ಸಾಗುತ್ತಾರೆ. ಸಮುದಾಯ ಪರಸ್ಪರರ ಬಗ್ಗೆ ಕಾಳಜಿಯುಳ್ಳ ಗುಂಪುಗಳಾಗಿದ್ದು ಅವರೆಲ್ಲರೂ ಒಂದೇ ಸಾಮಾನ್ಯ ಹಿತ್ತಾಸಕ್ತಿಯುಳ್ಳವರಾಗಿದ್ದು ಒಂದೇ ಗುರಿಯನ್ನು ಜೊತೆಯಾಗಿ ಸಾಧಿಸುವ ಸಂಕಲ್ಪ ಹೊಂದಿರುತ್ತಾರೆ. ಆದರೂ ಭಾರತೀಯ ಸಮಾಜದಲ್ಲಿ ನಾವು ಪಾರಂಪರಿಕವಾಗಿ ವರ್ಗೀಕರಣವನ್ನು ಗುರುತಿಸಬಹುದು. ಜಾತಿ: ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಮತ್ತು ದಲಿತ. ಜನಾಂಗ: ಸಂತಾಲ್, ಒರಾನ್, ಮುಂಡ ಅಥವಾ ಬಿಲ್ಲ ಎಂಬ ಆದಿವಾಸಿಗಳು. ಧರ್ಮ: ಹಿಂದು, ಮುಸ್ಲಿಂ, ಕ್ರೈಸ್ತ ಅಥವಾ ಬೌದ್ಧ. ಭಾಷೆ: ಬೆಂಗಾಲಿ, ತಮಿಳು, ಮಲಯಾಳ ಅಥವಾ ಮರಾಠಿ. ಭೌಗೋಳಿಕ: ಹೊಲಗೇರಿ, ಕೊಳಚೆ ಪ್ರದೇಶ, ಜಾತಿ ಆಧಾರಿತ ಕಾಲೋನಿ. ಇಲ್ಲಿ ಕೀಳು ಜಾತಿಯವರೆಂದು ಪರಿಗಣಿತವಾದ ಪ್ರತ್ಯೇಕ ಹಳ್ಳಿಗಳೂ ಇರುತ್ತವೆ. ರಾಷ್ಟ್ರೀಯತೆ: ಶ್ರೀಲಂಕನ್ನರು, ಬಾಂಗ್ಲಾದೇಶಿಯರು. ಇಂತಹ ವ್ಯತ್ಯಾಸವಿರುವ ಜನರು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಸಾಕಷ್ಟು ನಿರ್ಬಂಧಗಳಿರುತ್ತವೆ. ಅವರ ಮಧ್ಯೆ ಹೊಕ್ಕುಬಳಕೆ ಇರುವುದಿಲ್ಲ. ಅಂತಿಮವಾಗಿ ಇಂತಹ ಅನಾರೋಗ್ಯಕರ, ಶ್ರೇಣಿಯುತ, ಬಹಿಷ್ಕೃತ, ತಾರತಮ್ಯದ ವಾತಾವರಣ ವ್ಯಕ್ತಿತ್ವ ವಿಕಸನಕ್ಕೆ ತೊಡಕುಂಟು ಮಾಡಿದೆ. ಸಮುದಾಯ ಅಭಿವೃದ್ಧಿ ಅಥವಾ ಸಮುದಾಯ ಸಂಚಲನದ ಪ್ರಮುಖ ಸೂತ್ರವೇನೆಂದರೆ

ಸಮುದಾಯದ ಬಗ್ಗೆ ಇರುವ ಇಂತಹ ಮನೋಭಾವವನ್ನು ನಿರ್ಮೂಲನ ಮಾಡುವುದು. ಸಮುದಾಯದಲ್ಲಿ ಜನರು ಪರಸ್ಪರ ಸಂಬಂಧಿತರು ಅಥವಾ ಸಮಾನ ಹಿತಾಸಕ್ತಿ, ಮೌಲ್ಯವುಳ್ಳವರಾಗಿದ್ದು ಮಾನವ ಹಕ್ಕಿನ ವಿಧಿ ನಿಯಮಗಳಿಗೆ ಬದ್ಧರಾಗಿ ಸಮಾನ ಅಭಿಲಾಷೆಗಳೊಂದಿಗೆ ಒಂದಾಗಿ ಬಾಳುವುದು. ಅವರೆಲ್ಲರು ಸಾಮೂಹಿಕ ಕೆಲಸ ಕಾರ್ಯಗಳಿಗೆ ಮುಕ್ತರಾಗಿ ಮಾನವ ಘನತೆಯಿಂದ ಒಬ್ಬರ ಅಥವಾ ಸರ್ವರ ಸಮಗ್ರ ಅಭಿವೃದ್ಧಿಗೆ ಬದ್ಧರಾಗಿರಬೇಕು.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನಾವು ನಮ್ಮ ಸಮುದಾಯವನ್ನು ಈ ದೃಷ್ಟಿಕೋನದಿಂದ ವೀಕ್ಷಿಸಬೇಕು. ಸಮುದಾಯ ಎಂದಾಕ್ಷಣ ಅದು ಶ್ರೀಮಂತ–ಬಡವ, ಜಾತಿ ಅಥವಾ ಧರ್ಮ ಎಂಬ ಸಾಮಾಜಿಕ–ವಿನ್ಯಾಸದಿಂದ ರೂಪಿತವಾಗುವುದಿಲ್ಲ. ಸಮುದಾಯದಲ್ಲಿ ಸಂಸ್ಕೃತಿಯೊಂದಿಗೆ ಬಂಧಿಸಲ್ಪಡುವಂತಹ ಅಂಗ ಅಥವಾ ಜನಾಂಗದ ಆಯಕಟ್ಟು ಇರುವುದಿಲ್ಲ. ಇದಕ್ಕೆ ಪ್ರತಿಯಾಗಿ ಸಮುದಾಯದಲ್ಲಿ ಒಬ್ಬನಾದರೂ ಸಾಮಾಜಿಕ ಕ್ರಿಯಾಶೀಲ ವ್ಯಕ್ತಿಯಿದ್ದು ಅವನು ಒಂದಾದರೂ ಸಾಮಾಜಿಕ ಕ್ರಿಯೆಯನ್ನು ಸಮಾಜದ ಸಾಮಾನ್ಯ ಗುರಿಯನ್ನು ಕೈಗೊಂಡು ಈಡೇರಿಸುತ್ತಾನೆ (ಸ್ಟ್ರಾವ್ಸ್ ೧೯೭೮). ಹೀಗೆ ಸಮುದಾಯ ಒಂದು ಸಂಬಂಧಿತ ವಾಸ್ತವತೆಯಾಗಿದೆ. ಸಮುದಾಯಿಕ ಸಂಘಟನೆ ಅಥವಾ ಸಂಚಲನ ಸಂಬಂಧಗಳ ಜಾಲತಾಣವನ್ನು ತನ್ನಲ್ಲೇ ಪೋಷಿಸುತ್ತದೆ ಅಥವಾ ಅದು ಅನೇಕ ಸಾಮಾನ್ಯ ವಿಭಾಗಗಳನ್ನು ಹೊಂದಿರುತ್ತದೆ. ನಾವು ಒಂದು ಪ್ರಕ್ರಿಯೆಯ ಬಗ್ಗೆ ಮಾತನಾಡುವಾಗ ಈ ಅರ್ಥವನ್ನೇ ಹೊಂದಿರುತ್ತದೆ. ಸಮುದಾಯ ನಿರ್ಮಾಣವೆಂದರೆ ಅದು ಮುಂದುವರಿದ ಕ್ರಿಯೆಯಾಗಿದ್ದು ಅದರಲ್ಲಿ ಸಾಮಾನ್ಯ ಗುರಿಯನ್ನು ಸಾಧಿಸಲು ಪರಸ್ಪರರೊಂದಿಗೆ ಸಾಮಾನ್ಯ ಅರಿವನ್ನು ಹಂಚಿಕೊಳ್ಳುತ್ತಾ ಕೆಲವು ವಿಧಿನಿಯಮಗಳನ್ನು ವಿಚಾರ ವಿನಿಮಯದ ಮುಖಾಂತರ ಒಪ್ಪಿಕೊಳ್ಳುವುದಾಗಿದೆ.

ಸಮುದಾಯ ಅಭಿವೃದ್ಧಿ (CD), ಸಮುದಾಯ ಸಂಚಲನ (CM), ಅಥವಾ ಸಮುದಾಯ ಸಂಘಟನೆ (CO) ಪದಗಳನ್ನು ಪರ್ಯಾಯವಾಗಿ ಬಳಸಬಹುದು. ಸಂಯುಕ್ತ ರಾಷ್ಟ್ರಗಳ ಟರ್ಮಿನಾಲೊಜಿ ಡೇಟಾಬೇಸ್ (UNTERM) ಸಮುದಾಯ ಅಭಿವೃದ್ಧಿಯನ್ನು "ಸಮುದಾಯದ ಸದಸ್ಯರು ಸಾಮೂಹಿಕ ಕಾರ್ಯಕ್ಕಾಗಿ ಒಂದಾಗಿ ಬಂದು ಸಾಮಾನ್ಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು" ಎನ್ನುತ್ತದೆ. CD, CM ಅಥವಾ COಗಳು ಪ್ರಥಮತ: ಮುಂದುವರಿದ ಪ್ರಕ್ರಿಯೆಗಳು. ಅವು ಸಾಮಾನ್ಯ ಹಿತಾಸಕ್ತಿ ಮತ್ತು ಸಾಮಾನ್ಯ ಉದ್ದೇಶವನ್ನು ಹೊಂದಿದ್ದು ಸಮುದಾಯದ ಎಲ್ಲಾ ಸದಸ್ಯರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯುಳ್ಳದ್ದಾಗಿರುತ್ತದೆ.

ಸಮುದಾಯ ಅಭಿವೃದ್ಧಿ ಸಮಗ್ರ ವಿಕಾಸವಾಗಿದ್ದು ಅದು ಸಬಲೀಕರಣ, ಮಾನವ ಹಕ್ಕು, ಸರ್ವಾವೃತ, ಸಾಮಾಜಿಕ ನ್ಯಾಯ, ಸ್ವ ನಿರ್ಣಾಯಕ ಮತ್ತು ಸಾಂಘಿಕ ಕ್ರಿಯೆಯಲ್ಲಿ ಅಡಕವಾಗಿದೆ (ಕೆವ್ನಿ ೨೦೦೭). ಸಮುದಾಯ ಪ್ರಗತಿ ಕಾರ್ಯದಲ್ಲಿ ಸಮುದಾಯದ ಸದಸ್ಯರು ತಮ್ಮ ಮತ್ತು ಸಮುದಾಯದ ಜೀವನದ ಬಗ್ಗೆ ಪರಿಣತರಾಗಿದ್ದುದರಿಂದ ಸಮುದಾಯದ ಅರಿವು ಮತ್ತು ಸುಜ್ಞಾನವನ್ನು ಗೌರವಿಸುತ್ತಾರೆ. ಇಂತಹ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎಲ್ಲಾ ಹಂತಗಳಲ್ಲೂ ಅದರ ಸದಸ್ಯರಿಂದಲೇ ನಿರ್ವಹಿಸಬೇಕಾಗುತ್ತದೆ. ಅವರೇ ವಿಷಯಗಳನ್ನು ಆಯ್ಕೆ ಮಾಡಿ ಕಾರ್ಯಗತ ಮಾಡುವ ವಿಧಾನಗಳನ್ನು ನಿರ್ಧರಿಸುತ್ತಾರೆ. ಸಮುದಾಯ ಅಭಿವೃದ್ಧಿ ಕಾರ್ಯಕ್ಕೆ ನಿರ್ದಿಷ್ಟ ಗುರುತ್ವವಿರುವುದರಿಂದ ಅಸಮಾನತೆ ಮತ್ತು ತೊಡಕುಗಳನ್ನು ಅಧಿಕಾರದ ಮರು ಹಂಚಿಕೆಯಿಂದ ನಿವಾರಿಸಬಹುದು (https://aifs.gov.au/cfca/publications/what-community-development).

ಈ ಅಭಿವೃದ್ಧಿ ಕಾರ್ಯದ ಸಂದರ್ಭದಲ್ಲಿ ಅದರ ಉಸ್ತುವಾರಿ, ಅನುಷ್ಠಾನ, ನಿರ್ದಿಷ್ಟತೆ ಸಮುದಾಯದ ಸದಸ್ಯರ ಹೊಣೆಗಾರಿಕೆಯಾಗಿದೆ. ಅವರೇ ಆಂತರಿಕ ಹಾಗೂ ಬಾಹ್ಯ ಸಂಪನ್ಮೂಲಗಳನ್ನು ಜೊತೆಯಾಗಿ ಸಂಗ್ರಹಿಸುವರು. ಅಂದರೆ ಈ ಕಾರ್ಯಕ್ರಮ ಸಮುದಾಯದಿಂದ ತೀರ್ಮಾನಿಸಲಾಗಿ ಅವರಿಂದಲೇ ಅನುಷ್ಠಾನಕ್ಕೆ ಬರಬೇಕು. NGOಗಳು ಅಥವಾ ಸೇವೆ ನೀಡುವ ಸಂಸ್ಥೆಗಳು ಈ ಪ್ರಕ್ರಿಯೆಯಲ್ಲಿ ತೊಡಗಿದ್ದರೂ ಅವರನ್ನು "ಪರಿಪೋಷಕ" ಸಂಸ್ಥೆ ಎಂದೂ ಅವುಗಳ ಸಿಬ್ಬಂದಿಯನ್ನು "ಸಮುದಾಯ ಸಂಚಲನ ಅಭ್ಯಾಸಿತರು" ಎಂದು ನಮೂದಿಸಲಾಗುವುದು. ಈ ಸಂಸ್ಥೆ ಅಥವಾ ಸಿಬ್ಬಂದಿ ಸಮುದಾಯ ಸಂಚಲನದ ಮಾಲೀಕರಲ್ಲ. ಆದುದರಿಂದ ಅವರು ಸಮುದಾಯದ ಪರ ತೀರ್ಮಾನ ಕೈಗೊಳ್ಳುವಂತಿಲ್ಲ

ಅಭಿವೃದ್ಧಿ ಕ್ಷೇತ್ರದಲ್ಲಿ ಸಮುದಾಯ ಸಂಚಲನ ಎಂಬ ಪದವನ್ನು ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಕೆಲವು ಸಂಸ್ಥೆಗಳು ಹೀಗೆನ್ನುತ್ತವೆ "ಸಮುದಾಯದ ಸದಸ್ಯರಲ್ಲದಿದ್ದರೂ ಅಧಿಕ ಸಂಖ್ಯಾತರು ತಮ್ಮಲ್ಲಿರುವ ತಾರತಮ್ಯವನ್ನು ಬದಿಗಿಟ್ಟು ಸಮಾನ ಷರತ್ತುಗಳೊಂದಿಗೆ ಸಮುದಾಯದ ಸದಸ್ಯರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಸಹಭಾಗಿತ್ವದ ತೀರ್ಮಾನವನ್ನು ತೆಗೆದುಕೊಂಡು ಸಮಜಾಯಿಸುವುದರಲ್ಲಿ ತೊಡಕಿಲ್ಲ."

ಭಾರತದ ಸನ್ನಿವೇಶದಲ್ಲಿ ಸಮುದಾಯಗಳು ಜಾತಿ, ಧರ್ಮ, ಅಥವಾ ಜನಾಂಗದ ದೆಸೆಯಿಂದ ಬೇರ್ಪಟ್ಟು ಭೌಗೋಳಿಕವಾಗಿ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಾರೆ. ಅವರು ಉಚಿತವಲ್ಲದ ಶ್ರೇಣಿಯುತ, ತಾರತಮ್ಯದ ಸಂಪ್ರದಾಯಗಳಿಗೆ ಒಳಪಟ್ಟಿರುವುದರಿಂದ ನಿರ್ದಿಷ್ಟವಾದ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಒಂದು ಸವಾಲು. ಈ ವಾಸ್ತವತೆ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದ ಕೊಳಚೆ ಪ್ರದೇಶದಲ್ಲಿ ಕಾಣ ಸಿಗುತ್ತದೆ. ಉದಾ, ಕೊಲ್ಕೊತ್ತಾದ ತಾಂಗ್ರ ಕೊಳಚೆ ಪ್ರದೇಶದಲ್ಲಿ ನಿವಾಸಿಗಳು ಬಿಹಾರಿ ಮತ್ತು ಬೆಂಗಾಲಿಗಳೆಂದು ವಿಭಾಗಿಸಲ್ಪಟ್ಟಿದ್ದಾರೆ. ಈ ಧಾರ್ಮಿಕ ಹಾಗೂ ಜನಾಂಗೀಯ ಗುಂಪುಗಳ ಸಂಪರ್ಕ ಕನಿಷ್ಠವಾಗಿರುವುದರಿಂದ ಒಂದು ಗುಂಪನ್ನು ಕೀಳು, ತುಚ್ಛವೆಂದು ಪರಿಗಣಿಸುತ್ತದೆ. ಹಳ್ಳಿಗಳಲ್ಲಿ ಜಾತೀಯತೆ ಅಂಗೀಕೃತವಾಗಿದ್ದು ಜನರು ಪ್ರತ್ಯೇಕ ಕಾಲೋನಿಗಳಲ್ಲಿ ಬೇರ್ಪಟ್ಟಿರುತ್ತಾರೆ. ಆದುದರಿಂದ ಭಾರತದ ಪರಿಸರದಲ್ಲಿ ಸಮುದಾಯ ಸಂಚಲನ ಸಮುದಾಯದ ಸೂಕ್ತ ಕೇಂದ್ರೀಕತೆ ಮತ್ತು ಅರಿವಿನ ಆಧಾರದ ಮೇಲೆ ಪ್ರಾರಂಭವಾಗಬೇಕು. ಅದು ಜಾತಿ, ಧರ್ಮ, ಜನಾಂಗವನ್ನು ಮೀರಿ ಸಂಪರ್ಕವನ್ನು ಒಳಗೊಂಡು ಸೇವೆ ಮತ್ತು ಹಂಚಿಕೆಯ ಮೌಲ್ಯಾಧಾರಿತವಾಗಿರಬೇಕು.

ಬೇರೆ ಮಾತಿನಲ್ಲಿ ಹೇಳುವುದಾದರೆ, ಸಮುದಾಯ ಸಂಚಲನದಲ್ಲಿ ಸಮುದಾಯದ ಸದಸ್ಯರು "ಚಾಲಕನ ಕುರ್ಚಿ"ಯಲ್ಲಿದ್ದು ಅಭಿವೃದ್ಧಿ, ಸಬಲೀಕರಣ ಹಾಗೂ ಪೌರತ್ವ ಧೃಡೀಕರಣವಾಗುವ ಪ್ರಕ್ರಿಯೆಯಾಗಬೇಕು. ಸಮುದಾಯ ತನ್ನನ್ನೇ ಸಬಲೀಕರಿಸಲು ಆಂತರಿಕ ಮತ್ತು ಬಾಹ್ಯ ಪಾತ್ರಧಾರಿಗಳ ಮುಖಾಂತರ ತೊಡಗಬೇಕಾಗುತ್ತದೆ. ಸಮುದಾಯ ಸಂಚಲನ, ಸಮುದಾಯ ಚಾಲಿತ ಮತ್ತು ಜನ ಚಾಲಿತ ಪ್ರಕ್ರಿಯೆಯಾಗಬೇಕು.

# ಸಚೇತನ ಕಾರ್ಯ

ಸಮುದಾಯ ಸಂಚಲನದ ಜೊತೆಜೊತೆಯಾಗಿ ಚಲಿಸುತ್ತಿರುವ ಇನ್ನೊಂದು ಚಿಂತನೆ ಸಚೇತನ ಕಾರ್ಯವಾಗಿದೆ. ಸಚೇತನ ಕಾರ್ಯದಲ್ಲಿ ಜನರು ಮತ್ತು ಗುಂಪುಗಳು ನಿಕಟವಾಗಿ ಕಲೆತು ಬೆರೆಯುವುದನ್ನು ಎದುರು ನೋಡುತ್ತದೆ. ಇಲ್ಲಿ ಸಮುದಾಯದ ನಿರ್ವಾಹಕರು ಸಂಸ್ಥೆಯ ಪರಿಪೋಷಕರೊಂದಿಗೆ ಸಮುದಾಯದ ನಿರ್ದಿಷ್ಟ ಕಾರ್ಯಕ್ರಮಗಳು ತ್ವರಿತವಾಗಿ ಅನುಷ್ಠಾನಕ್ಕೆ ತರುವಂತೆ ಪ್ರೇರಣೆಯನ್ನು ನೀಡುವ ಅಗತ್ಯವಿದೆ. ಸಚೇತಕರು ಸಂಸ್ಥೆಯ ಪರಿಪೋಷಕರಾದ ಪಕ್ಷದಲ್ಲಿ ಅವರ ಮಧ್ಯಸ್ಥಿಕೆಗೆ ಇತಿಮಿತಿ ಇರುತ್ತದೆ. ಅವರು ಸಮುದಾಯದ ಸದಸ್ಯರಲ್ಲದ ಕಾರಣ "ಚಾಲಕನ ಕುರ್ಚಿ" ಯನ್ನು ಆಕ್ರಮಿಸದೆ ಅದನ್ನು ಸಮುದಾಯದ ಸದಸ್ಯರಿಗೆ ಬಿಟ್ಟುಕೊಡಬೇಕು. ಸಂಸ್ಥೆಯ ಸಂಚಲನ ಪ್ರಕ್ರಿಯೆಯಲ್ಲಿ ಪಾಲುಗಾರರು ಮಾತ್ರವಾಗಿರುವುದರಿಂದ ಅದು ಪೋಷಕ ಸಂಸ್ಥೆಯಾಗಿರುತ್ತದೆಯೇ ವಿನಃ ಯೋಜನೆಯನ್ನು ಕಾರ್ಯಗತ ಮಾಡುವ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.

ಸಮುದಾಯ ಸಂಚಲನದ ಅಪೇಕ್ಷಿತ ಪ್ರಮುಖ ಫಲವೇನೆಂದರೆ, ಬಲಿಷ್ಠ ಸ್ವಾವಲಂಬಿತ ಹಾಗೂ ಸಮುದಾಯ ಆಧಾರಿತ ಸಂಘಟನೆ (CBO)ಯ ಸ್ಥಾಪನೆ. ಇದರಲ್ಲಿ ಅದರ ಸದಸ್ಯರು ಅರಿವಿನ ಬೆಳಕನ್ನು, ವಿಶ್ಲೇಷಣಾ ಸಾಮರ್ಥ್ಯ, ವ್ಯಕ್ತಿತ್ವ ಹಾಗೂ ಮುಖಂಡತ್ವದ ಕೌಶಲ್ಯ ಮತ್ತು ಮೇಲ್ವಿಚಾರಣಾ ಸಬಲತೆಯಲ್ಲಿ ಪ್ರಗತಿಯನ್ನು ಸಾಧಿಸುತ್ತಾರೆ. ಈ ಗುರಿಯನ್ನು ತಲುಪಲು ಅವರಿಗೆ ಪೌರ ಹಕ್ಕಿನ ಜ್ಞಾನ, ವಿಶ್ಲೇಷಣಾ ಮತ್ತು ವಿಮರ್ಶಾತ್ಮಕ ಸಾಮರ್ಥ್ಯದ ಅಗತ್ಯವಿದೆ. ಈ ಅಭ್ಯಾಸದ ನಂತರ ಸಮುದಾಯದ ಸದಸ್ಯರು ಸಹ ಸಮಾನ ಭಾಗಿತ್ವದಿಂದ ತೀರ್ಮಾನ ಕೈಗೊಳ್ಳುವಂತಿರಬೇಕು. ಅವರು ಸಮಾಜ ಸೇವೆಯನ್ನು ಸಂಘಟಿಸಲು ಸಂಸ್ಥೆಯೊಂದಿಗೆ ಮಧುರ ಸಂಬಂಧವನ್ನು ಸ್ಥಳೀಯರು ಮತ್ತು ಬಾಹ್ಯ ವ್ಯಕ್ತಿಗಳೊಂದಿಗೆ ವ್ಯವಹರಿಸುವಂತಿರಬೇಕು. ಸಂಪನ್ಮೂಲ ಕ್ರೋಢೀಕರಿಸಲು ಜಾಲತಾಣದಲ್ಲಿ ಭಾಗವಹಿಸುವ ಪರಿಣತಿ ಮತ್ತು ನೀತಿ ಸಂಹಿತೆಯ ಮೇಲೆ ಪ್ರಭಾವ ಬೀರುವಂತಿರಬೇಕು.


Q/0106/027

# ಬಡತನ ನಿರ್ಮೂಲನೆಯಿಂದ ಸಮುದಾಯ ಸಂಚಲನ

ಸಮಾಜ ಸೇವೆಯಲ್ಲಿ ಬಡತನ ನಿರ್ಮೂಲನಾ ಮಾದರಿಯು ಅಪಾರ ಫಲಿತಾಂಶವನ್ನು ನೀಡಿತ್ತು. ಸಮುದಾಯದ ಬೆಳವಣಿಗೆಯಲ್ಲಿ ಬೆಳವಣಿಗೆಯ ಗಣನೀಯ ಸೂಚಿಗಳು ಎದ್ದು ಕಾಣಿಸಿದವು. "ಬಾಹ್ಯ" ಪರಿಪೋಷಕರು ಬಡವರ ಪ್ರಗತಿಗಾಗಿ ದುಡಿದರು ಮಾತ್ರವಲ್ಲ, ಕೆಲವು ಬಾರಿ ಅವರ ಸ್ವರವಾಗಿ ಶ್ರಮಿಸಿದರು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದುದು ಏನೆಂದರೆ ಫಲಾನುಭವಿಗಳು "ತಳಮಟ್ಟದವರು ಮಾತನಾಡಬಲ್ಲರೇ?" (ಸ್ಪಿವಕ್ ೧೯೮೮). ಈ ಸನ್ನಿವೇಶದಲ್ಲಿ ಸಂವಾದಿಸಿದ ಜನರ ವ್ಯಕ್ತಿ ನಿಷ್ಠತೆಯನ್ನು ಪರಿಶೀಲಿಸಬೇಕು. ಸಮುದಾಯದ ಸದಸ್ಯರು ಸಂಪೂರ್ಣ ಸ್ವತಂತ್ರರಾಗಿ ವರ್ತಿಸುತ್ತಾರೆಯೇ? ಸಮುದಾಯ ನಿರ್ಮಾಣ ಕಾರ್ಯದಲ್ಲಿ ಈ ಅಂಶಕ್ಕೆ ಒತ್ತು ಕೊಡಬೇಕು.

ಈ ಮಾದರಿಯಲ್ಲಿ ಸಮುದಾಯಕ್ಕೆ ಒಳಿತಾದುದು ಏನೆಂದು ಬಾಹ್ಯ ಪಾತ್ರಧಾರಿಗಳಿಗೆ ಮುಂಚಿತವಾಗಿ ತಿಳಿದಿರುತ್ತಿತ್ತು. ಆದುದರಿಂದ ಸಮುದಾಯದ ಸದಸ್ಯರು ಯೋಜನೆಯಲ್ಲಿ ಯಾವ ಬದಲಾವಣೆಯನ್ನು ತರಲು ಅಶಕ್ತರಾಗಿದ್ದರು. ಏಕೆಂದರೆ ಯೋಜನೆಯ ತಾರ್ಕಿಕ ಚೌಕಟ್ಟು, ಕ್ರಿಯಾ ವಿಧಾನ ಮತ್ತು ಚಟುವಟಿಕೆಗಳು ಪೂರ್ವ ಯೋಜಿತವಾಗಿದ್ದವು. ಅದನ್ನು ಮೂಲ ಸಮೀಕ್ಷೆ ಮತ್ತು ಮುನ್ನೋಡಿದ ಫಲಿತಾಂಶಕ್ಕೆ ಅನುಗುಣವಾಗಿ ಕಾರ್ಯಗತವಾಗುತ್ತಿದ್ದವು. "ಫಲಿತಾಂಶ ಆಧಾರಿತ ನಿರ್ವಹಣೆ"ಯ ತಾಂತ್ರಿಕತೆಯ ಬಳಕೆ ಇಲ್ಲವಾಗುತ್ತಿತ್ತು. ಈ ಪ್ರಕ್ರಿಯೆ ಲಾಭಾಂಶ ವಿಶ್ಲೇಷಣೆಗೆ ಅನುಗುಣವಾಗಿರುತ್ತಿತ್ತು. ವ್ಯಕ್ತಿ ಮತ್ತು ಸಮುದಾಯಗಳಿಂದ ನಿರ್ದಿಷ್ಟ ಫಲಿತಾಂಶ ಮತ್ತು ಬದಲಾವಣೆಯನ್ನು ತೋರ್ಪಡಿಸುವ ಆಗ್ರಹವಿದ್ದುದರಿಂದ ಬಾಹ್ಯ ಪಾತ್ರಧಾರಿಗಳು ತಮ್ಮ ಪ್ರಭಾವವನ್ನು ಬೀರುತ್ತಿದ್ದರು. ಈ ಅಭಿವೃದ್ಧಿ ಹೊರಗಿನವರ ಸ್ವಾಮ್ಯಕ್ಕೆ ಒಳಪಟ್ಟಿದ್ದರಿಂದ ಸಮುದಾಯದ ಸದಸ್ಯರು ಕೇವಲ ಅವಲಂಬನಾ ಪ್ರವೃತ್ತಿಯನ್ನು ಬೆಳಸಿಕೊಂಡಿದ್ದರು. ಬಾಹ್ಯ ಪಾತ್ರಧಾರಿಗಳನ್ನು ಸಮುದಾಯದವರು ಬಹುತೇಕ "ಅನ್ನದಾತರು" ಎಂದೇ ಅಂಗೀಕರಿಸಿದ್ದರು. ಇಲ್ಲಿ ಆರ್ಥಿಕ ಸಂಪನ್ಮೂಲದ ಜೊತೆಗೆ ಅರಿವು ವಿಶ್ಲೇಷಣೆ, ಕೌಶಲ್ಯ ಮತ್ತು ಕಾರ್ಯವಿಧಾನಕ್ಕೆ ಅವರನ್ನೇ ನಂಬಿಕೊಂಡಿದ್ದರು. ಈ ಮಾದರಿ ನಿರೀಕ್ಷಿಸಿದ ತಕ್ಷಣಿಕ ಫಲಿತಾಂಶವನ್ನು ತಪ್ಪದೆ ನೀಡುತ್ತಿತ್ತು. ಆದರೆ ಸಮುದಾಯದ ಸದಸ್ಯರು ತಮಗೆ ಅಗತ್ಯವಾದ ಫಲವನ್ನು "ಸ್ವೀಕಾರ" ಮಾಡುವುದರಲ್ಲಿ ಉತ್ಸುಕರಾಗಿದ್ದರೇ ವಿನಃ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿರಲಿಲ್ಲ. ಅವರು ಕಲಿಕೆಯ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದುದರಿಂದ ಸಮುದಾಯಗಳು ತಾವು ಪಡೆದುಕೊಂಡ ಫಲವನ್ನು ದೀರ್ಘಕಾಲ ಉಳಿಸಿಕೊಳ್ಳಲಾಗುತ್ತಿರಲಿಲ್ಲ.

# ಅಭಿವೃದ್ಧಿ ಸಿದ್ಧಾಂತಗಳು

ಅಭಿವೃದ್ಧಿಯ ಪರಿಕಲ್ಪನೆ ವಿವಿಧ ಪಂಡಿತರು ವಿಷದಪಡಿಸಿದ ವಿಭಿನ್ನ ಅರ್ಥವಿವರಣೆ ಮತ್ತು ಸಿದ್ಧಾಂತಗಳೊಂದಿಗೆ ಸಮ್ಮಿಳಿತವಾಗಿದೆ. ಅಭಿವೃದ್ಧಿಯನ್ನು "ವಿಕಾಸ ಪ್ರಕ್ರಿಯೆ" ಎಂದು ಪರಿಗಣಿಸಲಾಗಿದೆ. ಅದು ಸಮಸ್ಯೆಗಳಿಗೆ ತಕ್ಕಂತೆ ಹೊಸ ವಿನ್ಯಾಸವನ್ನು ಪಡೆದುಕೊಳ್ಳುತ್ತಾ ಬದಲಾವಣೆಗೆ ತಕ್ಕಂತೆ ಹೊಂದಿಕೊಂಡು ಉದ್ದೇಶ ಪೂರ್ವಕವಾಗಿ ಹೊಸ ಗುರಿಯನ್ನು ತಲುಪಲು ಸತತ ಕ್ರಿಯಾತ್ಮಕವಾಗುತ್ತದೆ. ಅಭಿವೃದ್ಧಿ ಅಥವಾ ಪ್ರಗತಿಯ ಇಂತಹ ಸಿದ್ಧಾಂತ ಮತ್ತು ಮಾದರಿಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಇಲ್ಲಿದೆ. ಇದರ ಮುಖಾಂತರ ನಾವು ಜನ ಆಧಾರಿತ ಅಥವಾ ಸಮುದಾಯ ಆಗ್ರಹಿತ ಪ್ರಗತಿಯನ್ನು ಅರಿತು ನಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಬಹುದು.

## a) ಅವಲಂಬನಾ ಸಿದ್ಧಾಂತ

ವಿಶ್ವವ್ಯಾಪಿ ಆರ್ಥಿಕತೆಯಿಂದ ವಂಚಿತವಾದ ದೇಶಗಳು ಅಭಿವೃದ್ಧಿಯ ಅಂಚಿನಲ್ಲಿರುವುದರಿಂದ ಅವುಗಳ ಪ್ರಗತಿ ಕುಂಟುತ್ತಿರುತ್ತದೆ. ವಾಸ್ತವವಾಗಿ ಅಲ್ಪ ಪ್ರಗತಿಯ ದೇಶಗಳು ವಿಶ್ವ ಮಾರುಕಟ್ಟೆಗೆ ಅಗ್ಗದ ಕೂಲಿ ಮತ್ತು ಕಚ್ಚಾ ವಸ್ತುಗಳನ್ನು ಕೊಡುತ್ತವೆ. ಪ್ರಬುದ್ಧ ದೇಶಗಳು ಅಗ್ಗವಾಗಿ ದೊರತದ್ದನ್ನು ಸಿದ್ಧ ವಸ್ತುಗಳನ್ನಾಗಿ

ಪರಿವರ್ತಿಸುವ ತಾಂತ್ರಿಕತೆಯನ್ನು ಹೊಂದಿದೆ. ಬಡ ಪ್ರಗತಿಪರ ದೇಶಗಳು ಈ ಸಿದ್ಧ ವಸ್ತುಗಳನ್ನು ಅಧಿಕ ಬೆಲೆ ಕೊಟ್ಟು ಕೊಂಡುಕೊಳ್ಳುತ್ತಾ ತಮ್ಮ ಬಂಡವಾಳದಲ್ಲಿ ನಷ್ಟವನ್ನು ಅನುಭವಿಸುತ್ತಾ ಬಂದಿವೆ. ಸ್ವಂತ ಸೌಕರ್ಯವಿಲ್ಲದ ಕಾರಣ ಉತ್ಪನ್ನಗಳನ್ನು ಮೇಲ್ದರ್ಜೆಗೆ ಏರಿಸಿಕೊಳ್ಳಲಾಗದೆ ಪರಿತಪಿಸುವಂತಾಗಿದೆ. ಜಾಗತಿಕ ಆರ್ಥಿಕತೆ ವಿಷವರ್ತುಲವಾಗಿ ಶ್ರೀಮಂತ ರಾಷ್ಟ್ರಗಳನ್ನು ಮರದ ಕಾಂಡಕ್ಕೂ ಬಡದೇಶಗಳನ್ನು ಮರದ ತೊಗಟೆಗೂ ಹೋಲಿಸಬಹುದು.

## b) ಆಧುನಿಕತೆಯ ಸಿದ್ಧಾಂತ

ಆಧುನಿಕತೆಯ ಸಿದ್ಧಾಂತದ ಪ್ರಕಾರ ಏಷಿಯಾ, ಆಫ್ರಿಕಾ ಮತ್ತು ಲ್ಯಾಟಿನ ಅಮೇರಿಕಾಗಳು ಕುಂಠಿತ ಅಭಿವೃದ್ಧಿ ದೇಶಗಳಾಗಿ ಆರ್ಥಿಕತೆಯಲ್ಲಿ ಹಿಂದುಳಯಲು ಅವುಗಳ ಸಾಂಸ್ಕೃತಿಕ ನಿಲುವೇ ಕಾರಣ ಎನ್ನಲಾಗಿದೆ. ಆಧುನಿಕತೆಯ ಸಿದ್ಧಾಂತದ ಪ್ರತಿಪಾದಕರು ಬಂಡವಾಳಶಾಹಿ ಕೈಗಾರಿಕಾ ಮಾದರಿಯನ್ನು ಆರ್ಥಿಕ ಪ್ರಗತಿಗೆ ಸೂಚಿಸುತ್ತಾರೆ. ಅವರ ಚಿಂತನೆಯ ಪ್ರಕಾರ ಬಂಡವಾಳಶಾಹಿ ಮಧ್ಯಸ್ತಿಕೆ (ಮುಕ್ತ ಮಾರುಕಟ್ಟೆ) ಕೈಗಾರಿಕಾ ಆಂದೋಲನ ಮುಖಾಂತರ ಉತ್ಪನ್ನಗಳನ್ನು ತ್ವರಿತವಾಗಿಯೂ ನವ ನವೀನವಾಗಿಯೂ ಸಿದ್ಧ ಮಾಡಬಹುದು. ಗುಡಿಕೈಗಾರಿಕೆಯಿಂದ ಕಾರ್ಖಾನೆ ಆಧಾರಿತ ಆರ್ಥಿಕತೆಗೆ ಸಾಗಲು ಪಾಶ್ಚಾತ್ಯ ಸರಕಾರ ಮತ್ತು ಉದ್ದಿಮೆಗಳ ಸಹಕಾರ ಮತ್ತು ಬಂಡವಾಳ ಅಗತ್ಯ.

## c) ಕ್ಯಾಚ್‌ಅಪ್ (ತಕ್ಷಣಿಕ) ಅಭಿವೃದ್ಧಿ ಸಿದ್ಧಾಂತ

೧೯೪೯ ರಲ್ಲಿ ಸಂಯುಕ್ತ ದೇಶಗಳ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ ಅವರು "ಅಭಿವೃದ್ಧಿ ಕುಂಠಿತ ದೇಶ"ಗಳ ಪ್ರಗತಿಗಾಗಿ ಹೊಸ ಮಹತ್ತರ ಕಾರ್ಯಕ್ರಮವನ್ನು ಪ್ರಕಟಿಸಿದರು. ಪ್ರಗತಿಪರ ದೇಶಗಳಿಗೆ ತಾಂತ್ರಿಕ ಮತ್ತು ಆರ್ಥಿಕ ನೆರವನ್ನು ನೀಡುವುದರಿಂದ ಅವು "ಅಂತಿಮ ಪ್ರಗತಿ"ಯನ್ನು ಸಾಧಿಸುವಲ್ಲಿ ಸಶಕ್ತರಾಗುವರು ಎಂದು ಬಂಡವಾಳ ಹೂಡಿಕೆ ಚಿಂತನೆಯನ್ನು ಮಾಡಿದರು. ಈ ಯೋಜನೆ ತಕ್ಷಣಿಕವಾದುದರಿಂದ ಅದನ್ನು ಕ್ಯಾಚ್‌ಅಪ್ ಸಿದ್ಧಾಂತವೆನ್ನಲಾಯಿತು.

## d) ಸಾಮಾಜಿಕ ಅಭಿವೃದ್ಧಿ ಸಿದ್ಧಾಂತ

ಸಾಮಾಜಿಕ ಅಭಿವೃದ್ಧಿ ಎಂದರೆ ಸಮಾಜದಲ್ಲಿರುವ ಎಲ್ಲಾ ಜನರ ಜೀವನ ಸೌಖ್ಯವನ್ನು ಉತ್ತಮಗೊಳಿಸುವುದು. ಜನರಲ್ಲಿರುವ ಸುಪ್ತಶಕ್ತಿ ಸಾಮರ್ಥ್ಯವನ್ನು ಒರೆಗೆ ಹಚ್ಚಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸುವುದು. ಒಂದು ಸಮಾಜದ ಪ್ರಗತಿ ಪ್ರತಿಯೊಬ್ಬ ಪೌರನ ಜೀವನ ಸೌಖ್ಯದೊಡನೆ ಸಂಬಂಧಿತವಾಗಿದೆ. ಸಾಮಾಜಿಕ ಅಭಿವೃದ್ಧಿ ಮಹತ್ತರ ವಿನ್ಯಾಸ ಮಾರ್ಪಾಟು ಒಳಗೊಂಡ ವ್ಯಾಪಕ ವಿಷಯ. ಈ ಮಾರ್ಪಾಟಿನಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳಿದ್ದು ಅವೆಲ್ಲವುಗಳ ಉದ್ದೇಶ ಪ್ರಸ್ತುತ ಸಮಾಜಕ್ಕಿಂತ ಉತ್ತಮ ಸಮಾಜವನ್ನು ಸೃಷ್ಟಿಸುವುದಾಗಿದೆ. ಆ ಸಮಾಜದಲ್ಲಿ ಜನ ಜೀವನ ಸುಧಾರಿತವಾಗಿ ಯಾರೂ ಹಸಿವಿನಿಂದ ಕಂಗೆಡದೆ ಮೂಲಭೂತ ಸೌಕರ್ಯಗಳಿಂದ ವಂಚಿತರಾಗದೆ ಇರುವುದು.

## e) ಸ್ವಾವಲಂಬಿತ ಅಬಿವೃದ್ಧಿ ಸಿದ್ಧಾಂತ

ಸ್ವಾವಲಂಬಿತ ಅಭಿವೃದ್ಧಿ ಸಿದ್ಧಾಂತ ಮೇಲಿನ ಎಲ್ಲ ವಿಷಯಗಳ ಜೊತೆಗೆ ಹೊರವಲಯ, ಸಾಮಾಜಿಕ ಮತ್ತು ಆರ್ಥಿಕ ಕಾಳಜಿಗಳನ್ನು ಒಳಗೊಂಡಿರುತ್ತದೆ. ಅದರಲ್ಲಿ ಮಾನವ ಪ್ರಗತಿಯ ಬಗ್ಗೆ ತೀರ್ಮಾನ ಕೈಗೊಳ್ಳುವ ಅಂಶವು ಒಳಗೊಂಡಿದೆ. ಸ್ವಾವಲಂಬಿತ ಅಭಿವೃದ್ಧಿಯ ಚೌಕಟ್ಟಿನಲ್ಲಿ ಇತರ ಎಲ್ಲ ಸೂತ್ರಗಳಿದ್ದರು ತೀರ್ಮಾನ ಕೈಗೊಳ್ಳುವ ಕರ್ತವ್ಯ ಕೇಂದ್ರ ಭಾಗದಲ್ಲಿದೆ (ಡರ್ನ್ ಬಾಖ್ ಜೆ.ಸಿ ೨೦೦೩; ಸ್ಟೊಡ್ಡಾರ್ಬ್, ೨೦೧೧). ಇತರ ಎಲ್ಲ ತತ್ವ ಸಿದ್ಧಾಂತಗಳಿಂದ ಸಮನ್ವಯತೆಯ ಅಂಶ ಇತರ ಎಲ್ಲ ಸ್ವಾವಲಂಬನೆಯನ್ನು ಪ್ರತ್ಯೇಕಿಸುತ್ತದೆ.

# ಅಭಿವೃದ್ಧಿ ಮಾದರಿಗಳು

ನಾವು ನಿನ್ನೆಯ ಪರಿಹಾರವನ್ನು ಇಂದಿನ ಸಮಸ್ಯೆಗೆ ಕೊಡಲಾಗದು. ನಾವು ಜನರ ಸಮಗ್ರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವಾಗ ಸೂಕ್ತ ಮತ್ತು ಸರಿಯಾದ ಉತ್ತರಗಳನ್ನು ಆಧುನಿಕ ಸವಾಲುಗಳಿಗೆ ಕಂಡುಕೊಳ್ಳಬೇಕು. ಆದುದರಿಂದ ನಾವು ಇತಿಹಾಸದಲ್ಲಿ ಹಾದು ಹೋದ ವಿವಿಧ ಅಭಿವೃದ್ಧಿ ಮಾದರಿಗಳ ಬಗ್ಗೆ ಸ್ಪಷ್ಟ ಅರಿವನ್ನು ಹೊಂದಿರುವುದು ಅಗತ್ಯ. ಪ್ರತಿಯೊಂದು ಮಾದರಿಯೂ ಆಯಾ ಕಾಲ ಸನ್ನಿವೇಶಕ್ಕೆ ಸಮಂಜಸವಾಗಿದ್ದವು. ಆದುದರಿಂದ ಕಾಲ, ಸನ್ನಿವೇಶ, ಸ್ಪಷ್ಟ ಗುರುತ್ವ ಮತ್ತು ಸಮಯೋಚಿತ ಕ್ರಿಯಾ ವಿಧಾನದ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆ ಮತ್ತು ವಿವೇಚನೆ ಮಾಡುವುದು ಪ್ರಯೋಜನಕಾರಿ.

## a) ದಾನಧರ್ಮ ವಿಧಾನ

ಭೂಕಂಪ, ನೆರೆ ಹಾವಳಿ, ಕ್ಷಾಮಡಾಮರ ಮತ್ತು ಸಾಂಕ್ರಾಮಿಕ ಪಿಡುಗುಗಳು ನೈಸರ್ಗಿಕ ವಿಕೋಪಗಳು, ಇಂತಹ ಪರಿಸ್ಥಿತಿಯಲ್ಲಿ ಪರಿತಪಿಸುತ್ತಿರುವ ಸಂತ್ರಸ್ತರಿಗೆ ದಾನಧರ್ಮದ ನೆರವು, ಸಾಂತ್ವನದ ಸೇವೆಯು ಸಲ್ಲುತ್ತದೆ. ಇದರಲ್ಲಿ ನೊಂದವರ ಪಾತ್ರ ಅತ್ಯಲ್ಪವಾಗಿದ್ದು ಬಾಹ್ಯ ಪಾತ್ರಧಾರಿಗಳು ಅಸಹಾಯಕರಿಗೆ ನೆರವು ಸಾಂತ್ವನ ನೀಡುತ್ತಾರೆ. ದಾನಧರ್ಮ ನಮ್ಮಿಂದ ಲೋಕೋಪಯೋಗಿ ಭಾವನೆಯನ್ನು ಉದ್ದೀಪನಗೊಳಿಸಿ ಮಾಡು ಮತ್ತು ಕ್ರಿಯೆ ಮುಖಾಂತರ ನಮ್ಮನ್ನು ಪ್ರಚೋದಿಸುತ್ತದೆ. ಸಂತ್ರಸ್ತರೂ ಸಹ ಈ ಸಮಯದಲ್ಲಿ ನಮ್ಮ ಸಹಾಯವನ್ನು ಎದುರು ನೋಡುತ್ತಾರೆ. ಇಂತಹ ಸನ್ನಿವೇಶದಲ್ಲಿ ನಮ್ಮಿಂದ ಸಾಧ್ಯವಾದುದೆಲ್ಲವನ್ನು ನಾವು ಮಾಡಲೇಬೇಕು.

ಈ ವಿಷಯಕ್ಕೆ ಸಂಬಂಧಿಸಿದಂತೆ ಜನ ಕಲ್ಯಾಣದಲ್ಲಿ ನೈಜ ಕಾಳಜಿಯುಳ್ಳವರು ಸಂಕಷ್ಟ ತಲೆದೋರುವ ಸ್ಥಳಗಳಲ್ಲಿರುವ ಸಮುದಾಯಗಳನ್ನು ಈ ಅವಘಡವನ್ನು ಎದುರಿಸಲೂ ನಷ್ಟ, ಹಾನಿ ಮತ್ತು ಯಾತನೆಯನ್ನು ನಿಯಂತ್ರಿಸಲೂ ಪೂರ್ವಭಾವಿ ಸಿದ್ಧತೆಯನ್ನು ಮಾಡಬಹುದು. ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಅಶಕ್ತರಾದವರು ಸಮುದಾಯ ಆಧಾರಿತ ವಿಪತ್ತು ನಿವಾರಣಾ ತಂಡದಲ್ಲಿ ತಮ್ಮನ್ನೇ ತೊಡಗಿಸಿಕೊಂಡರೆ ಅದು ಸಂಬಂಧರಹಿತ ಪ್ರಯಾಸವಾಗದೆ ಸಬಲೀಕರಣದ ಗಣನೀಯ ಕಾಯಕವಾಗುತ್ತದೆ.

## b) ಅಭಿವೃದ್ಧಿ ವಿಧಾನ

ಈ ವಿಧಾನ ಪ್ರತಿಪಾದಿಸುವುದು ಏನೆಂದರೆ, ಬಡಜನರು ಕೌಶಲ್ಯ ಮತ್ತು ಸಂಪನ್ಮೂಲಗಳ ಕೊರತೆಯಿಂದಾಗಿ ಸುಗಮ ಜೀವನವನ್ನು ನಡೆಸಲು ಅಶಕ್ತರಾಗಿದ್ದಾರೆ. ಆದುದರಿಂದ ಬಡಜನರ ಕಲ್ಯಾಣದ ಬಗ್ಗೆ ಅರಿತ "ಬಾಹ್ಯ ಪರಿಣತರು", ಸರಕಾರೇತರ ಸಂಸ್ಥೆಗಳು (NGO), ಕ್ಷೇತ್ರ ಆಧಾರಿತ ಸಂಸ್ಥೆಗಳು ಅಥವಾ ಅಭಿವೃದ್ಧಿ ಆಸಕ್ತ ಸಹೃದಯಿಗಳು ಪ್ರಗತಿಪರ ಕಾರ್ಯಕ್ರಮಗಳನ್ನು ಉಪಕ್ರಮಿಸಬೇಕಾಗುತ್ತದೆ. ಈ ಬಾಹ್ಯ ವ್ಯಕ್ತಿಗಳು ಜನರ ಪ್ರಸ್ತುತ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ತರಲು ಅಗತ್ಯ ಕೌಶಲ್ಯ ಮತ್ತು ಸಬಲತೆಯನ್ನು ಒದಗಿಸಲು ಮುಂದಾಗಬೇಕಾಗುತ್ತದೆ. ಇಂಥವರ ಮಧ್ಯಸ್ಥಿಕೆಯ ಫಲವಾಗಿ ಸಂತೃಸ್ತರು ತಮ್ಮ ಕಾಲ ಮೇಲೆ ನಿಲ್ಲಲು ಶಕ್ತರಾಗುತ್ತಾರೆ. ಆದರೆ ಈ ಮಾದರಿ ಫಲಾನುಭವಿಗಳನ್ನು ಇಂತಹ ಹೀನ ಪರಿಸ್ಥಿತಿಗೆ ತಂದ ಕಾರಣಗಳನ್ನು ಕಂಡುಕೊಳ್ಳಲು ಸಾಕಷ್ಟು ಪ್ರಯತ್ನ ಮಾಡುವುದಿಲ್ಲ. ಇಲ್ಲಿ ಜನರನ್ನು ಅವರ ಕುಸಿದ ಪರಿಸ್ಥಿತಿಯಿಂದ ಮತ್ತು ನಿಲುವಿನಿಂದ ಹೊರತರಲು ಅಭಿವೃದ್ಧಿ ಕಾರ್ಯವನ್ನು ಅಸ್ತ್ರವನ್ನಾಗಿ ಬಳಸಲಾಗುತ್ತದೆ. ಆದರೆ ಅಭಿವೃದ್ಧಿ ಕಾರ್ಯಗಳು ಸಾಮಾನ್ಯವಾಗಿ ನಿರ್ದಿಷ್ಟಗೊಳಿಸಿದ ಕೆಲವೇ ಫಲಾನುಭವಿಗಳಿಗೆ ಸೀಮಿತವಾಗಿರುವುದರಿಂದ ಸಮುದಾಯದಲ್ಲಿ ಒಡಕನ್ನು, ಸಮುದಾಯದ ಸಂಚಲನಕ್ಕೆ ದಕ್ಕೆ ತರುತ್ತದೆ.

## c) ಸಮಾಜ ಸಂಚಲನಾ ವಿಧಾನ

ಈ ವಿಧಾನ ಶೋಷಿತರು ಮತ್ತು ಮೂಲೆಗುಂಪಾದವರ ಪರವಾಗಿ ಅಸ್ತಿತ್ವದಲ್ಲಿರುವ ವಿನ್ಯಾಸದ ಬದಲಾವಣೆಗೆಂದು ಕೈಗೊಂಡಿರುವ ನೇರ ಸಮರವಾಗಿದೆ. ಇದರ ಪರಿಣಾಮವಾಗಿ ಸಮಾಜ ಆಧಾರಿತ ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯ ಸಾಧ್ಯವಾಗುತ್ತದೆ. ಸಾಮಾಜಿಕ ಕ್ರಾಂತಿ, ಚೌಕಟ್ಟು ಬೆಂಬಲಿತ ಕ್ರಿಯಾ ಯೋಜನೆಯನ್ನು ಆಂದೋಲನ ನಿರ್ಮಾಣ ಮಾಡಲು ಹಮ್ಮಿಕೊಳ್ಳಲಾಗುತ್ತದೆ. ಇದು ಆಂದೋಲನ ಆಧಾರಿತ, ರಾಜಕೀಯ ಕೇಂದ್ರೀಕೃತವಾಗಿದ್ದು, ಪ್ರಜಾಪ್ರಭುತ್ವ ವಿಧಾನವನ್ನು ಅಳವಡಿಸಿಕೊಂಡು ಸಂಘಟನೆಯೊಳಗೆ ಬಾಹ್ಯ ಗುಂಪು ಹಾಗೂ ಸಂಸ್ಥೆಗಳ ಸಹಕಾರದಿಂದ ಏರ್ಪಡಿಸಲಾಗುತ್ತದೆ.

ಸಮಾಜ ಸಂಚಲನ ರಾಜಕೀಯ ಕ್ರಾಂತಿಯಾಗಿದ್ದು ಅದು ಅಧಿಕಾರದಲ್ಲಿ ಭಾಗಿಯಾಗಲು ಮುನ್ನಡೆಯುವ ಸಮರವಾಗಿದೆ. ಇದು ಸಾಂಸ್ಕೃತಿಕ ಕ್ರಿಯೆಯಾಗಿದ್ದು ದಬ್ಬಾಳಿಕೆ, ಅಮಾನವೀಯತೆಯನ್ನು ಅಂತ್ಯಗೊಳಿಸಲು ಸಾರಿದ ಸಂಘರ್ಷವಾಗಿದ್ದು ಸರ್ವರಿಗೂ ಸಮಾನ ಅವಕಾಶವನ್ನು ಸ್ಥಾಪಿಸುತ್ತದೆ. ಅದೇ ಸಂದರ್ಭದಲ್ಲಿ ಆರ್ಥಿಕ ಬೇಡಿಕೆಯೂ ಆಗಿದ್ದು ಎಲ್ಲೆಗುಂಪಾದವರಿಗೆ ಸಂಪನ್ಮೂಲಗಳ ಸಮಪಾಲನ್ನು ಗಳಿಸಿಕೊಡುತ್ತದೆ. ಇದು ಆಧ್ಯಾತ್ಮಿಕ ಕ್ರಿಯೆಯೂ ಆಗಿದ್ದು, ಸಮಾಜ ಆಧಾರಿತ ನ್ಯಾಯ, ಸಮಾನತೆ ಮತ್ತು ಸೋದರತ್ವವನ್ನು ಸ್ಥಾಪಿಸುತ್ತದೆ. ಇಂತಹ ಪ್ರತಿ ಸಂಚಲನ ರೋಚಕ ಚರಿತ್ರೆಯನ್ನು ಹೊಂದಿದ್ದು ಅದರಲ್ಲಿ ನ್ಯಾಯ ನೀತಿಯ ದಾಹ ಮತ್ತು ಮಾನವ ಘನತೆಯ ಹುಡುಕಾಟ ಅಡಗಿದೆ.

## d) ಮಾನವ ಹಕ್ಕುಗಳ ವಿಧಾನ

"ಮಾನವರು ಹಕ್ಕುಳ್ಳವರು" ಎಂಬ ಹೊಸ ಪರಿಕಲ್ಪನೆ ಹಕ್ಕು ಆಧಾರಿತ ವಿಧಾನಕ್ಕೆ ಜನ್ಮವಿತ್ತಿದೆ. ಮಾನವ ಹಕ್ಕಿನ ವಿಧಾನ ಅಥವಾ ಹಕ್ಕಿನ ಅಸ್ತ್ರ ಸಮಾಜ ಸಂಚಲನಾ ವಿಧಾನವನ್ನು ಸೃಷ್ಟಿ ಮಾಡುತ್ತದೆ. ಅದರಲ್ಲಿ ಮಾನವ ಹಕ್ಕಿನ ಅಂತಸ್ತು ಮತ್ತು ತತ್ವ ಕೇಂದ್ರೀಕೃತವಾಗುತ್ತದೆ. ಮಾನವ ಹಕ್ಕುಗಳ ಬಗ್ಗೆ ಚರ್ಚೆ ಮತ್ತು ಬಡವರ ಪರ ಹಕ್ಕುಗಳ ಪ್ರತಿಪಾದನೆ ಪ್ರಮುಖ ರಾಜಕೀಯ ವಿಷಯವಾಗಿದೆ. ಈ ಚರ್ಚೆ ಕೇವಲ ಸ್ಥಳೀಯವಾಗದೆ ಪ್ರದೇಶ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ರಂಗದಲ್ಲೂ ವಿಸ್ತರಿಸಿದೆ. ಪ್ರಜೆಗಳ ವಿರುದ್ಧ ಎಲ್ಲಾ ಅನ್ಯಾಯಗಳು ಮಾನವ ಹಕ್ಕಿನ ಉಲ್ಲಂಘನಾ ವರ್ಗದ ಅಡಿಯಲ್ಲಿ ಬರುತ್ತವೆ. ದುರ್ಬಲರ ಮೇಲಿನ ದೌರ್ಜನ್ಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ದಬ್ಬಾಳಿಕೆ ಪೌರ ಮತ್ತು ರಾಜಕೀಯ ಹಕ್ಕನ್ನು ದಮನ ಮಾಡುತ್ತದೆ. ಜನರಿಗೆ ಸಾರ್ವತ್ರಿಕ ರಾಜಕೀಯ ಪ್ರಾಮುಖ್ಯತೆಯನ್ನು ನೀಡಲು ನಾವು ಮಾನವ ಹಕ್ಕುಗಳ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು.

ಇಲ್ಲಿ ಸಮಾಜದ ಮೇಲುಸ್ಥರದಲ್ಲಿರುವ ಜನರ ಮನೋಭಾವವನ್ನು ಬದಲಾಯಿಸುವ ಸವಾಲು ನಮ್ಮ ಮುಂದಿದೆ. ಅವರು ಎಲ್ಲೆಗುಂಪಾದವರ ಸಂಕಷ್ಟಗಳಿಗೆ ಸಂವೇದಿಸುವಂತಾಗಬೇಕು. ಹೀಗೆ ಬಡವರು ತಮ್ಮ ಹಕ್ಕುಗಳನ್ನು ಸಂಧಾನ ಪ್ರಕ್ರಿಯೆಯಲ್ಲಿ ಪಡೆಯುವಂತಾಗಬೇಕು. ಶಾಂತಿ ಸಂಧಾನ ಮತ್ತು ನ್ಯಾಯ ಇವು ಮಾನವ ಬಾಳಿನ ಅವಿಭಾಜ್ಯ ಅಂಗಗಳು.

# ಸಮುದಾಯ ಆಗ್ರಹಿತ ಅಭಿವೃದ್ಧಿ ಪ್ರಕ್ರಿಯೆ

ಬುಡಮೇಲು ಸಾಮಾಜಿಕ – ಸಾಂಸ್ಕೃತಿಕ ಮತ್ತು ವಿನ್ಯಾಸ ಪರಿವರ್ತನಾ ವಿಧಾನ ಹಾಗೂ ಅಮರ್ತ್ಯಸೇನರ ಸಾಮರ್ಥ್ಯ ಶೋಧನಾ ದೃಷ್ಟಿಕೋನ ಸಮುದಾಯದೊಂದಿಗೆ ಬೆರೆತುಕೊಳ್ಳುವ ಹೊಸ ವಿಧಾನಕ್ಕೆ ಅವಕಾಶ ಮಾಡಿಕೊಟ್ಟಿದೆ. ಒಬ್ಬ ವ್ಯಕ್ತಿ ಬಡವನಾಗಿರಬಹುದು ಅಥವಾ ಒಂದು ಸಮಾಜ ಹಿಂದುಳಿದಿರಬಹುದು. ಆದರೆ ಬಹುಬಾರಿ ಸಾಮಾಜಿಕ ತಾರತಮ್ಯ, ಆರ್ಥಿಕ ಶೋಷಣೆ, ಸಾಂಸ್ಥಿಕ ನಿರ್ಲಿಪ್ತತೆ ಮತ್ತು ರಾಜಕೀಯ ಅವ್ಯವಸ್ಥೆ ಅವರನ್ನು ಬಡವರನ್ನಾಗಿ ಮಾಡುತ್ತದೆ. ಅವರು ಎಲ್ಲರಿಗೆ ಲಭಿಸಬೇಕಾದ ಹಕ್ಕು, ಅವಕಾಶ, ಶಿಕ್ಷಣ, ಉದ್ಯೋಗ ಇನ್ನಿತರ ಶಕ್ತಿ ಮೂಲಗಳಿಂದ ವಂಚಿತರಾಗಿರುತ್ತಾರೆ. ಸಮುದಾಯ ಸಮಾಜಗಳು



ಅಥವಾ ಸಾಮಾಜಿಕ ಗುಂಪುಗಳು ಜಾತಿ, ಜನಾಂಗ, ಭಾಷೆ, ಧರ್ಮ, ಪ್ರದೇಶ, ಉದ್ಯೋಗದ ದೆಸೆಯಿಂದಲೂ ಹಿತಾಸಕ್ತಿ, ರಾಜಕೀಯ ಗುಂಪುಗಾರಿಕೆ ಮತ್ತು ಆರ್ಥಿಕ ಸ್ವಾರ್ಥದಿಂದ ಭಾಗವಾಗಿವೆ. ಇಂತಹ ಸನ್ನಿವೇಶದಲ್ಲಿ "ಸಮುದಾಯದ ಸಾಮೂಹಿಕ ಅರಿವು" ಜನರನ್ನು ನೇರ ಪಥದಲ್ಲಿ ನಡೆಸುವ ಹಾಗೂ ಸ್ವಾವಲಂಬಿಗಳಾಗಲು ಸಹಾಯಕವಾಗಿದೆ. ಈ ವಿಧಾನ ನಿಧಾನ ಹಾಗೂ ಸೀಮಿತವಾಗಿದ್ದರೂ ಪರಿಣಾಮಕಾರಿ ಎಂಬುದರಲ್ಲಿ ಅನುಮಾನವಿಲ್ಲ.

ಈ ವಿಧಾನದ ಯಶನ್ನು ಬಾಹ್ಯ ಮತ್ತು ಭೌತಿಕ ಫಲಿತಾಂಶಗಳನ್ನು ಲೆಕ್ಕಹಾಕುವುದರಲ್ಲಿ ಕಂಡುಬರುತ್ತದೆ. ಮಾತ್ರವಲ್ಲ ಕ್ರಿಯೆ ಮತ್ತು ಚಿಂತನಾ ಪ್ರಕ್ರಿಯೆಯಿಂದ ಈ ಕೆಳಗಿನ ಅಂಶಗಳಿಂದ ವ್ಯಕ್ತವಾಗುತ್ತದೆ. ಗುಂಪು ಮತ್ತು ಸಮುದಾಯದ ಸಹಭಾಗಿತ್ವ, ಜಾತಿ–ನಂಬಿಕೆ–ಧರ್ಮ ಅತೀತವಾದ ಗೌರವ, ತೀರ್ಮಾನದಲ್ಲಿ ಸಾಮೂಹಿಕ ಪಾಲುಗಾರಿಕೆ, ಸ್ವಯಂ ನಿರ್ವಹಣೆಯ ಸಾಮರ್ಥ್ಯ ಸಂಘರ್ಷಗಳನ್ನು ಎದುರಿಸುವುದು, ಕರ್ತವ್ಯ ನಿರ್ವಾಹಕರೊಂದಿಗೆ ಮಾತುಕತೆ, ಕಲಿತ ಪಾಠಗಳ ಪುನರ್ಮನನ, ಬದಲಾವಣೆಯ ಅಂಗೀಕಾರ, ಮೌಲ್ಯ ಮತ್ತು ಮನೋಭಾವಗಳ ಮನನ ಮತ್ತು ವಾಸ್ತವ ಸಕಾರಾತ್ಮಕ ಫಲಿತಾಂಶಗಳ ಆಚರಣೆ. ಇಲ್ಲಿ ನಾವು ಕಾಣುವುದು ಫಲಿತಾಂಶ ಆಧಾರಿತ ನಿರ್ವಹಣೆಯಿಂದ ಸಮುದಾಯ ಮಾಲಿಕತ್ವ ಹಾಗೂ ಬೆಂಬಲಿತ ಪ್ರಕ್ರಿಯೆಯೆಡೆಗೆ ಮಾಡಿದ ಜಿಗಿತ. ಇಂತಹ  ಪ್ರಕ್ರಿಯೆಗಳು ಪರಿಣಾಮಕಾರಿಯಾಗಿ ಗುಣಮಟ್ಟ ಮತ್ತು ಮೊತ್ತ ಪ್ರಮಾಣದ ಸೂಚಿಗಳನ್ನು ಒಳಗೊಂಡು, ಕ್ರಿಯೆ– ಚಿಂತನೆ– ಅರಿವು ನಿರ್ಮಾಣ ಪ್ರಕ್ರಿಯೆಯ ವ್ಯಾವಹಾರಿಕ ವ್ಯವಸ್ಥೆ. ಕೆಲವು ಸಂಸ್ಥೆಗಳಿಗೆ ಇದು ಆದರ್ಶ ಮಾತ್ರವೆಂದು ತೋರಿದರೂ ಕಾರಿತಾಸ್ ಸಂಸ್ಥೆಯ ಪಾಲುಗಾರರು ಸಮುದಾಯ–ಬೆಂಬಲಿತ ಅಥವಾ ಜನ–ಆಧಾರಿತ ಪ್ರಕ್ರಿಯೆಯನ್ನು ಅರ್ಥಮಾಡಿಕೊಂಡಿದೆ.

ಇತ್ತೀಚೆಗೆ ೫ ಸೇವಾಸಂಸ್ಥೆಗಳು ಇಂತಹ ಪ್ರಕ್ರಿಯೆಗಳು ಅವುಗಳ ರಣನೀತಿ, ಕಾರ್ಯವಿಧಾನ, ಮಧ್ಯಸ್ಥಿಕೆ, ಗಳಿಕೆ, ಸಮುದಾಯ ಸಂಚಲನದಲ್ಲಿ ಕಲಿತ ಪಾಠಗಳ ತಾತ್ಪರ್ಯವನ್ನು ಸೆರೆಹಿಡಿಯಲು ಸಂಶೋಧನಾ

ಅಧ್ಯಯನ ಮಾಡಿತು. ಅವುಗಳಲ್ಲಿ ಮೂರು ಪಟ್ಟಣ ಪ್ರದೇಶದಲ್ಲಿ ಸಮೀಕ್ಷೆ ಮಾಡಿದ ಸಂಸ್ಥೆಗಳು ಇವು; ಸೇವಾ ಕೇಂದ್ರ, ಕೊಲ್ಕೊತ್ತಾ (SKC), ಚೇತನಾಲಯ, ದೆಹಲಿ ಮತ್ತು ಸೈಂಟ್ ಕ್ಷೇವಿಯರ್ಸ್ ಸೋಷಿಯಲ್ ಸರ್ವಿಸ್ ಸೊಸೈಟಿ, ಅಹಮದಾಬಾದ್ (SXSSS). ಗ್ರಾಮೀಣ ಪ್ರದೇಶದಲ್ಲಿ ಕೃಪಾ ಸೋಷಿಯಲ್ ಸರ್ವಿಸ್ ಸೊಸೈಟಿ (KSWS) ಉಜ್ಜಯಿನಿ ಮತ್ತು ಪೂರ್ವಾಂಚಲ್ ಗ್ರಾಮೀಣ್ ಸೇವಾ ಸಮಿತಿ, ಘೋರಖ್‌ಪುರ್ (PGSS) ಸಮೀಕ್ಷೆಯನ್ನು ಕೈಗೊಂಡವು.

ಸೇವಾ ಕ್ಷೇತ್ರ, ಸಮುದಾಯ ಮತ್ತು ಸಂಸ್ಥೆಗಳ ಕಲಿಕೆಯಿಂದ ಈ ಕೈಪಿಡಿಯನ್ನು ಸಮಾಜ ಸೇವಾ ಸಂಸ್ಥೆ ಮತ್ತು ಕ್ಷೇತ್ರ ಸಿಬ್ಬಂದಿಗೆ "ಸಹಾಯಕ ಸಲಕರಣೆ"ಯನ್ನಾಗಿ ರೂಪಿಸಲಾಯಿತು. ಸಮುದಾಯ ಬೆಂಬಲಿತ ಪ್ರಕ್ರಿಯೆಗಳು, ಸಮುದಾಯದ ಸದಸ್ಯರು ಮತ್ತು ಮುಖಂಡರನ್ನು ಗಮನದಲ್ಲಿಟ್ಟು ಕೈಪಿಡಿಯನ್ನು ಬರೆಯಲಾಯಿತು. ಅವರೊಡನೆ ಮಾಡಿದ ವಿಚಾರ ವಿನಿಮಯದಿಂದ ೧೨ ಹೆಜ್ಜೆಗಳ ಮಾದರಿಯೊಂದು ಹೊರಹೊಮ್ಮಿದೆ. ಈ ೧೨ ಹೆಜ್ಜೆಗಳನ್ನು ಸಂಪೂರ್ಣವೆಂದು ತಿಳಿಯಬಾರದು. ಒಂದು ಕ್ರಮಬದ್ಧ ಮಾದರಿಯ ಪಟ್ಟಿಯನ್ನು ನಿಮ್ಮ ಮುಂದೆ ಇಡುವ ಉದ್ದೇಶ ಅಷ್ಟೇ.

೧. ನಂಬಿಕೆ ಮತ್ತು ಆತ್ಮವಿಶ್ವಾಸದ ನಿರ್ಮಾಣ

೨. ನಿಯೋಗ, ಮೌಲ್ಯ ಮತ್ತು ಸಮುದಾಯ ಸಂಚಲನ ಪ್ರಕ್ರಿಯೆಯ ಅರಿವಿನ ಬೆಳವಣಿಗೆಯನ್ನು ಹಂಚಿಕೊಳ್ಳುವುದು.

೩. CBOಗಳನ್ನು ಸ್ಥಾಪಿಸಲು ಸಾಧ್ಯವಾಗುವಂತೆ ವೈವಿಧ್ಯಮಯ ಮತ್ತು ಸಮಾನ ಅಭಿರುಚಿಯ ಗುಂಪುಗಳ ನಿರ್ಮಾಣ ಮತ್ತು ಅವುಗಳ ಕ್ರಿಯಾತ್ಮಕತೆ.

೪. ವಿಮರ್ಶಾತ್ಮಕ ಜಾಗೃತಿ ನಿರ್ಮಾಣ; ವ್ಯಕ್ತಿ, ಸಮುದಾಯ ಮತ್ತು ಸಂಸ್ಥೆಯ ಜೊತೆಯಲ್ಲಿ ವ್ಯಕ್ತಿತ್ವ, ಮುಖಂಡತ್ವ ಮತ್ತು ಅರಿವಿನ ಬೆಳವಣಿಗೆ.

೫. ಸಾಮಾಜಿಕ ಸಮಸ್ಯೆಗಳ ಗುರುತಿಸುವಿಕೆ ಮತ್ತು ಶ್ರೇಣೀಕರಣ.

೬. ಕರ್ತವ್ಯ ನಿರ್ವಾಹಕರೊಂದಿಗೆ ಜೀವನೋಪಾಯ ಅವಕಾಶ ವಿಸ್ತರಣೆಯ ಮಧ್ಯಂತರ.

೭. ಕ್ಷೇತ್ರ ದರ್ಶನ ಮತ್ತು ಪೂರಕ ಕಲಿಕೆ.

೮. ಕ್ರಿಯೆ–ಚಿಂತನಾ ಪ್ರಕ್ರಿಯೆ ಮತ್ತು ವ್ಯಾವಹಾರಿಕ ಪಾಠಗಳು

೯. ಸಹಯೋಗ, ಜಾಲತಾಣ ಮತ್ತು ಪರವಾದದ ಕ್ರಿಯೆಗಳು.

೧೦. ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆ.

೧೧. ಆಚರಣೆ, ಹೊರನೋಟ ಮತ್ತು ಮಾನ್ಯತೆ.

೧೨. ಪರಿಪೋಷಕ ಸಂಸ್ಥೆಯ ಬದಲಿ ಪಾತ್ರ.


ಈ ಪ್ರಕ್ರಿಯೆಯನ್ನು ಸೂಕ್ತ ಟಿಪ್ಪಣಿಗಳೊಂದಿಗೆ ವಿವರಿಸುವುದು ಅಗತ್ಯ. ಒಂದು ಹೊಸ ಸ್ಥಳದಲ್ಲಿ ಹೇಗೆ ಸಮುದಾಯ ಸಂಚಲನವನ್ನು ಹಂತ ಹಂತವಾಗಿ ರೂಪಿಸುವುದು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಆ ಸ್ಥಳದಲ್ಲಿ ಈಗಾಗಲೇ ಇನ್ನೊಂದು ಸಂಸ್ಥೆ ತಾನು ಆಯ್ಕೆ ಮಾಡಿದ ಯೋಜನೆಯನ್ನು ಬೇರೆ ಕಾರ್ಯವಿಧಾನಗಳಿಂದ ಅನುಷ್ಠಾನಕ್ಕೆ ತರುತ್ತಿದ್ದರೆ ಈ ಹೆಜ್ಜೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಬಹುದು. ಅಷ್ಟು ಮಾತ್ರವಲ್ಲದೆ ಇಲ್ಲಿ ನೀಡಿರುವ ವಿಧಾನವನ್ನು ಸರಳ ರೇಖೆಯಂತೆ ಅನುಸರಿಸಬಹುದು. ಆದರೆ ಸಮುದಾಯ ಸಂಚಲನ ಪ್ರಕ್ರಿಯೆ ಸರಳ ರೇಖೆಯಲ್ಲದ್ದರೂ ಅದು ವರ್ತುಲಾಕಾರವನ್ನು ಹೊಂದಿದೆ. ಅದನ್ನು ಹೆಜ್ಜೆ ಒಂದು, ಹೆಜ್ಜೆ ಎರಡು ಎಂದು ಹಂತಗಳಲ್ಲಿ ಪೂರ್ಣಗೊಳಿಸುವಂತಿಲ್ಲ. ಈ ಪ್ರಕ್ರಿಯೆ ವರ್ತುಲಾಕಾರದಲ್ಲಿರುವುದರಿಂದ ಒಂದು ಹೆಜ್ಜೆ ಮುಂದೆ ಹೋಗಿ ಹಿಂದೆ ಬರುವ ಅಗತ್ಯವೂ ಇರುತ್ತದೆ. ಪ್ರತಿ ಹೆಜ್ಜೆಯನ್ನು ಇನ್ನೊಂದರ ಜೊತೆಗೆ ಜೋಡಿಸುವುದು ಸರಿಯಾದ ಮುನ್ನಡೆಯಾಗಿದೆ.

ಬದಲಾಗುತ್ತಿರುವ ಮತ್ತು ಸಂಕೀರ್ಣ ಸನ್ನಿವೇಶಗಳಲ್ಲಿ ಹೆಜ್ಜೆಗಳ ಪುರ್ನಜೋಡನೆಯ ಅಗತ್ಯವೂ ಕಂಡು ಬರಬಹುದು. ಪ್ರತಿಯೊಂದು ಹೆಜ್ಜೆಯನ್ನು ಇಡುವಾಗ ಸಮುದಾಯವನ್ನು ಸಂಘಟಿಸುವ ಸಿಬ್ಬಂದಿ ಅಥವಾ ಸಂಸ್ಥೆಯ ಅಭ್ಯಾಸಿತರು ಪ್ರತಿಯೊಂದು ಹಂತದ ಉದ್ದೇಶದ ಬಗ್ಗೆ ಅರಿವುಳ್ಳವರಾಗಿರಬೇಕು. ಇಲ್ಲಿ ಒಂದು ಹೆಜ್ಜೆಯನ್ನು ಬಿಟ್ಟು ಮುಂದೆ ಓಡುವ ಪ್ರಯತ್ನ ಅಥವಾ ಉದ್ದೇಶ ತೋರಬಾರದು. ಇಲ್ಲಿ ಯಾವುದು ಕ್ರಮಬದ್ಧ ಸರಿ ಅಥವಾ ತಪ್ಪು ವಿಧಾನಗಳಲ್ಲ. ಈ ಪರಿಸರದಲ್ಲಿ ಯಾವ ಕ್ರಿಯೆ ಸರಿಯಾಗಿ ಕೆಲಸ ಮಾಡುತ್ತದೆ ಎಂದು ಯಾರಿಗೂ ತಿಳಿದಿರುವುದಿಲ್ಲ. ಇಲ್ಲಿ ಪ್ರಯೋಗ, ಪರ್ಯಾಲೋಚನೆ ಮತ್ತು ವಾಸ್ತವತೆಗೆ ಮುಕ್ತ ಮನಸ್ಸು ಮತ್ತು ಪರಿಸರಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವ ಮನೋಭಾವವನ್ನು ರೂಢಿಸಿಕೊಳ್ಳಬೇಕು. ಅಷ್ಟು ಮಾತ್ರವಲ್ಲದೆ ಅಭ್ಯಾಸಿತರೊಂದಿಗೆ ನಿರಂತರ ಪುನರಾವಲೋಕನ ಮಾಡುತ್ತಾ ಪ್ರತಿ ಹಂತದಲ್ಲಿ ಗಳಿಸಿದ ಲಾಭಾಂಶಗಳು ಕಲಿಕೆಗೆ ಅತ್ಯಗತ್ಯವಾಗಿದ್ದು ಸಮುದಾಯದಿಂದ ಪ್ರತಿಯೊಬ್ಬರೂ ಕಲಿಯುವುದು ಸಾಕಷ್ಟಿರುತ್ತದೆ.

# ಕಾರ್ಯಕ್ರಮದ ಬೆಂಬಲ ಮತ್ತು ಅವಧಿ ವೇಳಾಪಟ್ಟಿ

ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಐದು ಪರಿಪೋಷಕ ಸಂಸ್ಥೆಗಳು ತಮ್ಮ ಅನುಭವದಲ್ಲಿ ೮ ರಿಂದ ೯ ವರ್ಷಗಳ ಅವಧಿ ಮತ್ತು ಕಾರ್ಯಕ್ರಮದ ಬೆಂಬಲ ಅಗತ್ಯವೆಂದು ಆಲೋಚಿಸಿದವು. ಇದನ್ನು ಸನ್ನಿವೇಶ ಮತ್ತು ಕ್ಲಿಷ್ಟತೆಗಳಿಗೆ ತಕ್ಕಂತೆ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಕಾರ್ಯವಿಧಾನ ಸಾಮಾನ್ಯ ಸನ್ನಿವೇಶದಲ್ಲಿ ಜಾರಿಯಾಗಬಹುದು. ಒಂದು ಕ್ಷೇತ್ರ ಸ್ಥಬ್ಧವಾಗಿದ್ದರೆ ಅಥವಾ ಬಹುತೇಕ ಜಾತಿ, ಧರ್ಮ ಅಥವಾ ಭಾಷೆಯ ಆಧಾರದ ಮೇಲೆ ಭಿನ್ನವಾಗಿದ್ದರೆ ಪರಿಪೋಷಕ ಸಂಸ್ಥೆ ಅವುಗಳನ್ನು ಆಯ್ಕೆ ಮಾಡುವ ಕಾರ್ಯದಲ್ಲಿ ಎಚ್ಚರವಹಿಸಬೇಕಾಗುತ್ತದೆ. ಯಾವ ಸಂಸ್ಥೆ ಈ ವಿಷಯದಲ್ಲಿ ತನ್ನ ತಲೆಯನ್ನು ಗೋಡೆಗೆ ಚಚ್ಚಿಕೊಳ್ಳುವ, ಸಾಯುವ ಅಗತ್ಯವಿಲ್ಲ. ಒಂದು ವರ್ಷ ಕಾಲ ಕೆಲಸ ಮಾಡಿದ ಮೇಲೆ ಸಮುದಾಯ ಸಾಮಾನ್ಯ ಒಳಿತಿನ ಹಿತಾಸಕ್ತಿಯನ್ನು ಅಂಗೀಕರಿಸದಿದ್ದರೆ ಸೌಹಾರ್ದ ಮತ್ತು ಸಹಯೋಗ ಸಾಧ್ಯವಾಗದಿದ್ದಲ್ಲಿ ಆ ಸ್ಥಳವನ್ನು ಬಿಟ್ಟು ಬಿಡುವುದು ಉಚಿತ, ಪರಿಪೋಷಕ ಸಂಸ್ಥೆ ಈ ಬಗ್ಗೆ ಸಾಮೂಹಿಕ ಪರ್ಯಾಲೋಚನೆ, ಆಳವಾಗಿ ವಿಷಯ ಮತ್ತು ಭಾವನೆಗಳನ್ನು ಹಂಚಿಕೊಂಡು ವ್ಯಕ್ತಿಗಳೊಡನೆ ಪರಸ್ಪರ ವಿನಿಮಯ ಮಾಡಿ ಅಂತಿಮ ನಿರ್ಧಾರವನ್ನು ಕೈಗೊಳ್ಳತಕ್ಕದ್ದು.

## ಸಮುದಾಯ ಸಂಚಲನ ಪ್ರಕ್ರಿಯೆ–ಮಾದರಿ, ಕಾಲಾವಧಿ



## ಸಮುದಾಯ ಸಂಚಲನ ಪ್ರಕ್ರಿಯೆ–ಮಾದರಿ ಕಾಲಾವಧಿ

| ಹೆಜ್ಜೆ ೧ & ೨ | ಹೆಜ್ಜೆ ೩ & ೪ | ಹೆಜ್ಜೆ ೫ & ೬ | ಹೆಜ್ಜೆ ೭, ೮ & ೧೨ |
|---|---|---|---|
| ಅವಧಿ–೧<br>ಸುಮಾರು ೧ ವರ್ಷ | ಅವಧಿ–೨<br>ಸುಮಾರು ೨ ೧/೨ ವರ್ಷ | ಅವಧಿ–೩<br>ಸುಮಾರು ೨ ೧/೨ ವರ್ಷ | ಅವಧಿ–೪<br>ಸುಮಾರು ೨ ವರ್ಷ |

ಸಿಬ್ಬಂದಿ ಬೆಂಬಲ. ಆದರೆ ಕಾರ್ಯಕ್ರಮಗಳಿಗೆ ಕನಿಷ್ಟ ಬೆಂಬಲ

ಸಿಬ್ಬಂದಿ ಬೆಂಬಲ–ಕಾರ್ಯಕ್ರಮ ಬೆಂಬಲ

ಸಿಬ್ಬಂದಿ ಬೆಂಬಲದಲ್ಲಿ ಕಡಿತ, ಆಂತರಿಕ ತರಬೇತಿಗಳಿಗೆ ಕನಿಷ್ಟ ಬೆಂಬಲ; ಕ್ಷೇತ್ರ ದರ್ಶನ, ಜಾಲತಾಣ ಬೆಂಬಲ ಮತ್ತು ಹೊರನೋಟ ಅವಸ್ಥೆಯ ಪ್ರಾರಂಭದಲ್ಲಿ ಅವಸ್ಥೆ ೧೨ ಪ್ರವೇಶ.

ಪರಸ್ಪರ ಕೂಡು ಅವಸ್ಥೆಗಳು
ಹಂತ ೯–ಕಾರ್ಯವಿಧಾನ–ಈ ವಿಧಾನ ಉದ್ದಗಲಕ್ಕೆ ವಿಸ್ತರಣೆ
ಹಂತ ೧೦–ಮನವರಿಕೆ, ಕಿರುಕಾರ್ಯಗಳು, ಪ್ರಯೋಗ ಮತ್ತು ೧೧ನೇ ಹಂತದ ಪ್ರವೇಶಕ್ಕೆ ಮೇಲ್ವಿಚಾರಣೆ–ಹೊರನೋಟ, ಮಾನ್ಯತೆ ಮತ್ತು ಸಂಭಾವನೆ
ಅವಸ್ಥೆ ೩ ಪ್ರವೇಶ

CHAPTER 2

# ನಂಬಿಕೆ ಮತ್ತು ಆತ್ಮವಿಶ್ವಾಸ ನಿರ್ಮಾಣ




# ನಂಬಿಕೆ ಮತ್ತು ಆತ್ಮ ವಿಶ್ವಾಸ ನಿರ್ಮಾಣ

## ಉದ್ದೇಶ

ಸಮುದಾಯ ಬೆಂಬಲಿತ ಅಭಿವೃದ್ಧಿ ಪ್ರಕ್ರಿಯೆಯ ಪ್ರಥಮ ಹೆಜ್ಜೆ ನಂಬಿಕೆ ಮತ್ತು ಆತ್ಮವಿಶ್ವಾಸದ ನಿರ್ಮಾಣ. ಇದರ ಉದ್ದೇಶವೇನೆಂದರೆ, ಸಮುದಾಯದೊಂದಿಗೆ ಸಿಬ್ಬಂದಿ ಮತ್ತು ಸಂಸ್ಥೆಯ ಬಗ್ಗೆ "ವಿಶ್ವಾಸನೀಯತೆ"ಯನ್ನು ಸ್ಥಾಪಿಸುವುದು ಮತ್ತು ಮೈತ್ರಿ "ಬಾಂಧವ್ಯ"ವನ್ನು ಏರ್ಪಡಿಸಿಕೊಳ್ಳುವುದು. ಇದರ ಔಚಿತ್ಯವೇನೆಂದರೆ ಫಲಾನುಭವಿಗಳನ್ನು ಆತ್ಮೀಯತೆಯಿಂದ "ಆಮಂತ್ರಿಸುವುದು ಮತ್ತು ಪರಸ್ಪರ ಸ್ವೀಕಾರ" ಮಾಡುವುದು ಮತ್ತು "ಅವರಿದ್ದಂತೆ ಅವರನ್ನು ಅಂಗೀಕರಿಸುವುದು." ಸಮುದಾಯದ ಸದಸ್ಯರು ಕ್ರಮೇಣ ಸಮುದಾಯ ಅಭ್ಯಾಸಿತರನ್ನು (ಸಂಸ್ಥೆ ಮತ್ತು ಅದರ ಸಿಬ್ಬಂದಿ) ವಿಶ್ವಾಸನೀಯರು, ಎಲ್ಲರೊಡನೆ ಸಂಬಂಧಿತರು, ಆಲಿಸಲು ಸಿದ್ಧ ಮತ್ತು ಸಹನೆಯಿಂದ ಜೊತೆಯಾಗಿ ನಡೆಯುವವರು ಮತ್ತು ಮುಂದುವರೆಯುವ ಮನೋಭಾವದವರು ಎಂದು ಸ್ವೀಕರಿಸುವುದು. ಈ ಪ್ರಯತ್ನದ ಫಲಿತಾಂಶ ಪರಸ್ಪರ ಬಾಂಧವ್ಯ, ಮುಂದುವರಿದ ಅರಿವು, ಆತ್ಮಿಯ ಸ್ವೀಕಾರ ಮತ್ತು ಒಮ್ಮನಸ್ಸಿನ ಆತ್ಮವಿಶ್ವಾಸ.

## ಕಾಲಾವಧಿ

ಸಾಮಾನ್ಯವಾಗಿ ಪರಿಪೋಷಕ ಸಂಸ್ಥೆ ಸಿಬ್ಬಂದಿ ಹಾಗೂ ಸಮುದಾಯದ ಸದಸ್ಯರೊಡನೆ ವಿಶ್ವಾಸನೀಯ ಸಂಬಂಧಗಳನ್ನು ಬೆಳೆಸಲು ಹಾಗೂ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸಲು ೬–೮ ತಿಂಗಳ ಅವಧಿ ಬೇಕಾಗುತ್ತದೆ.



## ಸಾಗುವ ಮಾರ್ಗಗಳು

- ಜನರು ವಾಸಿಸುವ ಸ್ಥಳಗಳಲ್ಲಿ ನಡೆಯುತ್ತಾ ಎಲ್ಲಾ ತರಹದ ಜನರೊಂದಿಗೆ ಕಲೆತು ಬೆರೆಯಿರಿ. ಯುವಜನರು ಮತ್ತು ಹಿರಿಯರು, ಪುರುಷರು ಮತ್ತು ಸ್ತ್ರೀಯರು, ರಸ್ತೆಗಳು ಕಿರುದಾರಿಗಳು, ಸಾಮಾನ್ಯ ಸೌಕರ್ಯಗಳು ಮತ್ತು ಜನರು ಸೇರುವ ಸ್ಥಳಗಳು, ಮಕ್ಕಳು ಮತ್ತು ಯುವಜನರ ಆಟದ ಸ್ಥಳಗಳು, ಶಾಲೆಗಳು, ಗುಡಿಗಳು ಮತ್ತು ಮಸೀದಿಗಳು.
- ವಿನೀತರಾಗಿದ್ದು ಎಲ್ಲರಿಗೂ ಗೌರವ ತೋರಿರಿ. ಯಾರಾದರೂ ನಿಮ್ಮ ಗುರುತು ಅಥವಾ ಉದ್ದೇಶವನ್ನು ಪ್ರಶ್ನಿಸಿದರೆ ನೀವು ಯಾರು ಎಂಬುದನ್ನು ಸ್ಪಷ್ಟವಾಗಿ ತಿಳಿಸಿರಿ.
- ಮಕ್ಕಳು, ಸ್ತ್ರೀಯರಿಗೆ ಮತ್ತಿತರರಿಗೆ ನಿಮ್ಮ ಮುಖ ಪರಿಚಯವಾಗಲಿ. ಜನರ ಹೆಸರನ್ನು ಕಲಿತುಕೊಳ್ಳಿ. ನಿಮ್ಮ ಹೆಸರನ್ನು ಅವರು ಕರೆಯುವಂತಾಗಲಿ.
- ಎಷ್ಟು ಸಾಧ್ಯವೋ ಅಷ್ಟು ಜನರೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳಿರಿ; ನೀವು ಆಯ್ಕೆ ಮಾಡಿದ ಕೆಲವರಿಗೆ ಮಾತ್ರ ಪರಿಚಿತರಾಗದೆ ಎಲ್ಲರಿಗೂ ಸಿಗಲು ಸಿದ್ಧ ಎಂಬುದನ್ನು ತೋರ್ಪಡಿಸಿರಿ.
- ಸೇವಾ ಕ್ಷೇತ್ರವನ್ನು ಸಂಧಿಸುವ ಸಮಯದ ಬಗ್ಗೆ ಬಿಗಿ ಧೋರಣೆ ಬೇಡ. ಆ ಸಮುದಾಯ ಎದುರಿಸುತ್ತಿರುವ ಸವಾಲುಗಳನ್ನು ಕಂಡುಕೊಳ್ಳಲು ಜನರನ್ನು ಸೂರ್ಯಾಸ್ತಮದ ನಂತರ ರಾತ್ರಿಯಲ್ಲೂ ಕಾಣಲು ಹಿಂಜರಿಯಬೇಡಿ.
- ನಿಮ್ಮ ಇಂದ್ರೀಯಗಳು ಎಚ್ಚರವಾಗಿರಲಿ ದೃಷ್ಟಿ, ಸ್ಪರ್ಶ, ಸ್ವಾದ, ಆಲಿಕೆ ಮತ್ತು ರುಚಿಯ ಬಗ್ಗೆ ವಸ್ತುನಿಷ್ಠ ನಡುವಿನ ಅರಿವಿರಲಿ. ಸದಸ್ಯರ ಮಧ್ಯದ ಸಂಬಂಧದ ಎಳೆಯನ್ನು ಗಮನಿಸಿರಿ.
- ಜನರ ಜೀವನಾಡಿಯ ಎಲ್ಲಾ ಸಂಕೀರ್ಣತೆಗಳನ್ನು ಗಮನಿಸಿ ಭಾಗಿಗಳಾಗಿರಿ. ಅವರ ಭಿನ್ನಭಾವಗಳ ಬಗ್ಗೆ ಪ್ರಶ್ನಿಸದೆ ವಿದ್ಯಾರ್ಥಿಯಂತೆ ಕಲಿಯಿರಿ.
- ಸಮಯವನ್ನು ಕ್ರಿಯಾತ್ಮಕ ಆಲಿಕೆಯಲ್ಲಿ ಕಳೆಯಿರಿ, ಎಲ್ಲಾ ವಿಧದ ಬುದ್ಧಿ ಮಾತನ್ನು ಹೇಳುವುದನ್ನು ನಿಲ್ಲಿಸಿರಿ. ಯಾವ ತೀರ್ಪನ್ನು ನೀಡಬೇಡಿ.
- ಸಕಾರಾತ್ಮಕ ಸ್ಪಂದನೆಗಳನ್ನು ಮಾತುಕತೆಯಲ್ಲಿ ಸಮರ್ಥಿಸಿರಿ ಅಥವಾ ಇತರರು ಪ್ರಶ್ನಿಸಿದಾಗ ಸ್ಪಷ್ಟಪಡಿಸಿರಿ.
- ಅಧಿಕೃತ, ಅನೌಪಚಾರಿಕ, ಸಂಪ್ರದಾಯಿಕ ಮತ್ತು ಧಾರ್ಮಿಕ ಮುಖಂಡರೊಂದಿಗೆ ಸಂಪರ್ಕವಿರಲಿ.
- ಜನರನ್ನು ಮನೆಗಳಲ್ಲಿ ಭೇಟಿಯಾಗುವಾಗ ಜಾಗರೂಕರಾಗಿರಿ, ಅವರ ಏಕಾಂತತೆಯನ್ನು ಪ್ರತ್ಯೇಕವಾಗಿ ಸ್ತ್ರೀಯರ ಮತ್ತು ಬಾಲಕಿಯರ ಏಕಾಂತವನ್ನು ಗೌರವಿಸಿ.
- (ನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿ).

## ಉಪಯುಕ್ತ ಸೂಚನೆಗಳು

- ಸಮುದಾಯದ ಅಥವಾ ನೆರೆಹೊರೆಯ ಸಮುದಾಯಗಳ ಸಿಬ್ಬಂದಿ ಸಾಧ್ಯವಾದ ಮಟ್ಟಿಗೆ ಹಾಜರಿರುವುದು ಸೂಕ್ತ. ಸಿಬ್ಬಂದಿಯಲ್ಲಿ ಲಿಂಗ ಸಮಾನತೆಯನ್ನು ಖಚಿತಪಡಿಸಿಕೊಳ್ಳಿರಿ.
- ಸಿಬ್ಬಂದಿಯು ಸಮುದಾಯದ ಬಗ್ಗೆ ಸಕಾರಾತ್ಮಕ ಒಲವಿರುವಂತೆ ಅವರ ಗಮನಹರಿಸಿ. ಸಮುದಾಯದ ಪರಿವರ್ತನೆಗೆ ತನ್ನಲ್ಲೇ ಅನುವಂಶೀಯ ಗುಣಲಕ್ಷಣಗಳನ್ನು ಹೊಂದಿವೆ ಎಂದು ಸಂಸ್ಥೆಯ ಸಿಬ್ಬಂದಿಗೆ ತಿಳಿಸಲು ನೆರವಾಗಿರಿ.
- ಪ್ರಾರಂಭದಲ್ಲಿ ಸ್ತ್ರೀಯರು ಮತ್ತು ಮಕ್ಕಳು ಸುಲಭವಾಗಿ ಸಿಗುವುದರಿಂದ ಮತ್ತು ಮಾತುಕತೆಗೆ

ಸಿದ್ಧರಿರುವುದರಿಂದ ಅವರ ಮೇಲೆ ಗಮನ ಹರಿಸಿ.

- ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಭಾಷಾ ಮತ್ತು ಜಾತಿ ಸಂಬಂಧಿತ ವಿಚಾರಗಳು ಕ್ರಿಯಾತ್ಮಕವಾಗಿರುತ್ತವೆ. ಅವುಗಳನ್ನು ತಿಳಿದುಕೊಳ್ಳಲು ಆಸಕ್ತಿ ವಹಿಸಿ.
- ಕುಟುಂಬಗಳ ಅಥವಾ ಊರಿನ ಸಾಮಾನ್ಯ ಆಚರಣೆಗಳು ಅಥವಾ ಮರಣದ ಸಂದರ್ಭಗಳಲ್ಲಿ ಭಾಗವಹಿಸಲು ನಿಮ್ಮನ್ನು ನೀವೇ ಆಮಂತ್ರಿಸಿಕೊಳ್ಳಿ. ವಯೋವೃದ್ಧರು, ಅಸ್ವಸ್ಥರು, ವಿಕಲಚೇತನರು (PwD) ಮತ್ತು ಭಾದಿತರೊಂದಿಗೆ ಸಮಯ ಕಳೆಯಿರಿ. ಈ ಕ್ರಿಯೆ ನಿಮ್ಮ ಮತ್ತು ನಿಮ್ಮ ನಿಯೋಗದ ಬಗ್ಗೆ ನೇರ ಸಂದೇಶವನ್ನು ಕಳುಹಿಸುತ್ತದೆ.
- ಸೇವಾ ಸ್ಥಳದ ಸಾಮಾನ್ಯ ನಕ್ಷೆಯನ್ನು ಸಿದ್ಧ ಮಾಡಿ ಅದರಲ್ಲಿ ವಿವಿಧ ಜಾತಿ, ಧರ್ಮ ಮತ್ತು ಜನಾಂಗಗಳಿರುವ ನಿವಾಸಗಳನ್ನು ಗುರುತಿಸಿ. ಜೊತೆಗೆ ಲಭ್ಯವಿರುವ ಸಾಮಾನ್ಯ ಸೌಲಭ್ಯಗಳಾದ ಶಾಲೆ, ನೀರಿನ ತೊಟ್ಟಿ, ಆರೋಗ್ಯ ಕೇಂದ್ರ ಮತ್ತು ಸರ್ಕಾರಿ ಕಛೇರಿಗಳನ್ನು ನಮೂದಿಸಿರಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

## ಉಪಯುಕ್ತ ಎಚ್ಚರಿಕೆಗಳು

- ಯಾವ ನಕಾರಾತ್ಮಕ ಸಂಕೇತ ಅಥವಾ ಸಂದೇಶಗಳನ್ನು ಕಳುಹಿಸಬೇಡಿ.
- ನೀವು ಅಸಮಂಜಸ ಚಟುವಟಿಕೆಯನ್ನು ಗಮನಿಸಿದರೂ ಸದಸ್ಯರಿಗೆ ಸವಾಲು ಹಾಕಬೇಡಿ.
- ಈ ಹಂತದಲ್ಲಿ ನಕಾರಾತ್ಮಕ ವಿಶಯಾಂಶವನ್ನು ಎತ್ತಿ ಹಿಡಿಯಬೇಡಿ; ಅದನ್ನು ಬದಿಗಿಡುವುದು ಅಂಗೀಕಾರವೆಂದು ಅರ್ಥವಲ್ಲ.
- ತೀರ್ಪು ಕೊಡಬೇಡಿ ಅಥವಾ ಬುದ್ಧಿ ಹೇಳಲು ಹೋಗಬೇಡಿ ಅಥವಾ ಪುನಶ್ಚೇತನಕ್ಕೆ ಮುಂದಾಗಬೇಡಿ. ವಾಸ್ತವತೆಯನ್ನು 'ಹಣೆಬರಹ' ಎಂದು ಸಮರ್ಥಿಸಬೇಡಿ.
- ಮಕ್ಕಳೊಂದಿಗೆ ಆಟೋಟದ ಹೊರತು ಯಾವ ಚಟುವಟಿಕೆಗಳನ್ನು ಶುರು ಮಾಡಬೇಡಿ.
- ಜನರೊಂದಿಗೆ ನೀವಿರುವುದಾಗಿ ಹೇಳುವುದಲ್ಲದೇ ಬೇರೆ ವಾಗ್ದಾನಗಳನ್ನು ಮಾಡಬೇಡಿ.
- ನಿಮ್ಮ ಕಛೇರಿಯ ಸಮಯ ಮುಗಿದಿದ್ದರೂ ತಕ್ಷಣ ನಡೆಯುತ್ತಿರುವ ಮಾತುಕತೆಯನ್ನು ನಿಲ್ಲಿಸಬೇಡಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

## ಸೂಚಿಗಳು

1. ಸುಮಾರು XXX ಮಕ್ಕಳು, XXX ಯುವಜನರು, XXX ಮಹಿಳೆಯರು ಮತ್ತು XXX ಪುರುಷರು ನನ್ನೊಡನೆ ಗೆಳೆತನದಿಂದಿದ್ದಾರೆ.
2. XXX ಮಹಿಳೆಯರು, ವೃದ್ಧರು ಮತ್ತು ವಿಕಲಚೇತನರು ನನ್ನೊಡನೆ ತಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಹಂಚಿಕೊಂಡಿರುತ್ತಾರೆ.
3. XXX ಕುಟುಂಬಗಳು ನನಗೆ ಒಂದು ಲೋಟ ನೀರನ್ನು ಅಥವಾ ಚಹಾವನ್ನು ಕೊಟ್ಟಿರುತ್ತಾರೆ.
4. XXX ಯುವ ಬಾಲಕರು ಮತ್ತು ಬಾಲಕಿಯರು ನನ್ನೊಡನೆ ____, ____, ____ ಕಾಳಜಿಗಳನ್ನು ಹಂಚಿಕೊಂಡಿರುತ್ತಾರೆ.
5. XXX ಮಕ್ಕಳು ನನ್ನನ್ನು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿರುತ್ತಾರೆ.

6. ಸುಮಾರು XXX ಸಾಂಪ್ರದಾಯಿಕ, ಸ್ಥಳೀಯ ಮತ್ತು ಧಾರ್ಮಿಕ ಮುಖಂಡರು ನನ್ನೊಡನೆ ಸಮಾಲೋಚನೆ ನಡೆಸಿದರು.
7. XXX ನನ್ನನ್ನು ಸಹಾಯ ಮತ್ತು ಮಾರ್ಗದರ್ಶನಕ್ಕೆ ವಿನಂತಿಸಿದರು.
8. XXX ನಾನು ಅವರೊಂದಿಗೆ ಸಮಯ ಕಳೆದು ಅವರನ್ನು ಆಲಿಸಿದ್ದರಿಂದ ನನ್ನನ್ನು ಪ್ರಶಂಸಿಸಿದರು.
9. XXX ವಿಭಿನ್ನ ವ್ಯಕ್ತಿಗಳು ಪ್ರತ್ಯೇಕ ಸನ್ನಿವೇಶದಲ್ಲಿ ಗುರುತಿಸಲಾಗಿದ್ದು ಅವರು ಸಮುದಾಯದ ಸದಸ್ಯರ ಪರ/ ವಿರೋಧವಾಗಿ ವರ್ತಿಸಿದರು.
10. XXX ದೈನಂದಿನ ಜೀವನ ಕ್ರಮವನ್ನು ಗಮನಿಸಿದಲ್ಲದೇ ಸಮುದಾಯದ ಸದಸ್ಯರು ಹೇಗೆ ಸಂಘಟಿಸುತ್ತಾರೆ ಎಂಬುದನ್ನು ಗುರುತಿಸಿರುತ್ತಾರೆ.
11. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

# ಸ್ವಯಂ ಪರಿಶೀಲನೆ

ಇದು ಸ್ವಯಂ ಪರಿಶೀಲನೆಯ ಸಾಧನ, ಸೂಕ್ತ ಉತ್ತರಕ್ಕೆ ✓ ಗುರುತು ಹಾಕಿ 'ಖಾತ್ರಿ ಇಲ್ಲ' ಎಂದರೆ, ನೀವು ಒಪ್ಪುವುದಿಲ್ಲ ಅಥವಾ ವಿರೋಧಿಸುವುದಿಲ್ಲ ಎಂದರ್ಥ

| ಕ್ರ.ಸಂ | ಪರಿಶೀಲಿಸಬೇಕಾದ ವಿಷಯಾಂಕ | ಧೃಢವಾಗಿ ಒಪ್ಪುತ್ತೇನೆ | ಒಪ್ಪುತ್ತೇನೆ | ಖಾತ್ರಿ ಇಲ್ಲ | ಒಪ್ಪುವುದಿಲ್ಲ | ಬಲವಾಗಿ ಒಪ್ಪುವುದಿಲ್ಲ |
|---|---|---|---|---|---|---|
| ೧ | ಸಮುದಾಯದ ಸದಸ್ಯರು ವಾಸಿಸುವ ಸ್ಥಳಗಳಲ್ಲಿ ನಡೆದಾಡುವಾಗ ನಾನು ಪ್ರಶಾಂತನಾಗಿದ್ದೆ. | | | | | |
| ೨ | ಸಮುದಾಯದ ಸದಸ್ಯರು ನನ್ನ ಶುಭ ವಂದನೆಗೆ ಪ್ರತಿ ವಂದಿಸಿದರು. | | | | | |
| ೩ | ಶೇಕಡ ೬೦ರಷ್ಟು ಕುಟುಂಬಗಳು ನನ್ನನ್ನು ಅವರ ಮನೆಗಳಿಗೆ ಆಹ್ವಾನಿಸಿದರು. | | | | | |
| ೪ | ಕೆಲವು ಜನರು ನನ್ನನ್ನು ಬೆದಸಿದಾಗ ನಾನು ಮನಶಾಂತಿಯನ್ನು ಕಳೆದುಕೊಳ್ಳಲಿಲ್ಲ. | | | | | |
| ೫ | ಕೆಲವು ಸ್ತ್ರೀಯರು ತಮ್ಮ ಜೀವನ ಕಥೆಗಳನ್ನು ನನ್ನೊಂದಿಗೆ ನಿರಾಳವಾಗಿ ಹಂಚಿಕೊಂಡರು. | | | | | |
| ೬ | ಕೆಲವು ಸದಸ್ಯರು ತಮ್ಮ ಬಗ್ಗೆ ನನ್ನೊಡನೆ ಹಂಚಿಕೊಂಡಾಗ ನನಗೆ ಕಿರಿಕಿರಿಯಾಯಿತು. | | | | | |
| ೭ | ಸಮಾಜದ ವಾಸ್ತವತೆಯನ್ನು ಕಂಡಾಗ ನನ್ನಷ್ಟಕ್ಕೆ ನಾನು ಖಿನ್ನನಾದೆ. | | | | | |
| ೮ | ನನ್ನನ್ನು ಮಕ್ಕಳು ಸ್ಪರ್ಶಿಸಿದಾಗ ಹಿತಕರವಾಗಲಿಲ್ಲ. | | | | | |
| ೯ | ಯುವ ಮಾದಕ ವ್ಯಸನಿಗಳನ್ನು ಕಂಡಾಗ ನಾನು ಕೋಪಗೊಂಡೆ. | | | | | |
| ೧೦ | ಕೆಲವು ಜನರು ನನ್ನನ್ನು ಅನುಮಾನದಿಂದ ಕಂಡರು. | | | | | |

- ನಿಮ್ಮ ಪರಿಶೀಲನಾ ಪಟ್ಟಿಗೆ ನೀವೇ ಅಂಕಗಳನ್ನು ಕೊಡಿ: ಪ್ರಶ್ನೆ ೧ ರಿಂದ ೫ಕ್ಕೆ ಹೀಗೆ ಮಾಡಿ: ಧೃಢವಾಗಿ ಒಪ್ಪುತ್ತೇನೆ=+೨, ಒಪ್ಪುತ್ತೇನೆ=+೧, ಖಾತ್ರಿ ಇಲ್ಲ=೦, ಒಪ್ಪುವುದಿಲ್ಲ=–೧, ಬಲವಾಗಿ ಒಪ್ಪುವುದಿಲ್ಲ=–೨
- ಪ್ರಶ್ನೆ ೬ ರಿಂದ ೧೦ಕ್ಕೆ ವ್ಯತಿರಿಕ್ತ ಅಂಕ ಕೊಡಿ: ಧೃಢವಾಗಿ ಒಪ್ಪುತ್ತೇನೆ=–೨, ಒಪ್ಪುತ್ತೇನೆ=–೧, ಖಾತ್ರಿ ಇಲ್ಲ=೦, ಒಪ್ಪುವುದಿಲ್ಲ=+೧, ಬಲವಾಗಿ ಒಪ್ಪುವುದಿಲ್ಲ=+೨

- ಒಟ್ಟು ಅಂಕಗಳು: ನೀವು ೧೫೩ಕ್ಕೂ ಅಧಿಕ ಅಂಕಗಳನ್ನು ಪಡೆದಿದ್ದರೆ ನೀವು ಸುರಕ್ಷಿತ ಮಾರ್ಗದಲ್ಲಿದ್ದೀರಿ: ೧೫೩ಕ್ಕಿಂತ ಕಡಿಮೆ ಇದ್ದರೆ ಕೆಲವು ವಿಭಾಗಗಳಲ್ಲಿ ನೀವು ಸುಧಾರಿಸಿಕೊಳ್ಳಬೇಕು ಮತ್ತು ಕಲಿಯಬೇಕು.
- ನಿಮ್ಮ ಅಂಕ ಮತ್ತು ಭಾವನೆಗಳನ್ನು ಸಂಸ್ಥೆಯ ಸಿಬ್ಬಂದಿಯೊಂದಿಗೆ ಹಂಚಿಕೊಳ್ಳಿ.

## ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

೧. ಸಮುದಾಯದ ಸದಸ್ಯರೊಡನೆ ಮಾತನಾಡಿದಾಗ ನೀವು ಕಂಡದ್ದೇನು? ಕೇಳಿದ್ದೇನು? ಗಮನಿಸಿದ್ದೇನು?

೨. ಸಾಂಪ್ರದಾಯಿಕ ವ್ಯಕ್ತಿಗಳು, ಧಾರ್ಮಿಕ ಮುಖಂಡರ ಪರಿಚಿತ ಮುಖಗಳ ಪಟ್ಟಿ ಮಾಡಿ ಮತ್ತು ಸಾಮಾನ್ಯ ಸೌಕರ್ಯಗಳ ಪಟ್ಟಿ ಮಾಡಿ.

೩. ನಿಮ್ಮನ್ನು ಸಮುದಾಯದ ಸದಸ್ಯರು ಸ್ವಾಗತಿಸಿ ಅಂಗೀಕರಿಸಿದೆ? ಹೌದಾದರೆ ಹೇಗೆ? ಉದಾಹರಣೆಗಳೊಂದಿಗೆ ವಿವರಿಸಿ.

೪. ಸಮುದಾಯದ ಸದಸ್ಯರು ಅಥವಾ ಪರಿಪೋಷಕ ಸಂಸ್ಥೆ ನಿಮ್ಮಲ್ಲಿ ನಂಬಿಕೆ ಮತ್ತು ಆತ್ಮವಿಶ್ವಾಸ ವ್ಯಕ್ತಪಡಿಸಿರುವುದನ್ನು ಉದಾಹರಣೆಗಳೊಂದಿಗೆ ವಿವರಿಸುವಿರಾ?

೫. ನಿಮ್ಮ ಮತ್ತು ಸಂಸ್ಥೆಯ ಬಗ್ಗೆ ನೀವು ಕೇಳಿದ ಟೀಕೆ ಟಿಪ್ಪಣಿಗಳಾವುವು?

೬. ವೈಯಕ್ತಿಕವಾಗಿ ನೀವು ಯಾವುದಾದರೂ ಸವಾಲುಗಳನ್ನು ಎದುರಿಸಿರುವಿರಾ? ಅವು ಯಾವುವು?

೭. ಸಮುದಾಯದ ಭೇಟಿಯಿಂದ ನಿಮ್ಮಲ್ಲಿ ಬದಲಾವಣೆಯಾಗಿದೆಯೇ? ಯಾವ ಬದಲಾವಣೆ?

೮. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

## ಸಮುದಾಯದ ಸಂಚಲನಗಾರರ ಮನೋಭಾವ ಮತ್ತು ವರ್ತನೆ ನನ್ನಲ್ಲಿ ಪರಿವರ್ತನೆ ತಂದಿದೆ

"ಪ್ರಾರಂಭದಲ್ಲಿ ಸಂಸ್ಥೆಯ ಸಿಬ್ಬಂದಿ ನಮ್ಮ ಸ್ಥಳವನ್ನು ಸಂಧಿಸಿದಾಗ ನಾವು ಅವರನ್ನು ಸಂಶಯದಿಂದ ಕಂಡೆವು. ಅವರು ಕ್ರೈಸ್ತ ಸಂಸ್ಥೆಯವರಾದ್ದರಿಂದ ಅವರ ಉದ್ದೇಶಗಳನ್ನು ಪ್ರಶ್ನಿಸಿದೆವು. ಒಮ್ಮೆ ಅವರನ್ನು ನೇರವಾಗಿ ಎದುರಿಸಿ ಅವರು ಮತಾಂತರ ಮಾಡಲು ಬಂದಿರುವರೋ ಎಂದು ಕೇಳಿದೆವು. ಕ್ರಮೇಣ ನಾನು ಕಂಡದ್ದು ಏನೆಂದರೆ, ಕ್ಷೇತ್ರದ ಸಿಬ್ಬಂದಿ ನಮ್ಮ ಅಥವಾ ನೆರೆಹೊರೆಯ ಸಮುದಾಯದವರೇ ಆಗಿದ್ದರು ಮತ್ತು ಅವರು ಕ್ರೈಸ್ತರಾಗಿರಲಿಲ್ಲ. ಯಾರೊಬ್ಬರು ಕ್ರೈಸ್ತ ಧರ್ಮದ ಬಗ್ಗೆ ಮಾತನಾಡಲಿಲ್ಲ. ಪ್ರತಿಯಾಗಿ ಸಮುದಾಯದ ಸಿಬ್ಬಂದಿ ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಅವರು ಎಲ್ಲಾ ಕುಟುಂಬಗಳಲ್ಲಿ ಗಂಟೆಗಟ್ಟಲೆ ಸಮಯವನ್ನು ಕಳೆಯುತ್ತಿದ್ದರು, ನಮ್ಮ ಕಥೆಗಳನ್ನು ಕೇಳುತ್ತಿದ್ದರು, ನಮ್ಮ ಸಂತೋಷ ಸಂದರ್ಭಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರ ಮನೋಭಾವ, ಸಂಪರ್ಕ ಮತ್ತು ವರ್ತನೆ ಭಿನ್ನವಾಗಿದ್ದವು. ಅವರ ಸೌಜನ್ಯ, ವಿಶ್ವಾಸನೀಯತೆಯಿಂದ ಅವರು ನಂಬಿಕೆಗೆ ಅರ್ಹರು ಎಂಬುದನ್ನು ಕಂಡುಕೊಂಡೆ. ಈ ಅನುಭವ ನನ್ನ ಆಲೋಚನಾ ರೀತಿಯನ್ನು ಬದಲಾಯಿಸಿ ಅವರಲ್ಲಿ ವಿಶ್ವಾಸವಿಡುವಂತೆ ಮಾಡಿತು" ಎಂದರು ಉಜ್ಜಯಿನಿಯ ಶ್ರೀರಾಮ್‌ರವರು. ಈ ಅವಲೋಕನವನ್ನು ಒಂದು ಸಮುದಾಯದ ಸದಸ್ಯರು ಯೋಜನಾ ಸ್ಥಳದಲ್ಲಿ ಮಾಡಿದರು. ಸಂಸ್ಥೆಯ ನಿರ್ದೇಶಕರು ಈ ಪ್ರತಿಕ್ರಿಯೆಯನ್ನು ಅಂಗೀಕರಿಸಿದರು. ಸಮಾಜ ಸೇವೆಯಲ್ಲಿ ನಂಬಿಕೆ ಮತ್ತು ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದು ಸವಾಲುಗಳಲ್ಲಿ ಒಂದಾಗಿದ್ದು ಅದನ್ನು ಸ್ಥಾಪಿಸಲು ಅಧಿಕ ಸಮಯ ತಗಲುತ್ತದೆ.

CHAPTER 3

# ನಿಯೋಗ ಮತ್ತು ಮೌಲ್ಯಗಳ ಹಂಚಿಕಾ ಅರಿವಿನ ಅಭಿವೃದ್ಧಿ



# ಸಮುದಾಯ ಸಂಚಲನಾ ಪ್ರಕ್ರಿಯೆಗಳಲ್ಲಿ ನಿಯೋಗ ಮತ್ತು ಮೌಲ್ಯಗಳ ಹಂಚಿಕೆಯ ಅರಿವು ಹಾಗೂ ಅಭಿವೃದ್ಧಿ


## ಉದ್ದೇಶ

ಸಮುದಾಯದ ಸದಸ್ಯರು ತಮ್ಮ ಕೆಲಸವನ್ನು ಆರಂಭಿಸಲು ಭೂಮಿಕೆಯನ್ನು ಸಿದ್ಧ ಮಾಡುವ ಎರಡನೆಯ ಹೆಜ್ಜೆ ಇದು. ಅದು ಸಮುದಾಯದ ಸದಸ್ಯರೊಡನೆ ಸಂವಾದ ಮತ್ತು ವಿಚಾರ ವಿನಿಮಯದಿಂದ ಶುರುವಾಗುತ್ತದೆ. ಸಮುದಾಯ ಸಂಚಲನಾಕಾರರು ಅಥವಾ ಅಭಿವೃದ್ಧಿ ಅಭ್ಯಾಸಿತರು (ಸಿಬ್ಬಂದಿ) ಸಮುದಾಯದ ಸದಸ್ಯರನ್ನು ಒಂದಾಗಿ ಬಂಧಿಸುವ ಸಾಮಾನ್ಯ ಹಿತಾಸಕ್ತಿ ಅಭಿಲಾಷೆಗಳನ್ನು ಕಂಡುಕೊಳ್ಳಲು ಸಹಾಯ ಮಾಡುತ್ತಾರೆ. ಅವು ಅವರ ಜೀವನವನ್ನು ಸುಧಾರಿಸುವ ಗುರಿಯನ್ನು ಹೊಂದಿರುತ್ತದೆ. ಇದೇ ಸಂದರ್ಭದಲ್ಲಿ ಸಮುದಾಯದ ಅನುವಂಶೀಯ ಮೌಲ್ಯಗಳಾದ ಸೌಹಾರ್ದ, ಅನುಕಂಪ, ಸಾಮಾನ್ಯ ಒಳಿತು (ಸರ್ವರ ಕಲ್ಯಾಣ) ಸೋದರತ್ವ, ಸಾಮಾಜಿಕ ನ್ಯಾಯ, ಭಾದಿತರ ಬಗ್ಗೆ ಕಾಳಜಿ ಮತ್ತು ಪ್ರಕೃತಿಯ ರಕ್ಷಣೆಯನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಈ ಕ್ರಿಯೆ ಸದಸ್ಯರಿಗೆ ತಾವು ಯಾರು? ಅವರ ಶಕ್ತಿ ಮೂಲ ಮತ್ತು ಸಂಪನ್ಮೂಲಗಳ ಬಗ್ಗೆ ಆಲೋಚಿಸಲು ಅವಕಾಶ ಕೊಡುವುದಲ್ಲದೆ ತಮ್ಮ ಕನಸು ಮತ್ತು ಅಭಿಲಾಷೆಗಳನ್ನು ವ್ಯಕ್ತಪಡಿಸುವ ವೇದಿಕೆಯನ್ನು ಸೃಷ್ಟಿಮಾಡುತ್ತದೆ. ಈ ಹಂತದ ಪ್ರಮುಖ ಫಲವೇನೆಂದರೆ, ಸಮುದಾಯದ ಸದಸ್ಯರು ತಮ್ಮ ಗಾಢ ಹಿತಾಸಕ್ತಿಗಳನ್ನು ಜಾತಿ, ಧರ್ಮ, ಲಿಂಗವನ್ನು ಪರಿಗಣಿಸದೇ ಕೌಶಲ್ಯ, ಸಾಮರ್ಥ್ಯವನ್ನು ತೋರ್ಪಡಿಸುತ್ತಾರೆ. ಈ ಜನರ ದಿನನಿತ್ಯದ ಜೀವನದಲ್ಲಿ ಸಜೀವವಾಗಿರುವ ಮೌಲ್ಯಗಳನ್ನು ಅಭಿವೃದ್ಧಿ ಪಡಿಸಿದರೆ ಅವರ ವೈಯಕ್ತಿಕ ಹಾಗೂ ಸಾಮೂಹಿಕ ಜೀವನ ಹಂಚಿಕೆಯ ಮುಖಾಂತರ ಸಂಪತ್ಭರಿತವಾಗುವುದರಲ್ಲಿ ಅನುಮಾನವಿಲ್ಲ.

# ಕಾಲಾವಧಿ

ಸಾಮೂಹಿಕ ಮತ್ತು ಸಾಮಾನ್ಯ ಜ್ಞಾನವನ್ನು ಗಳಿಸಲು ಸರಿಸುಮಾರು ೮ ರಿಂದ ೯ ತಿಂಗಳುಗಳು ಬೇಕಾಗುತ್ತದೆ.

### ಸೇವಾ ನಿಯೋಗ ಮತ್ತು ಮೌಲ್ಯಗಳ ಹಂಚಿಕೆ




# ಸಾಗುವ ಮಾರ್ಗಗಳು

- ಸಾಮಾನ್ಯ ಹಿತಾಸಕ್ತಿಯ ಮಾತುಕತೆಯ ನಂತರ ತಮ್ಮನ್ನೇ ತೊಡಗಿಸಿಕೊಳ್ಳಲು ಅಪೇಕ್ಷಿಸುವ ವ್ಯಕ್ತಿ ಮತ್ತು ಕುಟುಂಬಗಳನ್ನು ಗುರುತಿಸಿರಿ.
- ಸಣ್ಣ, ಅನೌಪಚಾರಿಕ ಮತ್ತು ಸ್ವಯಂಪ್ರೇರಿತ ಕೂಟಗಳಲ್ಲಿ ಜನರನ್ನು ಜೊತೆಗೂಡಿಸಿರಿ. ಅವರು ವಿಭಿನ್ನ ವಯಸ್ಸು, ಲಿಂಗ, ಉದ್ಯೋಗ ಮತ್ತು ಹಿತಾಸಕ್ತಿಯುಳ್ಳವರಾಗಿದ್ದು ಅವರ ಜೀವನ, ಜೀವನಶೈಲಿ ಮತ್ತು ಜೀವನೋಪಾಯದ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವುದರಿಂದ ಪ್ರಾರಂಭಿಸಬೇಕು.
- ಆ ಸಮುದಾಯದಲ್ಲಿ ಗೌರವಾನ್ವಿತ ವ್ಯಕ್ತಿಗಳು ಯಾರು? ಅವರನ್ನು ಎಲ್ಲಾ ಜನರು ಏಕೆ ಸನ್ಮಾನಿಸುತ್ತಾರೆ ಎಂಬುದನ್ನು ಕಂಡುಕೊಳ್ಳಬೇಕು.
- ಯಾವ ಸಂದರ್ಭ, ಸಮಾರಂಭಗಳಲ್ಲಿ ಇಡೀ ಸಮುದಾಯ ಜೊತೆಗೂಡುತ್ತದೆ ಮತ್ತು ಅವರು ಆ ದಿನಗಳಲ್ಲಿ ಮನಸಾರೆ ಏನನ್ನು ಸಂಭ್ರಮಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು.
- ಸಮುದಾಯದ ಸದಸ್ಯರು ತಾವು ಅಥವಾ ಇತರರು ಸಹಾಯ ಮಾಡಿದ್ದನ್ನು ಜ್ಞಾಪಕಕ್ಕೆ ತಂದುಕೊಳ್ಳಲಿ ಅಥವಾ ತಾವೇ ಕಡುಕಷ್ಟದಲ್ಲಿರುವಾಗ ಸಹಾಯ ಪಡೆದ ಸಂದರ್ಭವನ್ನು ಸ್ಮರಿಸಿ ಹಂಚಿಕೊಳ್ಳಲು ಪ್ರೋತ್ಸಾಹಿಸಿರಿ.
- ಜನರು ಸೌಹಾರ್ದ, ಅನುಕಂಪ, ಬಡವರ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಅನುಭವಿಸಿದ, ನೋಡಿದ ಅಥವಾ ಕೇಳಿದ ಸಂದರ್ಭಗಳನ್ನು ಪರ್ಯಾಲೋಚಿಸಿ ಅವುಗಳನ್ನು ನಿರೂಪಿಸಲು ಸದಸ್ಯರನ್ನು ಉತ್ತೇಜಿಸಿರಿ.
- ಸಕಾರಾತ್ಮಕವಾಗಿ ಸಮುದಾಯದ ಶಕ್ತಿ ಮೂಲ ಮತ್ತು ಸಾಮಾರ್ಥ್ಯಗಳನ್ನು ಸಮರ್ಥಿಸಿರಿ ಮತ್ತು ಅವರ ಸುಪ್ತ ಶಕ್ತಿಯನ್ನು ಪ್ರಕಾಶಕ್ಕೆ ತನ್ನಿರಿ.
- ಸಮುದಾಯದಲ್ಲಿರುವ ಸಂಪನ್ಮೂಲಗಳಾದ ಕೌಶಲ್ಯ, ಸುಪ್ತಶಕ್ತಿ, ಜ್ಞಾನ, ಮೂಲಭೂತ ಸೌಕರ್ಯ ಮತ್ತು ಹಣಕಾಸು ಉಳ್ಳವರ ಬಗ್ಗೆ ಚರ್ಚೆಗೆ ಚಾಲನೆ ಕೊಟ್ಟು ಅವರನ್ನು ಗುರುತಿಸಿರಿ.
- ಸಮುದಾಯದಲ್ಲಿರುವ ವಿವಿಧ ವ್ಯಕ್ತಿಗಳ ಶಕ್ತಿಮೂಲಗಳನ್ನು ಗುರುತಿಸಲು ಹಾಗೂ ಅವರು ತಮ್ಮ

ಜ್ಞಾನ ಮತ್ತು ಕೌಶಲ್ಯಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು ಹೇಗೆ ಎಂಬುದರ ಕುರಿತು ಸದಸ್ಯರ ಚರ್ಚೆಗೆ ಸಾತು ನೀಡಿರಿ.

- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

## ಉಪಯುಕ್ತ ಸೂಚನೆಗಳು

- ಸಮುದಾಯದ ಸದಸ್ಯರಿಗೆ ಪರಿಪೋಷಕವಾದ ಸಮಯದಲ್ಲಿ ಸಭೆಯನ್ನು ಆಯೋಜಿಸಿರಿ.
- ಸಂವಾದವನ್ನು ಸಣ್ಣ ಮತ್ತು ಪರಿಚಿತ ಗುಂಪಿನೊಂದಿಗೆ ಪ್ರಾರಂಭಿಸಿರಿ. ಎಲ್ಲರ ಸಹಭಾಗಿತ್ವವನ್ನು ನಿಖರಗೊಳಿಸಿರಿ.
- ಅಸ್ತಿತ್ವದಲ್ಲಿರುವ ಅನೌಪಚಾರಿಕ ಗುಂಪು ಅಥವಾ ಸಮುದಾಯ ಸ್ವೀಕಾರ ಮಾಡಿರುವ ಜನರನ್ನು ಗುರುತಿಸಿ ಅವರನ್ನು ಅರ್ಥಮಾಡಿಕೊಳ್ಳಿರಿ.
- ಸಮುದಾಯ ಮತ್ತು ಸಾಂಪ್ರದಾಯಿಕ ಮುಖಂಡರಿಗೆ ಮಾಹಿತಿಯನ್ನಿತ್ತು ಅವರನ್ನು ನಿಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಿರಿ.
- ಸಮುದಾಯದಲ್ಲಿರುವ ಹಿರಿಯ ಸದಸ್ಯರನ್ನು ಸನಿಹದಲ್ಲಿಟ್ಟುಕೊಳ್ಳಿರಿ. ಅವರು ಮರೆಯದ ಸಮುದಾಯದ ಚರಿತ್ರೆ ಮತ್ತು ಅನುಭವಗಳ ಮೇಲೆ ಬೆಳಕು ಚೆಲ್ಲಬಹುದು.
- ವಿವಿಧ ಸಣ್ಣ ಗುಂಪುಗಳಿಂದ ವಿಭಿನ್ನ ಅಥವಾ ವಿರೋಧ ವ್ಯಕ್ತಪಡಿಸುವ ಚಿಂತನೆಗಳು ಅಥವಾ ಅಭಿಪ್ರಾಯಗಳು ಹೊರಹೊಮ್ಮಲು ಅವಕಾಶ ಕೊಡಿರಿ.
- ಸದಸ್ಯರು ತಮ್ಮ ಭಿನ್ನಾಭಿಪ್ರಾಯ ಮತ್ತು ವ್ಯತ್ಯಾಸಗಳ ಬಗ್ಗೆ ಆಲೋಚಿಸುವಂತೆ ಚರ್ಚೆಗೆ ಚಾಲನೆ ಕೊಡಿರಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

## ಉಪಯುಕ್ತ ಎಚ್ಚರಿಕೆಗಳು

- ಸಮುದಾಯ ಮತ್ತು ಅದರ ಬಲಾಬಲಗಳ ಬಗ್ಗೆ ಕೀಳರಿಮೆಯನ್ನು ಇಟ್ಟುಕೊಳ್ಳಬೇಡಿ.
- ಕೆಲವರ ನಿರಾಶಾವಾದಿ ಟೀಕೆ ಅಥವಾ ಹೊರವಲಯದಲ್ಲಿ ಗೋಚರಿಸುವ ಬಡತನ ಅಥವಾ ಅನಾರೋಗ್ಯಕರ ಜೀವನದಂತಹ ಹೊರನೋಟದಿಂದ ಮಾರುಹೋಗಬೇಡಿ.
- ಈ ಹಂತದಲ್ಲಿ ನಕಾರಾತ್ಮಕ ಟೀಕೆ ಅಥವಾ 'ನೈತಿಕತೆ' ಸಂಬಂಧಿತ ವಿಷಯಗಳನ್ನು ಚರ್ಚಿಸಬೇಡಿ.
- ಸಂಘರ್ಷವನ್ನು ಸೃಷ್ಟಿಸುವ ಕೆಂಡಕಾರುವ ಸಮಸ್ಯಾತ್ಮಕ ವಿಷಯಗಳ ಕಡೆಗೆ ಅವಸರದಿಂದ ಧಾವಿಸಬೇಡಿ.
- ನೀವು ಹೇಳಿದ್ದಕ್ಕೆಲ್ಲಾ 'ಹೌದು' ಎನ್ನುವ ಸದಸ್ಯರನ್ನು ಉತ್ತೇಜಿಸಬೇಡಿ. ಆದರೆ ಅವರ ಮುಕ್ತ ಮಾತುಗಳನ್ನು ಗೌರವಿಸಿರಿ.
- ಸಮುದಾಯದ ಇತಿಹಾಸ ಅಥವಾ ಸಂಸ್ಕೃತಿ ಅಥವಾ ಧಾರ್ಮಿಕ ಆಚರಣೆಯ ಬಗ್ಗೆ ತೂಕವಿಲ್ಲದ ಹಗುರ ನಿರೂಪಣೆಯನ್ನು ಕ್ರೋಢೀಕರಿಸುವ ಶೋಧನೆಯನ್ನು ವಿರೋಧಿಸಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

# ಸೂಚಿಗಳು

1. XXX ಮಹಿಳೆಯರು, XXX ಪುರುಷರು, XXX ಯುವಬಾಲಕಿಯರು, XXX ಯುವಬಾಲಕರು ಮತ್ತು XXX ಮಕ್ಕಳೊಂದಿಗೆ ಅನೌಪಚಾರಿಕ ಸಭೆಯನ್ನು ಏರ್ಪಡಿಸಲಾಯಿತು.
2. ಹಿಂದೂ ಧರ್ಮಕ್ಕೆ ಸೇರಿದ ಸುಮಾರು XXX ಸದಸ್ಯರು, ಇಸ್ಲಾಂ ಧರ್ಮವನ್ನು ಅನುಸರಿಸುತ್ತಿರುವ ಸುಮಾರು XXX ಸದಸ್ಯರು, ಇತರ ಧರ್ಮಗಳ (ಕ್ರೈಸ್ತರು, ಸಾಮ ಅಥವಾ ಬೌದ್ಧ) XXX ಜನರನ್ನು ಅನೌಪಚಾರಿಕ ಸಭೆಗಳಲ್ಲಿ ಭೇಟಿ ಮಾಡಲಾಯಿತು.
3. ದಲಿತ ವರ್ಗಕ್ಕೆ ಸೇರಿದ ಸುಮಾರು XXX ಸದಸ್ಯರನ್ನು ಇತರ ಜಾತಿಗೆ ಸೇರಿದ ಸುಮಾರು XXX ಸದಸ್ಯರನ್ನು ಅನೌಪಚಾರಿಕ ಸಭೆಗಳಲ್ಲಿ ಸಂಧಿಸಲಾಯಿತು.
4. XXX ಮಹಿಳೆಯರು ಮತ್ತು XXX ಯುವ ಜನರು ವಿಶೇಷ ಕೌಶಲ್ಯವುಳ್ಳವರಾಗಿದ್ದು ಅವರನ್ನು ಗುರುತಿಸಲಾಯಿತು. ಅವರು ಕೊರತೆಯುಳ್ಳ ಇತರ ಸಮುದಾಯದ ಸದಸ್ಯರೊಂದಿಗೆ ತಮ್ಮ ಪ್ರತಿಭೆಯನ್ನು ಹಂಚಿಕೊಳ್ಳುವ ಉದಾರ ಮನಸ್ಸನ್ನು ತೋರ್ಪಡಿಸಿದರು.
5. ಮುಖಂಡತ್ವದ ಗುಣಲಕ್ಷಣಗಳುಳ್ಳ XXX ಮಹಿಳೆಯರು ಮತ್ತು XXX ಯುವಜನರನ್ನು ಕಂಡುಹಿಡಿಯಲಾಯಿತು.
6. XXX ಧಾರ್ಮಿಕ ಅಥವಾ ಸಾಂಪ್ರದಾಯಿಕ ಮುಖಂಡರು ತಮ್ಮ ಸಹಕಾರ ಮತ್ತು ಬೆಂಬಲವನ್ನು ವಾಗ್ದಾನಿಸಿರುವರು.
7. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

**ಸಮುದಾಯದ ಸಾಮಾನ್ಯ ಹಿತಾಸಕ್ತಿ, ಮೌಲ್ಯ ಮತ್ತು ಅಭಿಲಾಷೆಗಳ ಅನ್ವೇಷಣೆ**

| | ಎಲ್ಲರನ್ನು ಬಂಧಿಸುವ ಸಾಮಾನ್ಯ ಹಿತಾಸಕ್ತಿ | | | | | ಗಮನಾರ್ಹ ಮೌಲ್ಯಗಳು | ಸಾಮಾನ್ಯ ಅಭಿಲಾಷೆಗಳು |
|---|---|---|---|---|---|---|---|
| | ಮಹಿಳೆಯರು | ಪುರುಷರು | ಯುವ ಬಾಲಕಿಯರು | ಯುವ ಬಾಲಕರು | ಮಕ್ಕಳು | | |
| ತಿಂಗಳು ೧ | | | | | | | |
| ತಿಂಗಳು ೨ | | | | | | | |
| ತಿಂಗಳು ೩ | | | | | | | |
| ತಿಂಗಳು ೪ | | | | | | | |
| ತಿಂಗಳು ೫ | | | | | | | |

ಗಮನಿಸಿ: ಹಿತಾಸಕ್ತಿ ಎಂದರೆ ಸಮುದಾಯದ ಸದಸ್ಯರನ್ನು ಒಂದಾಗಿ ಬಂಧಿಸುವುದನ್ನು ತಿಳಿಯಲು ಅಥವಾ ಕಲಿಯಲು ಅಪೇಕ್ಷಿಸುವುದು.

# ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

1. ಅನೌಪಚಾರಿಕ ಸಭೆಯಲ್ಲಿ ಸಮುದಾಯದ ಎಲ್ಲ ವರ್ಗದ ಜನರು ಸಮರ್ಪಕವಾಗಿ ಪ್ರತಿನಿಧಿಸಲ್ಪಟ್ಟಿದ್ದೇ? ಇಲ್ಲವಾದರೆ ಏಕೆ?
2. ಯಾವುದಾದರೂ ಗುಂಪು ಬಿಟ್ಟು ಹೋಗಿದೆಯೇ ಅಥವಾ ತಲುಪಲಾಗದೆ ಹೋಯಿತೇ? ಹಾಗಾದರೇ ಎದುರಾದ ತೊಡಕುಗಳೇನು?

3. ಸಾಮಾನ್ಯ ಹಿತಾಸಕ್ತಿಗಳು, ಅಮೂಲ್ಯ ಮೌಲ್ಯ, ಶಕ್ತಿಮೂಲ ಮತ್ತು ಅವಕಾಶಗಳನ್ನು ಸಮುದಾಯದ ಸದಸ್ಯರಿಂದ ಗುರುತಿಸಲು ಕಷ್ಟಕರವಾಗಿತ್ತೇ ಅಥವಾ ಸುಲಭವಾಗಿತ್ತೇ?
4. ಸಾಮೂಹಿಕ ಆತ್ಮೀಯತೆಯ ಸ್ಪಂದನೆಯಿಂದ ಸಮುದಾಯವಾಗುತ್ತದೆ ಎಂಬ ಕೆಲವು ಇಂಗಿತಗಳು ಈ ಅಭ್ಯಾಸ ಅವರಲ್ಲಿ ಜಾಗೃತಗೊಳಿಸಿತೇ?
5. ಸಮುದಾಯದ ಸದಸ್ಯರಲ್ಲಿ ಈ ಅಭ್ಯಾಸ ಯಾವುದಾದರೂ ಸಕಾರಾತ್ಮಕ ಸಾಧ್ಯತೆಗಳಿಗೆ ಅವಕಾಶ ಮಾಡಿಕೊಟ್ಟಿತೇ?
6. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

# ಹಂಚಿಕೆ ನನಗೆ ಸಂತೋಷ ಮತ್ತು ಸಂತೃಪ್ತಿಯನ್ನು ಕೊಡುತ್ತದೆ

ಕುಮಾರಿ ಅಮಿಷ ೧೮ ವರ್ಷದ ಮುಸ್ಲಿಂ ಬಾಲಕಿ ತನ್ನ ತಾಯಿ ತಂದೆಯರೊಂದಿಗೆ ಹೊಸ ಸೀಮಾಪುರಿಯ E.೪೪ ಬ್ಲಾಕ್‌ನಲ್ಲಿ ವಾಸಿಸುತ್ತಿದ್ದಾಳೆ. ಅವಳು ೧೨ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ. ಅವಳ ತಂದೆ ಗಾಜಿನ ಕಾರ್ಖಾನೆಯಲ್ಲಿ ಲೆಕ್ಕಿಗರಾಗಿ (ಅಕೌಂಟೆಂಟ್) ಕೆಲಸ ಮಾಡುತ್ತಿದ್ದಾರೆ. ಹಣಕಾಸಿನ ಸಮಸ್ಯೆಯಿಂದಾಗಿ ತಂದೆ ಸ್ವಂತ ಮನೆಯನ್ನು ಮಾರಿದ್ದರಿಂದ ಸೀಮಾಪುರಿ E.೪೪ ಮನೆಗೆ ಬರಬೇಕಾಯಿತು. ಈ ಮನೆ ಇರುವುದು ಕೊಳಚೆ ಪ್ರದೇಶದಲ್ಲಾದುದರಿಂದ ಕುಮಾರಿ ಅಮಿಷಳಿಗೆ ಇಷ್ಟವಾಗಲಿಲ್ಲ. ಈ ಪ್ರದೇಶದ ಬಹುತೇಕ ಜನರು ಗುಜರಿ ಮತ್ತು ಹಳೆಯ ವಸ್ತುಗಳನ್ನು ಸಂಗ್ರಹಿಸುವವರಾಗಿದ್ದರಿಂದ ಸುತ್ತಮುತ್ತ ಕಸ ಕೊಳಚೆಯೇ ತುಂಬಿರುತ್ತಿತ್ತು. ಆದುದರಿಂದ ಅಮಿಷ ತನ್ನ ಪೋಷಕರೊಂದಿಗೆ ಜಗಳವಾಡುತ್ತಿದ್ದಳು.

ಅವಳು ಚೇತನಾಲಯದ ಬಗ್ಗೆ ಕೇಳಿ 'ಹೌಸ್ಲ' ಎಂಬ ಫೋಕಸ್ ಗುಂಪಿನ ಸದಸ್ಯಳಾದಳು. ಇತರ ಯುವಜನರನ್ನು ಕಂಡು ಅವಳು ಹೇಳಿದ್ದೇನೆಂದರೆ; "ಇಲ್ಲಿನ ಯುವಜನರು ಒಂದೇ ಕೋಣೆಯಲ್ಲಿ ವಾಸವಾಗಿದ್ದರೂ ಸಂತೋಷಭರಿತರಾಗಿರುವುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಈ ಕೇಂದ್ರದಲ್ಲಿ ಯಾವುದಾದರೂ ಕಾರ್ಯಕ್ರಮವಿರುವಾಗ ಸ್ವಯಂಪ್ರೇರಿತರಾಗಿ ತಾವೇ ಊಟವನ್ನು ತರುವುದನ್ನು ನಾನು ಗಮನಿಸಿದೆ. ನಾನು ಒಬ್ಬ ಸಹಪಾಠಿಯನ್ನು; "ನೀನು ಬಡವಳಾಗಿದ್ದರೂ ಸಾಮಾನ್ಯ ಸಭೆಗಳಿಗೆ ಹೇಗೆ ಊಟವನ್ನು ತರುವೆ?" ಎಂದು ಕೇಳಿದೆ. ಅದಕ್ಕೆ ಅವಳು "ನಾವು ನಮ್ಮ ಖರ್ಚು ವೆಚ್ಚಗಳನ್ನು ಸ್ವಲ್ಪ ಕಡಿಮೆ ಮಾಡಿ ಉಳಿತಾಯದಿಂದ ಊಟವನ್ನು ತಯಾರಿಸಿ ಇತರರೊಂದಿಗೆ ಹಂಚಿಕೊಳ್ಳುತ್ತೇನೆ. ಹಂಚಿಕೊಳ್ಳುವುದು ನಮಗೆ ಸಂತೋಷ ತರುತ್ತದೆ" ಎಂದಳು. ಇದು ನನಗೆ ಅರ್ಥವಾಗಲಿಲ್ಲ. ಈ ವರ್ತನೆ ನನ್ನ ಮನಸಾಕ್ಷಿಯನ್ನು ಕಲಕಿತು. ನಾನು ನನ್ನ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳತೊಡಗಿದೆ. ಅವು ನನ್ನ ಬಾಳು ಮೌಲ್ಯ ಮತ್ತು ಜಗತ್ತಿನ ದೃಷ್ಟಿಕೋನವನ್ನು ಬದಲಾಯಿಸಿತು. ನಾನು ಸಕಾರಾತ್ಮಕಳೂ ಕೃತಜ್ಞತಳೂ ಆಗಿ ಇತರರ ಕಷ್ಟಗಳಿಗೆ ಸೂಕ್ಷ್ಮಗ್ರಾಹಿಯಾದೆ".

CHAPTER 4

# ಸಮಂಜಸ ಹಾಗೂ ವಿಭಿನ್ನ ಗುಂಪುಗಳು



# ಸಮಂಜಸ ಹಾಗೂ ವಿಭಿನ್ನ ಗುಂಪುಗಳು ಆಗ್ರಹಿತ CBOಗಳ ಸ್ಥಾಪನೆ ಮತ್ತು ಕ್ರಿಯಾತ್ಮಕತೆ

## ಉದ್ದೇಶ

ಸಮಂಜಸ ಹಾಗೂ ವಿಭಿನ್ನ ಗುಂಪುಗಳು ರೂಪುಗೊಂಡ ನಂತರ ಸಮುದಾಯ ಆಧಾರಿತ ಸಂಸ್ಥೆಯ (CBO) ಸ್ಥಾಪನೆ ತಾರ್ಕಿಕವಾಗಿ ಮುಂದಿನ ಹೆಜ್ಜೆಯಾಗಬಹುದು. ಜನರು ಜೊತೆಗೂಡಿ ಬಂದು ಒಂದು ಗುಂಪನ್ನು ರಚಿಸಿದಾಗ ವ್ಯಕ್ತಿಗಳ ಮಧ್ಯೆ ಒಡನಾಟ, ಧೆಗಯತೆ, ಸುರಕ್ಷತೆ, ಸ್ವಾಭಿಮಾನ, ಸೇರ್ಪಡೆಯ ಅನುಭವವಾಗುತ್ತದೆ. ಈ ಹೊಸ ಚಿಂತನೆಯ ಆವಿಷ್ಕಾರ ಸುದ್ಧಿ ಸಮಾಚಾರ ಹಂಚಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಗುಂಪಿನ ಅಸ್ತಿತ್ವ ಸದಸ್ಯರಿಗೆ ವಿಶೇಷವಾಗಿ ಸಂಕಷ್ಟದಲ್ಲಿರುವವರಿಗೆ ಶಕ್ತಿಯನ್ನು ತುಂಬುತ್ತದೆ. ನಿಯಮಿತ ವಿಚಾರ ವಿನಿಮಯ ಮತ್ತು ಪರಸ್ಪರ ಅವಲಂಬನೆ ಜೊತೆಗೂಡಿ ದುಡಿಯಲು ಹಾಗೂ ನಿರ್ದಿಷ್ಟ ಗುರಿಯನ್ನು ತಲುಪಲು ಯನ್ನೀಯುತ್ತದೆ. ಗುಂಪುಗಳ ಕ್ರಿಯಾತ್ಮಕತೆ ಸದಸ್ಯರಲ್ಲಿ ಮುಖಂಡತ್ವವನ್ನು ಬೆಳೆಸಿಕೊಳ್ಳುವ ಅವಕಾಶವನ್ನು ನೀಡುತ್ತದೆ.


ಇಲ್ಲಿ ನಮ್ಮ ಮುಂದಿರುವ ಉದ್ದೇಶವೇನೆಂದರೆ, ಸಮುದಾಯದ ಸದಸ್ಯರನ್ನು ಸಾಮಾನ್ಯ ಹಿತಾಸಕ್ತಿಯ ಆಧಾರದ ಮೇಲೆ ವಿಭಿನ್ನ ವಯಸ್ಸು, ಲಿಂಗ, ಉದ್ಯೋಗಿಗಳನ್ನು ಭಿನ್ನವಾದರೂ ಸಮಂಜಸ ಗುಂಪುಗಳನ್ನಾಗಿ ಸಂಘಟಿಸುವುದು. ಗುಂಪುಗಳು ಸ್ವಾಭಾವಿಕವಾಗಿ ವೈವಿಧ್ಯಮಯವಾಗಿರುತ್ತವೆ. ಅವು ಸಾಲ-ಸೌಲಭ್ಯ ಗುಂಪು, ಸ್ವ-ಸಹಾಯ ಸಂಘ, ಸಹಕಾರ ಸಭೆ, ಯುವಜನ ಸಂಘ, ಮಹಿಳಾ ಸಂಘ, ಮಕ್ಕಳ ಕೂಟ ಮತ್ತು ಕೃಷಿಕರ ತಂಡವಾಗಿ ವರ್ಗೀಕೃತವಾಗುತ್ತವೆ. ಅವು ತಮ್ಮ ಹಿತಾಸಕ್ತಿಗಳಿಗೆ ತಕ್ಕಂತೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತವೆ. ಸಾಮಾನ್ಯವಾಗಿ ಒಂದು ಗುಂಪಿನ ಅಸ್ತಿತ್ವ, ಸ್ಥಳ, ಲಿಂಗ, ವಯಸ್ಸು ಮತ್ತು ಉದ್ಯೋಗಕ್ಕೆ ತಕ್ಕಂತೆ ಒಂದು ಸ್ಥಳಕ್ಕೆ ಸೀಮಿತವಾಗುತ್ತವೆ. ಆದುದರಿಂದ ಅವನ್ನು ಸಂಘಟಿಸಲು CBO ಎಂದು ಕರೆಯಲಾದ ವಿಸ್ತೃತ ತಳವುಳ್ಳ ಗುಂಪನ್ನು ಕಟ್ಟುವುದು. CBO ಗಳಿಗೆ ನಿರ್ದಿಷ್ಟ ನಮೂನೆಯಿಲ್ಲ.

ಅವು ಸಂಘಟನೆಯಾಗಿ ಅವುಗಳ ಸದಸ್ಯತ್ವ, ಕಾರ್ಯನಿರ್ವಾಹಣಾ ರೀತಿ, ಮನೆಮಾರುಗಳ ಸೇರ್ಪಡೆ, ಸೇವಾ ವ್ಯಾಪ್ತಿ ಮತ್ತು ಸಮುದಾಯದ ಮೇಲಿನ ಸ್ವಾಮ್ಯ ಸಾಮಾನ್ಯ ಗುಂಪುಗಳಿಗಿಂತ ಅಧಿಕವಾಗಿರುತ್ತದೆ. ಎಷ್ಟು ಗುಂಪುಗಳಿರುತ್ತವೋ, ಅವೆಲ್ಲಕ್ಕೂ ಅವಕಾಶ ಕಲ್ಪಿಸಬೇಕಾಗುತ್ತದೆ. ಅವು ಸಮುದಾಯ ಬೆಂಬಲಿತ ಸಂಸ್ಥೆಯ ಗುಂಪಿನ ಮುಖಂಡರಿಂದ ಸಚೇತನಗೊಳಿಸಲಾಗಿದ್ದು ಸಮುದಾಯದ ಗುಂಪುಗಳ ಮುಖಂಡರ ಮೇಲೆ ಅವಲಂಬಿಸಿರುತ್ತವೆ.

# ಕಾಲಾವಧಿ

ಸಾಮಾನ್ಯವಾಗಿ ಸಮಾಜದ ಗುಂಪಿನ ಸ್ಥಾಪನೆ ಮತ್ತು ಕ್ರಿಯಾತ್ಮಕತೆಗೆ ಕೊನೆಯ ಪಕ್ಷ ಒಂದು ವರ್ಷ ತೆಗೆದುಕೊಳ್ಳುತ್ತದೆ. ಮೊದಮೊದಲು ಸಣ್ಣ ಅಥವಾ ಕೇಂದ್ರೀಕೃತ ಕ್ರಿಯಾತ್ಮಕ ಗುಂಪುಗಳನ್ನು ಸಿದ್ಧಮಾಡಿ ನಂತರ CBO ಗಳನ್ನು ಸ್ಥಾಪಿಸಲು ಕೈಹಾಕುವುದು ಪ್ರಯೋಜನಕಾರಿ.

**ಎಲ್ಲರನ್ನು ಒಳಪಡುವ ಗುಂಪುಗಳ ಸ್ಥಾಪನೆ ಮತ್ತು CBO**




# ಸಾಗುವ ಮಾರ್ಗಗಳು

- ಮಾದರಿ: ಸ್ಥಾಪನೆ, ಸಂಘರ್ಷ, ಸಹಜತೆ, ಕ್ರಿಯಾತ್ಮಕತೆ, ಮುಂದೂಡುವಿಕೆ. ಅಧಿಕ ಪ್ರಯೋಜನಕಾರಿ

  a) **ಸ್ಥಾಪನೆ:** ಪರಿಚಯ, ಪ್ರಶ್ನಾವಳಿ, ಗುಂಪಿನ ಅಸ್ತಿತ್ವ ಮತ್ತು ಉದ್ದೇಶ, ಸುರಕ್ಷಿತ ವಿಷಯಗಳ ಬಗ್ಗೆ ಸಂವಾದ ಮತ್ತು ಸೀಮಿತ ಒಪ್ಪಂದ – ಇವು ಅಧಿಕ ಪಾಲನೆ ಮತ್ತು ದಿಸೆಯನ್ನು ಎದುರು ನೋಡುತ್ತದೆ.

  b) **ಸಂಘರ್ಷ:** ವಿರೋಧ, ಭಾಗಿಗಳಲ್ಲಿ ಅಸಹಕಾರ, ಅಧಿಕಾರದಾಹ ಮತ್ತು ಜಗಳ, ಪೈಪೋಟಿ ಗುಂಪಿನ ನಿಯಮಗಳ ಚರ್ಚೆ ಮತ್ತು ಭಿನ್ನಾಭಿಪ್ರಾಯಗಳ ಅಂಗೀಕಾರ – ಪ್ರೋತ್ಸಾಹಕ ಮುಖಂಡತ್ವ, ಉಪದೇಶ ಮತ್ತು ಮಧ್ಯಸ್ಥಿಕೆ.

  c) **ಸಹಜತೆ:** ಸಂಧಾನ, ಆತಂಕ ನಿವಾರಣೆ, ಒಪ್ಪಂದ ಮತ್ತು ಸಹಮತ, ನಿರ್ದಿಷ್ಟ ಪಾತ್ರ ಮತ್ತು ಹೊಣೆಗಾರಿಕೆ, ಸಮಂಜತೆಯ ಬೆಳವಣಿಗೆ, ಗುಂಪು ಪ್ರಯತ್ನದ ಅಂಗೀಕಾರ, ಕಲಿಕೆ, ಅವಕಾಶಗಳ ಜೋಡನೆ ಮತ್ತು ಪ್ರತಿಫಲನೆ, ಕಿರು ಕಾರ್ಯಕ್ರಮಗಳ ಉಪಕ್ರಮ ಮತ್ತು ಗುಂಪಿನ ಸಾಮೂಹಿಕ ಶಕ್ತಿಯ ಮೇಲ್ವಿಚಾರಣೆ – ಇಲ್ಲಿ ಪರಿಪೋಷಕತೆ ಮತ್ತು ನಿರ್ದೇಶನದ ಅವಶ್ಯಕತೆ ಇದೆ.

  d) **ಕ್ರಿಯಾತ್ಮಕತೆ:** ಸಹಜ ಗುಂಪು ಸಂಬಂಧ, ನಿಚ್ಚಳ ಮುನ್ನೋಟ ಮತ್ತು ಗುರಿ, ಫಲಿತಾಂಶ ಕೇಂದ್ರೀಕೃತ, ತಂಡವಾಗಿ ಕೆಲಸ ಮಾಡುವ ಛಲ – ಇಲ್ಲಿ ಪ್ರತಿನಿಧಿಗಳ ಅಗತ್ಯ ಮತ್ತು ಕನಿಷ್ಠ ಮಧ್ಯಸ್ಥಿಕೆ ಇದ್ದು ಅಪರೂಪದ ಮೇಲ್ವಿಚಾರಣೆ ಸಾಕು.

e) **ಮುಂದೂಡುವಿಕೆ:** (ಬಲವರ್ಧನೆಯ ವಿರಾಮ) ಗುರುತ್ವ ಪ್ರಕ್ರಿಯೆಯ ಬಲವರ್ಧನೆ, ಜವಾಬ್ದಾರಿಗಳ ಪರಿಪೂರ್ಣತೆ, ಕಲಿಕೆಯ ಹಂಚಿಕೆ ಮತ್ತು ಬದಲಾವಣೆಯ ನಿರೂಪಣೆ, ಸ್ವೀಕೃತಿಗೆ ಅವಕಾಶ, ಗುರುತಿಸುವಿಕೆ ಮತ್ತು ಸಂಭಾವನೆ – ಮಧ್ಯಂತರ ವಿರಾಮ, ಪುನಶ್ಚೇತನ ಮತ್ತು ಜವಾಬ್ದಾರಿಯ ಹಸ್ತಾಂತರ.

- ಮಕ್ಕಳು, ಮಹಿಳೆಯರು, ಯುವಜನರು ಮತ್ತು ಪುರುಷರ ಸಂಚಲನ, ಕಥೆಗಳ ಹಂಚಿಕೆಯಿಂದ ಸಂವಾದದ ಆರಂಭ, ಆದರ್ಶ ವ್ಯಕ್ತಿಗಳ ಜೀವನ, ಸಮುದಾಯದ ಗಮನಾರ್ಹ ಘಟನೆಗಳ ಸ್ಮರಣೆ, ಹೆಸರಿಸದೆ ಕೆಲವು ವ್ಯಕ್ತಿಗಳ ಸತ್ಕಾರ್ಯದ ಹಂಚಿಕೆ, ಸಭೆ ಸೇರುವ ಅಥವಾ ಐಕ್ಯತೆಯ ಬಗ್ಗೆ ಕೇಂದ್ರೀಕರಣ.
- ಸಮಾನ ಹಿತಾಸಕ್ತಿಯುಳ್ಳ ಸಮುದಾಯದ ಸದಸ್ಯರು ಇತರ ಸದಸ್ಯರೊಂದಿಗೆ ಗುಂಪುಗಳನ್ನು ಸ್ಥಾಪಿಸಲು ಪ್ರೋತ್ಸಾಹ. ಸಾಮಾನ್ಯವಾಗಿ ಆಯಾ ವಯಸ್ಸು, ಲಿಂಗ ಮತ್ತು ಉದ್ಯೋಗಕ್ಕೆ ಅನುಗುಣವಾಗಿ ಸಂಘ ಸ್ಥಾಪಿಸಲು ಆದ್ಯತೆ ಮತ್ತು ಅಪೇಕ್ಷೆ.
- ಮಕ್ಕಳ ಮತ್ತು ಮಹಿಳೆಯರ ಗುಂಪು ರಚಿಸುವುದು ಸುಲಭ. ಸಾಮಾನ್ಯವಾಗಿ ಅವರು ಆಸಕ್ತರೂ ಸಮಯ ತ್ಯಾಗಿಗಳೂ ಆಗಿರುತ್ತಾರೆ. ಆದರೂ ಯುವಜನರನ್ನು ಮತ್ತು ಪುರುಷರನ್ನು ಬಿಟ್ಟು ಬಿಡುವುದು ತರವಲ್ಲ.
- ಮಿಶ್ರ ಹಿನ್ನೆಲೆಯ ಅಂದರೆ ಜಾತಿ, ಧರ್ಮ ಮತ್ತು ಜನಾಂಗದವರು ಒಗ್ಗೂಡುವುದು ಆದರ್ಶನೀಯ. ಆದುದರಿಂದ ಸೂಕ್ತ ಸೂಚನೆ, ಒತ್ತಡ, ಪ್ರಚೋದನೆ ಅಗತ್ಯ.
- ಸದಸ್ಯತ್ವ, ಗುಂಪಿನ ಹೆಸರು, ಗುಂಪಿನ ಗುರಿ ಮತ್ತು ಮುಖಂಡರ ಬಗ್ಗೆ ನಿರ್ಧರಿಸಲು ಗುಂಪಿನ ಸದಸ್ಯರಿಗೆ ಪೋಷಕ ಮಾರ್ಗದರ್ಶಿಗಳಾಗಿರಿ.
- ಸದಸ್ಯರು ಪರಸ್ಪರ ಪರಿಚಿತರಾಗಲು ಕಲಿಯಲು, ಪ್ರಶ್ನಿಸಲು ಆಟೋಟಗಳಂತಹ ಸುರಕ್ಷಿತ ವಿಧಾನಗಳನ್ನು ಬಳಸಿ.
- ಎಲ್ಲಾ ಚಟುವಟಿಕೆಗಳನ್ನು ಸದಸ್ಯರು, ಉಪಯುಕ್ತ, ಅರ್ಥಭರಿತ, ಮೌಲ್ಯ ತತ್ವಾಧಾರಿತ ಎಂದು ಪರಿಗಣಿಸುವಂತಿರಬೇಕು.
- ಎಲ್ಲಾ ಸದಸ್ಯರ ಸಹಭಾಗಿತ್ವವನ್ನು ಖಾತರಿಪಡಿಸಿಕೊಳ್ಳಿ, ಮುಖಂಡರನ್ನು ಉತ್ತೇಜಿಸಿರಿ ಮತ್ತು ಸಂಘರ್ಷವಿರುವಾಗ ಮೃದು ಮಧ್ಯಸ್ಥರಾಗಿರಿ.
- ಸದಸ್ಯರು ಭಿನ್ನಾಭಿಪ್ರಾಯ, ಇತರರ ಭಾವನೆ ಮತ್ತು ಮನವರಿಕೆಗಳನ್ನು ಅಂಗೀಕರಿಸಲು ಅವಕಾಶ ನೀಡಿ.
- ಸದಸ್ಯರಲ್ಲಿ ಒಪ್ಪಂದ ಮತ್ತು ಸಹಾನುಮತವನ್ನು ಪೋಷಿಸಿರಿ. ಪ್ರತಿಯೊಬ್ಬರ ಪಾತ್ರವನ್ನು ಜವಾಬ್ದಾರಿಯನ್ನು ಸ್ಪಷ್ಟಪಡಿಸಿ ಸಮಂಜತೆಯನ್ನು ಬೆಳೆಸಿರಿ.
- ಪ್ರತಿ ಗುಂಪಿನ ಹಿತಾಸಕ್ತಿಗೆ ಅನುಗುಣವಾಗಿ ಅದರ ಸಹಯೋಗದಲ್ಲಿ ಸಣ್ಣ ಪುಟ್ಟ ಕೆಲಸ ಅಥವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿರಿ. ಸ್ವ ಸಹಾಯ ಸಂಘ (SHG), ಮಕ್ಕಳ ಸಂಸತ್ತು, ಯುವಜನರ ರಾಯಭಾರಿ ಕೂಟ ಮತ್ತು ಪರಿಸರ ಕ್ಲಬ್‌ಗಳ ಬಗ್ಗೆ ಗಮನಹರಿಸುವುದು.
- ಹೊತ್ತುಕೊಂಡ ಹೊಣೆಗಾರಿಕೆಯನ್ನು ಪೂರ್ಣಗೊಳಿಸಲು ಹಾಗೂ ಯಶಸ್ಸನ್ನು ಸಂಭ್ರಮಿಸಲು ಪ್ರೋತ್ಸಾಹ ನೀಡಿ. ಸಾಧನೆಯನ್ನು ಬಹಿರಂಗವಾಗಿ ಗುರುತಿಸಿ ಮೆಚ್ಚುಗೆ ವ್ಯಕ್ತಪಡಿಸಿರಿ.
- ಕಷ್ಟಪರಿಸ್ಥಿತಿಯಲ್ಲೂ ಸದಸ್ಯರು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಲು ಅವಕಾಶ ಮಾಡಿಕೊಡಿ.
- CBOಗಳನ್ನು ಸ್ಥಾಪಿಸಲು ಸಿದ್ಧತೆ ಮಾಡಿ. ವಿಶಾಲ ಭೂಮಿಕೆಯ ಸಂಘಟನೆ ಅದಾಗಿದ್ದು ಅದರಲ್ಲಿ ವಿವಿಧ ಗುಂಪುಗಳ ಮುಖಂಡರು, ಗ್ರಾಮದ ಹಿರಿಯರು (ಪುರುಷರು ಮತ್ತು ಸ್ತ್ರೀಯರು) ಅಥವಾ ಇಡೀ ಗ್ರಾಮಸಭೆಯ ಮಾದರಿಯಂತೆ ಇಡೀ ಹಳ್ಳಿ ಹಾಜರಾಗಬಹುದು.



- CBOಗಳು ಗುಂಪಿನ ಸದಸ್ಯರೊಡನೆ ಮಾತ್ರವಲ್ಲ ಯೋಜನೆಯಲ್ಲೂ ಅಂಗಗಳೂ ಪಾಲುಗಾರರೂ ಎಂಬುದನ್ನು ಖಾತರಿಪಡಿಸಿಕೊಳ್ಳಿರಿ.
- CBOಗಳು ಸಾಮಾನ್ಯ ಅಥವಾ ಸಮುದಾಯದ ಸಂಪನ್ಮೂಲಗಳಾದ ಕುಡಿಯುವ ನೀರು, ಇಡೀ ಸಮುದಾಯದ ಸ್ವಚ್ಛತೆ, ಸಮಾಧಿ ಸ್ಥಳಕ್ಕೆ ದಾರಿ, ಸಾರ್ವಜನಿಕ ಹಂಚಿಕೆಯಲ್ಲಿ ಸುಧಾರಣೆ, ಆರೋಗ್ಯ ಸೇವೆ ಮತ್ತು PwDಗಳ ಕಾಳಜಿ ಇಂಥವುಗಳ ಮೇಲೆ ಕೇಂದ್ರೀಕರಿಸಿ ಅವುಗಳ ಅನುಷ್ಠಾನಕ್ಕೆ ಒತ್ತುಕೊಡುವುದು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

## ಉಪಯುಕ್ತ ಸೂಚನೆಗಳು

- ಪ್ರತಿಯೊಂದು ಗುಂಪಿಗೆ ಒಂದು ಹೆಸರಿಡುವುದು ಅಗತ್ಯ. ಹೆಸರು, ಅಸ್ತಿತ್ವ, ಘನತೆ ಮತ್ತು ಪ್ರೇರಣೆಯನ್ನೀಯುತ್ತದೆ.
- ಕಾಲಕಾಲಕ್ಕೆ ಗುಂಪಿನ ಮುಖಂಡರು ಪಾಳಿಯಲ್ಲಿ ಬದಲಾಗುವುದನ್ನು ಪ್ರೋತ್ಸಾಹಿಸಿ. ಹೀಗೆ ಅದು ಅನೇಕ ಜನರಿಗೆ ಅವಕಾಶ ಕಲ್ಪಿಸಿ ಅವರು ಗುರುತಿಸಲ್ಪಡುತ್ತಾರೆ. ವಿದ್ಯಾವಂತರೇ ಮುಖಂಡತ್ವದ ಆಸನದಲ್ಲಿರಬೇಕೆಂದಿಲ್ಲ. ದೃಢ ಮನಸ್ಕರು ಮತ್ತು ಸಮರ್ಪಣಾ ಭಾವದವರೂ ಒಳ್ಳೆಯ ಮುಖಂಡರಾಗುತ್ತಾರೆ.

- ಗುಂಪಿನಲ್ಲಿರುವ ಸೌಕರ್ಯಗಳನ್ನೇ ಬಳಸಿಕೊಂಡು ಸದಸ್ಯರಿಗೆ ಅವರ ವ್ಯಕ್ತಿತ್ವಕ್ಕೆ ಅನುಗುಣವಾಗಿ ಸಾಧಾರಣ ಕೌಶಲ್ಯ, ಮುಖಂಡತ್ವ, ಅಂತರ ವ್ಯಕ್ತಿ ಸಂಬಂಧಿತ ಸಾಮರ್ಥ್ಯ ಮತ್ತು ಕುಶಲತೆಗಳಿಗೆ ಅವಕಾಶ ಕಲ್ಪಿಸಿ.
- ಗುಂಪಿನ ಸದಸ್ಯರು ತಾವು ಆಯ್ಕೆ ಮಾಡುವ ಆಂತರಿಕ ಚಟುವಟಿಕೆಗಳಲ್ಲಿ ಸಮತೋಲನವನ್ನು ಕಾಪಾಡುವಂತೆ ಸಂವಾದ, ಚರ್ಚೆಗೆ ಎಡೆ ಮಾಡಿಕೊಡಿ. ಸಂಭವಿಸಬಲ್ಲ ಸಣ್ಣ ಪುಟ್ಟ ಚಟುವಟಿಕೆಗಳನ್ನು ಉತ್ತೇಜಿಸಿರಿ.
- ರಣತಂತ್ರ ಕ್ರಿಯಾ ಯೋಜನೆಗಳಾದ ಪರಿಪಾಲನೆ, ನಿರ್ದೇಶನ ಮತ್ತು ಮಾರ್ಗದರ್ಶನ, ಬೋಧನೆ ಮತ್ತು ಮಧ್ಯಸ್ತಿಕೆಯಂಥವುಗಳನ್ನು ಹಮ್ಮಿಕೊಳ್ಳುವುದು.
- ನವೀನತೆ, ಅನ್ವೇಷಣಾ ಮನೋಭಾವ, ಸೃಜನಶೀಲತೆ, ಅರ್ಥಪೂರ್ಣತೆಯನ್ನು ಗಳಿಸಲು ಪ್ರತ್ಯೇಕ ಆಟೋಟ, ಉತ್ತೇಜಕ ಕಾರ್ಯಗಾರಗಳನ್ನು ವಯೋಮಾನಕ್ಕೆ ಅನುಗುಣವಾಗಿ ಆಯೋಜಿಸುವುದು.
- ಸದಸ್ಯರು ತಮ್ಮ ನಡೆಯ ಪ್ರತಿಯೊಂದು ಹೆಜ್ಜೆಯಲ್ಲೂ ಹೊಸ ಚಿಂತನೆಗಳನ್ನು ತರುವಂತೆ ಹಾಗೂ ಅವರ ಸೃಜನಶೀಲತೆಯನ್ನು ಪರಿಗಣಿಸಿ ಪ್ರೋತ್ಸಾಹಿಸಿ.
- ಗೊಂದಲ ಪರಿಸ್ಥಿತಿಯನ್ನು ಮೃದು ಮಧ್ಯಸ್ಥಿಕೆಯಿಂದ ಹತೋಟಿಗೆ ತನ್ನಿ.
- ವ್ಯಾವಹಾರಿಕ ಅನುಭವ, ಸ್ವಕೀಯ ಮತ್ತು ಸಮುದಾಯಿಕ ಸುಜ್ಞಾನ ಮತ್ತು ಅರಿವಿನ ಮೇಲೆ ಕೇಂದ್ರೀಕರಿಸಿರಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಎಚ್ಚರಿಕೆಗಳು

- ಗುಂಪಿನ ವೇದಿಕೆಯನ್ನು ಪರಿಪೋಷಕರ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಲು ಬಳಸಬೇಡಿ.
- ಪರಿಪೋಷಕರು ಅೀ ಬುದ್ಧಿವಂತರು ಮತ್ತು ಸದಸ್ಯರು ಬುದ್ಧಿವಂತರಲ್ಲ ಎನ್ನುವಂತೆ ಅವರಿಗೆ ಬೋಧನೆ ಮಾಡಬೇಡಿ.
- ಸದಸ್ಯರು ತಪ್ಪು ಮಾಡುವುದು ಸಹಜ. ಆದುದರಿಂದ ಅವರ ಅವಹೇಳನ ಮಾಡಬೇಡಿ ಅಥವಾ ಕಿರಿಕಿರಿಗೊಳ್ಳಬೇಡಿ.
- ಸದಸ್ಯರ ಆಲೋಚನೆ ಮತ್ತು ಯೋಜನೆಯಲ್ಲಿ ಭಿನ್ನಾಭಿಪ್ರಾಯವಿದ್ದರೆ ಇರಲಿ. ಆದರೆ ಅವರಲ್ಲಿ ಸಹಾನುಮತ ಏರ್ಪಡುವಂತೆ ಪ್ರೇರೇಪಿಸಿರಿ.
- ಸದಸ್ಯರ ಜ್ಞಾನದ ಕೊರತೆಯನ್ನು ಅವರ ಶಿಕ್ಷಣ ಅಥವಾ ಧಾರ್ಮಿಕ ಹಿನ್ನಲೆಗೆ ಉಪಾದಿಸಬೇಡಿ.
- ಗುಂಪುಗಳನ್ನು ಧರ್ಮ ಅಥವಾ ಜಾತಿ ಅಥವಾ ಜನಾಂಗದ ಹೆಸರಿನಲ್ಲಿ ಸಂಘಟಿಸುವ ಸುಲಭ ಮಾರ್ಗವನ್ನು ತುಳಿಯಬೇಡಿ.
- ಯಾವ ಗುಂಪನ್ನೂ ಜೊತೆಯಾಗಿ ಬರಲು ಒತ್ತಾಯ ಮಾಡಬೇಡಿ. ಅವರನ್ನು ಪ್ರೇರೇಪಿಸಿರಿ. ವಾಸ್ತವತೆಯನ್ನು ಕಂಡ ಅವರು ತಾವೇ ಸರಿದಾರಿಗೆ ಬರುತ್ತಾರೆ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

# ಸೂಚಿಗಳು

1. XXX ಮಹಿಳಾ ಗುಂಪುಗಳು, XXX ಮಕ್ಕಳ ಗುಂಪುಗಳು, XXX ಪುರುಷ ಗುಂಪುಗಳು, XXX ಯುವಗುಂಪುಗಳು ತಪ್ಪದೆ ಸಭೆಗೆ ಹಾಜರಾಗುತ್ತಾರೆ ಮತ್ತು ಪರಸ್ಪರ ವಿನಿಮಯ ಮಾಡುತ್ತಾರೆ.
2. XXX ಉದ್ಯೋಗ ಸಂಬಂಧಿತ ಅಂದರೆ ತ್ಯಾಜ್ಯ ಸಂಗ್ರಹಗಾರರು, ಕೃಷಿಕರು, ಕುಶಲಕರ್ಮಿಗಳ ಗುಂಪನ್ನು ಸ್ಥಾಪಿಸಲಾಯಿತು.
3. XXX ಮುಖಂಡ ಲಕ್ಷಣಗಳುಳ್ಳ ಸದಸ್ಯರನ್ನು ಗುರುತಿಸಲಾಯಿತು.
4. XXX ಗುಂಪುಗಳಲ್ಲಿ ವಿವಿಧ ಜಾತಿ ಮತ್ತು ಧರ್ಮದ ಮುಖಂಡರಿದ್ದಾರೆ.
5. XXX ಶೇಕಡ ಗುಂಪುಗಳು ಜಾತಿ ಮತ್ತು ಧರ್ಮಕ್ಕೆ ಅತೀತವಾಗಿ ಜೊತೆಯಾಗಿ ದುಡಿಯುತ್ತಿದ್ದಾರೆ.
6. XXX ಶೇಕಡ ಮುಖಂಡರು ಅತ್ಯಾಸಕ್ತರು ಮತ್ತು ಸಮರ್ಪಿತ ವ್ಯಕ್ತಿಗಳು.
7. XXX ಶೇಕಡ ಗುಂಪಿನ ಸದಸ್ಯರು ತಾವು ಜೊತೆಯಾಗಿ ಸಭೆ ಸೇರುವುದರ ಉದ್ದೇಶವನ್ನು ತಿಳಿಯದವರಾಗಿದ್ದಾರೆ.
8. XXX ಗುಂಪುಗಳು ಸಣ್ಣ ಸಾಮೂಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.
9. XXX ಶೇಕಡ ಗುಂಪುಗಳಲ್ಲಿ ಮುಖಂಡತ್ವದ ಪಾಳಯನ್ನು ಅಳವಡಿಸಿಕೊಳ್ಳಲಾಗಿದೆ.
10. XXX CBOಗಳನ್ನು ಪ್ರಾರಂಭಿಸಿ ಸ್ಥಾಪಿಸಲಾಗಿದೆ.
11. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಕೋಷ್ಟಕ ತಯಾರಿ ಮತ್ತು ಗುಂಪುಗಳ ಕಾರ್ಯ ವೈಖರಿ–A ಮಾದರಿ

| ಕೋಷ್ಟಕ ತಯಾರಿ ಮತ್ತು ಮಹಿಳಾ ಗುಂಪುಗಳ ಕಾರ್ಯ ವೈಖರಿ | | | | | | | | | |
|---|---|---|---|---|---|---|---|---|---|
| | ಸ್ಥಾಪಿತ ಗುಂಪುಗಳ ಸಂಖ್ಯೆ | ಸದಸ್ಯರ ಸಂಖ್ಯೆ | ಶೇ% ಶತ್ತದ ಹಾಜರಾತಿ | ಚರ್ಚಿಸಿದ ವಿಷಯಗಳು | ತೀರ್ಮಾನಿಸಿದ ಚಟುವಟಿಕೆಗಳು | ಕೈಗೊಂಡ ಚಟುವಟಿಕೆಗಳು | ಗೊಂದಲಗಳು/ ಭಿನ್ನಾಭಿಪ್ರಾಯಗಳು | ದಲಿತ/ಆದಿವಾಸಿ ಅಲ್ಪಸಂಖ್ಯಾತ ಮುಖಂಡರ ಸಂಖ್ಯೆ | ಷರಾ |
| ತಿಂಗಳು ೧ | | | | | | | | | |
| ತಿಂಗಳು ೨ | | | | | | | | | |
| ತಿಂಗಳು ೩ | | | | | | | | | |
| ತಿಂಗಳು ೪ | | | | | | | | | |
| ತಿಂಗಳು ೫ | | | | | | | | | |

ಟಿಪ್ಪಣಿ: ವಯಸ್ಸು, ಹಿತಾಸಕ್ತಿ, ಉದ್ಯೋಗ ಆಧಾರಿತ ಅಥವಾ CBO ಮತ್ತು ಪ್ರಗತಿ ನಿಯಂತ್ರಿತಗೊಂಡ ಸಮಾನ ಕೋಷ್ಟಕವನ್ನು ಪ್ರತಿ ಗುಂಪಿಗೂ ಸಿದ್ಧ ಮಾಡಿ.

# ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

೧. ಮಹಿಳೆಯರು, ಯುವಜನರು, ಮಕ್ಕಳು ಮತ್ತು ಪುರುಷರಲ್ಲಿ ಗುಂಪು ಸ್ಥಾಪನಾ ಕಾರ್ಯಕ್ಕೆ ಯಾರು ಅಧಿಕ ಆಸಕ್ತಿ ತೋರಿದರು ಮತ್ತು ಯಾರು ಹಿಂಜರಿಯುತ್ತಿದ್ದರು? ಏಕೆ?

೨. ಗುಂಪು ಸ್ಥಾಪನೆಯಲ್ಲಿ ಸದಸ್ಯರು ಏನನ್ನು ಅಧಿಕ ಇಷ್ಟಪಟ್ಟರು? ತಾವು ಜೊತೆಯಾಗಿ ಸೇರಿದ್ದರ ಉದ್ದೇಶವನ್ನು ಅವರು ವ್ಯಕ್ತಪಡಿಸಿದರೇ?

೩. ವಿಭಿನ್ನ ಜಾತಿ, ಧರ್ಮ, ಜನಾಂಗ, ಭಾಷಾ ಮತ್ತು ಸಂಸ್ಕೃತಿಯ ಹಿನ್ನಲೆ ಹೊಂದಿದ್ದ ಸದಸ್ಯರನ್ನು ಜೊತೆಗೂಡಿಸುವುದು ಎಷ್ಟು ಕಷ್ಟಕರವಾಗಿತ್ತು? ಅಥವಾ ಸುಲಭವಾಗಿತ್ತು? ಅವರಲ್ಲಿ ಪರಸ್ಪರ ಅಂಗೀಕಾರವಿತ್ತೇ? ಅಥವಾ ಗೊಂದಲವಿತ್ತೇ? ತೊಂದರೆ ಇದ್ದದ್ದೇ ಆದರೆ ಅದನ್ನು ಗುಂಪುಗಳು ಹೇಗೆ ನಿಭಾಯಿಸಿದವು?

೪. ಗುಂಪಿನ ಸದಸ್ಯರ ಗುಂಪುಸಭೆ ಸಂತೋಷಕರ ಹಾಗೂ ಉಪಯುಕ್ತವಾಗಿತ್ತೇ? ಹೇಗೇ?

೫. ಗುಂಪಿನ ಸದಸ್ಯರು ಎದುರಿಸಿದ ಕೆಲವು ತೊಂದರೆ ಮತ್ತು ಸವಾಲುಗಳು ಯಾವುವು?

೬. ಯಾವ ಸಾಮಾಜಿಕ ಚಟುವಟಿಕೆಗಳನ್ನು ಗುಂಪು ನಿರ್ಧರಿಸಿತು ಮತ್ತು ಸದಸ್ಯರು ತಮಗೆ ವಹಿಸಿದ ಕೆಲಸಗಳನ್ನು ನೆರವೇರಿಸಿದರು?

೭. ಸದಸ್ಯರು ಪಾಳಿ ಮುಖಂಡತ್ವವನ್ನು ಪ್ರಶಂಸಿಸಿದರೇ? ಅವರ ಸಕಾರಾತ್ಮಕ ಮತ್ತು ನಕಾರಾತ್ಮಕ ಪ್ರತಿಕ್ರಿಯೆ ಏನು?

೮. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ).

# PwDಗಳ SHG ಸ್ಥಾಪನೆಯ ಪರಿಣಾಮಗಳು


ಜಿತೇಂದ್ರ ಉತ್ತರ ಪ್ರದೇಶದ ಘೋರಖ್‌ಪುರದ ಹಳ್ಳಿ ನಿವಾಸಿ. ಅವನು ತನ್ನ ಉನ್ನತ ವ್ಯಾಸಾಂಗ ಮಾಡಲು ಕಷ್ಟಪಡುತ್ತಿದ್ದನು. ಅವನು ತನ್ನ ಆರ್ಥಿಕ ಸಮಸ್ಯೆಯನ್ನು ಗ್ರಾಮದ ವಿಭಿನ್ನ ಚೇತನರ ಸಂಸ್ಥೆ (PwD)ಯ ಸಾಮಾನ್ಯ ಸಭೆಯಲ್ಲಿ ಹಂಚಿಕೊಂಡನು. PGSSನ ಮಾರ್ಗದರ್ಶನ ಮತ್ತು ಬೆಂಗಳೂರಿನ ಸಮುದಾಯ ಬೆಂಬಲಿತ ಪುನರ್ವಸತಿ (CBR) ಸಂಘಟಕದ ಆರ್ಥಿಕ ಸಹಾಯದಿಂದ ಜಿತೇಂದ್ರ ೨೦೧೬ ರಲ್ಲಿ ಕಂಪ್ಯೂಟರ್ ಅಪ್ಲಿಕೇಶನ್ ಡಿಪ್ಲೋಮಾವನ್ನು ಸಂಪೂರ್ಣಗೊಳಿಸಿದನು. ಅವನು ೨೦೧೭ರಲ್ಲಿ ತಾನು ಸದಸ್ಯನಾಗಿದ್ದ SHG ಗುಂಪಿನಿಂದ ಸಾಲವನ್ನು ತೆಗೆದುಕೊಂಡು B.Ed. ಪರೀಕ್ಷೆಗೆ ಕುಳಿತು ತೇರ್ಗಡೆಯಾದನು.

ಇದುವರೆಗೆ ಅವನು ೭೫ PwDಗಳಿಗೆ ಶೌಚಾಲಯವನ್ನು ಕಟ್ಟಿಸಲು ಸರಕಾರದಿಂದ ಆರ್ಥಿಕ ಸಹಾಯವನ್ನು, ೧೦ ವಿಭಿನ್ನ ಚೇತನರಿಗೆ ಮಾಸಿಕ ಪಿಂಚಣಿ, ೪೦ ಜನರಿಗೆ ವಿಭಿನ್ನಚೇತನ ಪ್ರಮಾಣ ಪತ್ರ ಮತ್ತು ರೈಲ್ವೆ ರಿಯಾಯಿತಿಗೆ ೧೫ ಅರ್ಜಿಗಳನ್ನು ಸಲ್ಲಿಸಿರುತ್ತಾನೆ. ಅವನಿಗೆ ೨೦೧೭ ರಲ್ಲಿ ಜರುಗಿದ ಅಂತರ ರಾಷ್ಟ್ರೀಯ ವಿಕಲಚೇತನರ ದಿನಾಚರಣೆಯ UDAAN ಕಾರ್ಯಕ್ರಮದಲ್ಲಿ ಅತ್ಯುತ್ತಮ ಕಾರ್ಯಕಲಾಪ ನಿರ್ವಾಹಕ (ಆ್ಯಂಕರ್) ಪ್ರಶಸ್ತಿ ಲಭಿಸಿತು.

ಅಂತೆಯೇ ಕೊಲ್ಕೊತ್ತಾದ ತಂಗ್ರಾದ ಸಮಾಜ ಕಾರ್ಯ ಗುಂಪಿನ ಸದಸ್ಯ ಹೀಗೆಂದನು. "ಈಗ ನಾನು ನಮ್ಮ ಗುಂಪು ಸಭೆಯ ಸಿಬ್ಬಂದಿಯ ಗೈರುಹಾಜರಿಯಲ್ಲಿ ನಾನೇ ಸಭೆಯನ್ನು ಚೆನ್ನಾಗಿ ನಡೆಸಬಲ್ಲೆ. ನಾನು ಒಬ್ಬ ಜವಾಬ್ದಾರಿಯುತ ವ್ಯಕ್ತಿಯಾಗಿ ಮನಸ್ಸಿಗೆ ತಿಳಿದುದ್ದನ್ನು ಗುಂಪಿನಲ್ಲಿ ತಿಳಿಸಬಲ್ಲೆ. ನನ್ನನ್ನು ಜನರು ಗೌರವಿಸುತ್ತಾರೆ. ನನಗೆ ಏನಾದರೂ ಬೇಕಾದರೆ ಎಲ್ಲಿಗೆ ಹೋಗಬೇಕು ಎಂಬ ಅರಿವು ನನಗೆ ಬಂದಿದೆ."

CHAPTER 5

# ವಿಮರ್ಶಾತ್ಮಕ ಪ್ರಜ್ಞೆಯ ನಿರ್ಮಾಣ, ಮುಖಂಡತ್ವ ಮತ್ತು ಅರಿವಿನ ಅಭಿವೃದ್ಧಿ



# ವಿಮರ್ಶಾತ್ಮಕ ಪ್ರಜ್ಞೆಯ ನಿರ್ಮಾಣ

## ವ್ಯಕ್ತಿತ್ವ, ಮುಖಂಡತ್ವ ಮತ್ತು ಅರಿವಿನ ಅಭಿವೃದ್ಧಿಯೊಂದಿಗೆ ವ್ಯಕ್ತಿ, ಸಮುದಾಯ ಹಾಗೂ ಸಮಾಜ

### ಉದ್ದೇಶ

ಈ ಹಂತದ ಮುಖ್ಯ ಉದ್ದೇಶವೇನೆಂದರೆ, ವ್ಯಕ್ತಿ, ಕುಟುಂಬ, ಸಮುದಾಯ ಮತ್ತು ಸಮಾಜದ ಬಗ್ಗೆ ಸದಸ್ಯರು ಸ್ವಯಂ ತೀಕ್ಷ್ಣ ಪರಿಶೋಧನೆಯನ್ನು ಮಾಡಿದ ನಂತರ ಅವರನ್ನು ಗುಂಪು ಮಾರ್ಗದರ್ಶನ ಮಾಡುವುದಾಗಿದೆ. ಇಲ್ಲಿ ಗುಂಪುಗಳು ದೀರ್ಘ ಮೌನವಹಿಸಿ ತಮ್ಮನ್ನು ಸುತ್ತುವರಿದ ವಾಸ್ತವತೆ ಮತ್ತು ಎಲ್ಲ ಸಂಕೀರ್ಣತೆಗಳನ್ನು ಅವಲೋಕಿಸುತ್ತಾರೆ. ಈ ಪ್ರಕ್ರಿಯೆಯ ಮುಖಾಂತರ ಗುಂಪುಗಳು ತಾವು ಒಳಿತು ಮತ್ತು ಅರ್ಥಭರಿತವಾದುದನ್ನು ಕಂಡುಕೊಂಡು ಅದನ್ನು ಪ್ರಶಂಸಿಸುತ್ತಾರೆ. ಇದುವರೆಗೆ ತಮ್ಮ ಜೀವನ ಮತ್ತು ಹೊರವಲಯದಲ್ಲಿ ಬದಲಾಯಿಸಲಾಗದು, ಅಸಾಧ್ಯವಾದುದು ಎಂದುಕೊಂಡ ವಿಷಯ ಅಥವಾ ಆಯಾಮವನ್ನು ಪ್ರಶ್ನಿಸುವಂತಾಗಬೇಕು. ಪ್ರತಿಯೊಂದು ವಿಷಯವನ್ನು ಅವರ "ಏಕೆ?" ಮತ್ತು "ಏಕೆ ಇಲ್ಲ?" ಎಂದು ಕೇಳುತ್ತಾ ಉತ್ತರಕ್ಕೆ ಉತ್ಸುಕರಾಗುತ್ತಾರೆ. ಗುಂಪಿನ ಸದಸ್ಯರು ವ್ಯಕ್ತಿ, ಮುಖಂಡ ಎಂದರೆ ಏನು ಮತ್ತು ಎಂಥಹ ಮುಖಂಡ ಸಮುದಾಯದಲ್ಲಿ ಶಕ್ತಿ ಮತ್ತು ಐಕ್ಯತೆಯನ್ನು ಭರಿಸುತ್ತಾನೆ ಎಂಬುದನ್ನು ತಿಳಿಯಲು ನೆರವು ನೀಡಲಾಗುತ್ತದೆ. ಗುಂಪಿನ ಪ್ರತಿ ಸಭೆಯಲ್ಲಿ ತಪ್ಪದೆ ಹಾಜರಾಗುತ್ತಿರುವ ಸದಸ್ಯರು ತಮಗೆ ಏನಾಗುತ್ತದೆ ಮತ್ತು ಏಕೆ ಹೀಗಾಗುತ್ತದೆ ಎಂಬುದನ್ನು ಸಮರ್ಥಿಸಲೂ ತಮ್ಮ ಮನವರಿಕೆಯನ್ನು ವ್ಯಕ್ತಪಡಿಸಲೂ ಸಹಾಯ ಮಾಡಲಾಗುತ್ತದೆ. ಅವರು ಸಮಾಜೀಕರಣ ಪ್ರಕ್ರಿಯೆ ವಾಸ್ತವತೆಯಲ್ಲಿ ಇಂದಿನ ಸಮಾಜ ನಿರ್ಮಾಣ, ಅದರಲ್ಲಿ ಜೀವಿಸುತ್ತಿರುವ ಕುಟುಂಬ, ಸಮುದಾಯ ಮತ್ತು ಸಮಾಜದ ಬದಲಾಗುತ್ತಿರುವ ಪಾತ್ರಗಳ ಬಗ್ಗೆ ವಿಮರ್ಶಾತ್ಮಕ ಪ್ರಜ್ಞೆಯನ್ನು ಗಳಿಸಲು ನೆರವಾಗಬೇಕು. ಈ

ಹಂತದ ಪ್ರಕ್ರಿಯೆಗಳು ಹೊರ ತರುವ ಫಲಿತಾಂಶಗಳು ಹತ್ತು ಹಲವಾರು. ಅದು ವೈಯಕ್ತಿಕ ಮಟ್ಟದಲ್ಲಿ ವ್ಯಕ್ತಿತ್ವದ ವಿಕಸನವಾದರೆ ಸಮುದಾಯದ ಮಟ್ಟದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಇದರ ಮುಖಾಂತರ ಸಮುದಾಯದ ಸದಸ್ಯರು ಪೌರತ್ವದ ಹಕ್ಕುಗಳ ಬಗ್ಗೆ ಅರಿವನ್ನು ವಿಶ್ಲೇಷಣಾ ಮತ್ತು ವಿಮರ್ಶಾತ್ಮಕ ಜ್ಞಾನವನ್ನು ಬೆಳಿಸಿಕೊಳ್ಳುತ್ತಾರೆ.

## ಕಾಲಾವಧಿ

ಇದು ತೀವ್ರ ಪ್ರಕ್ರಿಯೆಯಾಗಿದ್ದು ಅದು ಸಾಕಷ್ಟು ಸ್ವ ವಿಶ್ಲೇಷಣೆ ಮತ್ತು ಚಿಂತನೆಯನ್ನು ಒಳಗೊಂಡಿದೆ. ಅದನ್ನು ಹಂತ ೩ರ ಜೊತೆಯಲ್ಲಿ ಮುಂದುವರಿಸಬೇಕಾಗತ್ತದೆ. "ಸಮಂಜಸ ಹಾಗೂ ವಿಭಿನ್ನ ಗುಂಪುಗಳು ಮತ್ತು CBOಗಳ ಸ್ಥಾಪನೆ ಮತ್ತು ಕ್ರಿಯಾತ್ಮಕತೆ". CBOಗಳನ್ನು ಸ್ಥಾಪಿಸುವ ಕಾರ್ಯವನ್ನು ಯಾವ ಬಾಹ್ಯ ಪ್ರೇರಣೆಯಿಲ್ಲದೆ ಗುಂಪುಗಳೇ ತಮ್ಮಷ್ಟಕ್ಕೆ ಅನುಷ್ಠಾನಕ್ಕೆ ತರಬೇಕಾಗುತ್ತದೆ. ಹಂತ ೩ ಮತ್ತು ಹಂತ ೪ ಇವೆರಡು ಸುಮಾರು ೨ ವರ್ಷ ೬ ತಿಂಗಳು ತೆಗೆದುಕೊಳ್ಳುತ್ತದೆ.



# ಸಾಗುವ ಮಾರ್ಗಗಳು

- ಈ ಪ್ರಕ್ರಿಯೆಯನ್ನು ಪ್ರತಿಯೊಬ್ಬರು ಆತ್ಮ ನಿರೀಕ್ಷಣೆಯೊಂದಿಗೆ ಪ್ರಾರಂಭಿಸಬೇಕು. ಪ್ರತಿ ಸದಸ್ಯನೂ ತನ್ನ ಅಂತರಂಗವನ್ನು ಆಳವಾಗಿ ಪರಿಶೀಲಿಸಿ ನೋಡಲಿ.
- ಸದಸ್ಯರು ತಮ್ಮ ಬಲಾಬಲ, ಭಯಭೀತಿ, ಅನಿಶ್ಚಿತತೆ, ಕನಸು ಅಭಿಲಾಷೆ ಮತ್ತೆಲ್ಲವನ್ನು ಮುಕ್ತವಾಗಿ ನಿರೂಪಿಸುವಂತೆ ಚರ್ಚೆಯನ್ನು ಪೋಷಿಸಿರಿ ಮತ್ತು ತಾವು ಹೇಗೆ ಬೆಳೆಯಬೇಕು ಎಂಬುದನ್ನು ಅವರೇ ನಿರ್ಧರಿಸಲಿ.
- ಎಲ್ಲಾ ವಿಧವಾದ ತೊಡಕು ತೊಂದರೆಗಳನ್ನು ಧೈರ್ಯದಿಂದ ಎದುರಿಸಿ ಅವುಗಳನ್ನು ನಿಭಾಯಿಸಿದ ವ್ಯಕ್ತಿಗಳ ಸ್ಫೂರ್ತಿದಾಯಕ ಕಥೆ ಅಥವಾ ವೀಡಿಯೊಗಳನ್ನು ಹಂಚಿಕೊಳ್ಳುವುದು.
- ಬೆಟ್ಟದಂಥಹ ಸವಾಲುಗಳು ಮುಂದಿದ್ದರೂ ವೈಯಕ್ತಿಕ ಬೆಳವಣಿಗೆಗೆ ಅಸಂಖ್ಯಾತ ಅವಕಾಶಗಳಿವೆ ಎಂಬುದನ್ನು ಗುಂಪಿನ ಸದಸ್ಯರ ಗಮನಕ್ಕೆ ತರುವುದು.
- ಕುಟುಂಬ ಮತ್ತು ಲಿಂಗವಾರು ಪಾತ್ರದ ಬಗ್ಗೆ ಮುಂದಿನ ಹಂತದ ಚರ್ಚೆಯನ್ನು ಎತ್ತಿಕೊಳ್ಳುವುದು.
- ಬದಲಾಗುತ್ತಿರುವ ಕುಟುಂಬ ಜೀವನದ ವಿನ್ಯಾಸದ ಸಾಧಕ ಬಾಧಕಗಳ ಬಗ್ಗೆ ಪ್ರಶ್ನೆಗಳನ್ನು ಕೇಳಬಹುದು.
- ಕುಟುಂಬದ ಸದಸ್ಯರ ಸಮಾನ ಮತ್ತು ಅಸಮಾನ ಅಂತಸ್ಥಿನ ಬಗ್ಗೆ ವಿಮರ್ಶಾತ್ಮಕ ಚರ್ಚೆಯಲ್ಲಿ ಸದಸ್ಯರನ್ನು ತೊಡಗಿಸಿರಿ (ಪುರುಷರು ಅಥವಾ ಸ್ತ್ರೀಯರು, ಉದ್ಯೋಗದಲ್ಲಿರುವವರು ಅಥವಾ ನಿರುದ್ಯೋಗಿಗಳು, ಬಾಲಕರು ಮತ್ತು ಬಾಲಕಿಯರು PwDಯಂಥಹ ನಿರ್ಲಕ್ಷಕ್ಕೊಳಗಾದ ವ್ಯಕ್ತಿಗಳ ಪರಿಸ್ಥಿತಿ, ಮಾನಸಿಕವಾಗಿ ಕಂಗೆಟ್ಟವರು, ವಿಧವೆಯರು, ವಯೋವೃದ್ಧ ಕುಟುಂಬದ ಸದಸ್ಯರು) ಈ ವರ್ಗದ ಜನರ ಪರಿಸ್ಥಿತಿ ಹೀಗೇಕೆ ಎಂದು ಯೋಚಿಸುವುದು ಅಗತ್ಯ.
- ಸಾಂಪ್ರದಾಯಿಕವಾಗಿ ರೂಢಿಬದ್ಧ ಲಿಂಗವಾರು ಪಾತ್ರಗಳು ಕುಟುಂಬದ ಸದಸ್ಯರಲ್ಲಿ ಪ್ರಚಲಿತವಾಗಿವೆ. ಅದನ್ನು ಅವರು ಸೂಕ್ತವೆಂದು ಪರಿಗಣಿಸುತ್ತಾರೋ ಅಥವಾ ಅದು ತಾರತಮ್ಯದಿಂದ ಕೂಡಿದೆಯಾ ಎಂಬುದರ ಬಗ್ಗೆ ಮುಕ್ತ ಚರ್ಚೆ ನಡೆಸಿರಿ.
- ಮುಂದಿನ ಹಂತದ ಚರ್ಚೆ ಸಮುದಾಯದ ಮತ್ತು ಸಮಾಜದ ಮೇಲೆ ಕೇಂದ್ರೀಕೃತವಾಗಲಿ.
- ಸಮಾಜದಲ್ಲಿ ಭಾದಿತರ, ಕೊರತೆಯುಳ್ಳವರ, ತಾರತಮ್ಯಕ್ಕೆ ಒಳಗಾದವರ, ನಿರ್ಲಕ್ಷಕ್ಕೊಳಗಾದವರ ಅನುಭವಗಳ ಬಗ್ಗೆ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಏಕೆ ಸಮಾಜದಲ್ಲಿ ಕೆಲವರು ಮತ್ತು ಗುಂಪುಗಳು ಯಾವ ತಪ್ಪೂ ಇಲ್ಲದೆ ಅಪಾರ ಸಂಕಷ್ಟಕ್ಕೆ ಒಳಗಾಗಿರುವರು ಎಂಬುದರ ಬಗ್ಗೆ ಚರ್ಚೆಯನ್ನು ಪೋಷಿಸಿರಿ.
- ಶಿಕ್ಷಣ, ಉದ್ಯೋಗದಲ್ಲಿ ತೊಡಕು, ಆರೋಗ್ಯ, ನೀರು, ನೈರ್ಮಲ್ಯ, ಚುನಾಯಿತ ಪ್ರತಿನಿಧಿಗಳ ಪಾತ್ರ, ಸಮುದಾಯದಲ್ಲಿ ಉದ್ಯೋಗ ಅವಕಾಶಗಳಿದ್ದು ಯಾರು ಯಾವ ವಿಭಾಗದಲ್ಲಿ ಕಾರ್ಯವನ್ನು ಚೆನ್ನಾಗಿ ನಿರ್ವಹಿಸುತ್ತಾರೆ ಮತ್ತು ಎಲ್ಲಿ ಸುಧಾರಣೆಯ ಅಗತ್ಯವಿದೆ ಎಂಬುದರ ಬಗ್ಗೆ ಚರ್ಚಿಸಿ.
- ವ್ಯಕ್ತಿತ್ವ ವಿಕಾಸ ಮತ್ತು ಮುಖಂಡತ್ವ, ಗುಂಪು ನಿರ್ಮಾಣ ಮತ್ತು ಅದರ ಉದ್ದೇಶ, ಕುಟುಂಬ ಜೀವನ, ಸಾಮಾಜಿಕ ಸಂಬಂಧಗಳು, ಸಾಮಾಜಿಕ–ಸಾಂಸ್ಕೃತಿಕ ವಿಶ್ಲೇಷಣೆ, ಲಿಂಗಬೇಧ, ಸಾಮಾಜಿಕ–ರಾಜಕೀಯ ಜ್ಞಾನ, ಆಡಳಿತ ಯಂತ್ರದ ಬಗ್ಗೆ ಅರಿವನ್ನು ವೃದ್ಧಿಸಲು ಒಳಸೂಚಿ ಕಾರ್ಯಾಗಾರಗಳನ್ನು ಸಂಘಟಿಸಿರಿ.
- ಒಳಸೂಚಿ ಅಧಿವೇಶನ ನಂತರ ಸಂವಿಧಾನ ಅವಕಾಶಗಳು, ಮೂಲ ಕಾನೂನು ಮತ್ತು ಮಾನವ ಹಕ್ಕುಗಳು (ಪೌರ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ), ಮಾನವ ಘನತೆ ಇತ್ಯಾದಿ. ಸಮುದಾಯದ ಸದಸ್ಯರು ತಮ್ಮ ಹಕ್ಕುಗಳನ್ನು ಗೌರವಿಸಿ ಕಾಪಾಡುತ್ತಿರುವರೋ ಅವುಗಳ ಅನುಷ್ಠಾನದ ಬಗ್ಗೆ ಆಲೋಚಿಸುವುದು ಅಗತ್ಯ.
- __________ (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಸೂಚನೆಗಳು

- ವ್ಯಕ್ತಿಯ ಬಗ್ಗೆ ಮಾಡಿದ ಚರ್ಚೆ ಸದಸ್ಯನಲ್ಲಿ ಆತ್ಮ ವಿಶ್ವಾಸವನ್ನು ತುಂಬಬೇಕು. ವೇದಿಕೆ ಭಯ, ಅಪರಿಚಿತರಲ್ಲಿ ಮಾತನಾಡುವ ಭೀತಿಯನ್ನು ದೂರ ಮಾಡಬೇಕು.
- ನವನವೀನ ಹಾಗೂ ಸೃಜನಾತ್ಮಕ ತಾಂತ್ರಿಕತೆಯನ್ನು ಬಳಸಿರಿ. ಇದು ಕೇವಲ ಮಿದುಳಿನ ಜ್ಞಾನವನ್ನು ಹೆಚ್ಚಿಸುವ ಅಭ್ಯಾಸವಾಗದೆ, ಹೃದಯ, ಇಂದ್ರೀಯ, ಭಾವನೆಗಳನ್ನು ಆವರಿಸುವಂತಾಗಲಿ. ಸದಸ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಚಿತ್ರಗಳನ್ನು ಬರೆಯಲಿ, ಪ್ರಹಸನ, ನಾಟಕಗಳನ್ನು ಪ್ರದರ್ಶಿಸಲು, ಉತ್ತೇಜಕ ವೀಡಿಯೊ ತೋರಿಸಿರಿ.
- ಸಮುದಾಯ ಮತ್ತು ಹೊರಗಿನ ಸಂಪನ್ಮೂಲ ವ್ಯಕಿಗಳನ್ನು ಆಹ್ವಾನಿಸಿ ಅವರಿಂದ ವಿವಿಧ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡಿ.
- ಎಲ್ಲ ಚರ್ಚೆಗಳು ಸದಸ್ಯರ ಜೀವನ ಅನುಭವದ ಸುತ್ತ ಹೆಣೆದಿರಲಿ. ಮಾನಸಿಕ, ಸಾಮಾಜಿಕ ವಿಚಾರ ಮತ್ತು ಇತರ ಅನುಭವಗಳ ಮೇಲೆ ಕೇಂದ್ರೀಕೃತವಾಗಿರಲಿ.
- ಚರ್ಚೆಯಲ್ಲಿ ಸಹಭಾಗಿಗಳ ಮಾತುಗಳಲ್ಲಿ ಮುಖ್ಯವಾದುದನ್ನು ಎತ್ತಿ ಹಿಡಿದು "ಇದನ್ನು ನೀವು ಹೇಳುತ್ತಿರುವಿರಾ?" ಎಂದು ಪ್ರಶ್ನಿಸಿರಿ.
- ಕಾರ್ಯಕಲಾಪಗಳಿಗೆ ತೊಡಕು, ಭಿನ್ನತೆ ತರುವ ಹಾಗೂ ಹಾನಿಯುಂಟು ಮಾಡುವ ಸದಸ್ಯರನ್ನು ಬಹಿರಂಗವಾಗಿ ಖಂಡಿಸಬೇಡಿ, ವೈಯಕ್ತಿಕವಾಗಿ ತಿದ್ದಿರಿ.
- ಸಮುದಾಯದಲ್ಲಿ ಕೆಲವು ವಸ್ತುಗಳು ಈ ರೀತಿಯಲ್ಲಿ ಏಕೆ ಇವೆ ಎಂಬುದರ ಬಗ್ಗೆ ಈ ಅಭ್ಯಾಸ ಕೇಂದ್ರೀಕರಿಸಲಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಸೂಚನೆಗಳು

- ಸದಸ್ಯರ ಪರ ವಹಿಸಬೇಡಿ ಅಥವಾ ತೀರ್ಮಾನ ಕೊಡಬೇಡಿ. ಸದಸ್ಯರು ಯಾವುದೇ ವಿಷಯವನ್ನು ದೀರ್ಘವಾಗಿ ಯೋಚನೆ ಮಾಡಲು ಪ್ರೋತ್ಸಾಹಿಸಿ.
- ಸದಸ್ಯರ ಮಾತಿನಲ್ಲಿ ಸ್ಪಷ್ಟತೆ ಅಥವಾ ಭಿನ್ನಾಭಿಪ್ರಾಯವಿದ್ದರೆ ಅದನ್ನು ತೊಡೆದು ಹಾಕಬೇಡಿ.
- ಚರ್ಚೆಗಳು ಶತ್ರುತ್ವದೆಡೆಗೆ ವಾಲದಂತೆ ಎಚ್ಚರ ವಹಿಸಿ. ಅಂತಹ ವಿಚಾರವಿದ್ದರೆ ಸ್ವಲ್ಪ ವಿರಾಮ ತೆಗೆದುಕೊಂಡು ನಂತರ ಮುಂದುವರಿಸಿ.
- ಪ್ರತಿಯೊಂದು ವಿಷಯದ ಬಗ್ಗೆ ಸದಸ್ಯರು ಸಹಮತ ತೋರಬೇಕೆಂದಿಲ್ಲ. ಅವರು ಭಿನ್ನಮತ ತೋರುವುದರಲ್ಲೂ ಸಹಮತವಿರಬಹುದು.
- ಪ್ರಜ್ಞಾವಂತ "ಪರಿಪೋಷಕ" ಅಥವಾ "ಸಚೇತಕ"ರಾಗಿ ವರ್ತಿಸಿ. ಸದಸ್ಯರಿಗೆ ಜ್ಞಾನ ಮತ್ತು ವಿಶ್ಲೇಷಣೆಯನ್ನು "ಸರಬರಾಜು" ಮಾಡುವವರೂ "ನೆಲಸಮ" ಮಾಡುವವರಾಗಬೇಡಿ.
- ಚರ್ಚೆಗಳು ಕೆಲವರ ಸೊತ್ತಾಗದಂತೆ ಅಥವಾ "ಹೈಜಾಕ್" ಆಗದಂತೆ ಅಥವಾ ಅದು ಪೂರ್ವ ನಿಯೋಜಿತ ಮುಖಂಡರ ಅಥವಾ ವಿಶೇಷ ಅಧಿಕಾರಿಗಳ ಪಾಲಾಗದಂತೆ ಎಚ್ಚರ ವಹಿಸಿ.
- ಚರ್ಚೆಯಲ್ಲಿ ಭಾಗಿಗಳಾದ ಸದಸ್ಯರ ಮೇಲೆ ನಿಮ್ಮ ಚಿಂತನೆಗಳನ್ನು ಹೇರಬೇಡಿ ಅಥವಾ ಅವರ ಮೇಲೆ ಒತ್ತಡ ತರಬೇಡಿ.
- ಸದಸ್ಯರಿಗೆ "ಮಾಡು" ಎಂಬ ನಿರ್ದೇಶನ ಅಥವಾ "ದೂರಿನ ಪಟ್ಟಿ"ಯನ್ನು ಸಿದ್ಧ ಮಾಡಬೇಡಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಸೂಚಿಗಳು

1. XXX ಸದಸ್ಯರು ಹಿಂದಿಗಿಂತ ಈಗ ಅತ್ಮವಿಶ್ವಾಸವುಳ್ಳವರೂ ಸ್ವಯಂ ಶಕ್ತರೂ ಆಗಿದ್ದಾರೆ.
2. XXX ಶೇಕಡ ಸದಸ್ಯರು ಸ್ವಂತ ಮತ್ತು ಸಮುದಾಯದ ಬಗ್ಗೆ ವಿಶ್ಲೇಷಣಾ ಪರಿಜ್ಞಾನವನ್ನು ಬೆಳೆಸಿಕೊಂಡಿದ್ದಾರೆ.
3. XXX ಶೇಕಡ ಸದಸ್ಯರು ತಮ್ಮ ಆನಿಸಿಕೆಗಳನ್ನು ಗುಂಪಿನಲ್ಲಿ ಯಾವ ಭಯ ಅಥವಾ ಅಂಜಿಕೆ ಇಲ್ಲದೆ ಹಂಚಿಕೊಳ್ಳುತ್ತಾರೆ.
4. XXX ಗುಂಪಿನ ಸದಸ್ಯರು ಕುಟುಂಬದ ಸದಸ್ಯರಿಗಿರುವ ಅಂತಸ್ತು ಮತ್ತು ಪಾತ್ರಗಳ ಬಗ್ಗೆ ಪುನಃ ಪರಿಶೀಲನೆ ಮಾಡುತ್ತಿದ್ದಾರೆ.
5. XXX ಗುಂಪುಗಳು ತಮ್ಮ ಸಮುದಾಯದಲ್ಲಿ ಸಂಕಷ್ಟಕ್ಕೆ ಒಳಗಾದ ಸದಸ್ಯರನ್ನು ಗುರುತಿಸಿದ್ದಾರೆ.
6. XXX ಗುಂಪುಗಳು ಇದುವರೆಗೆ ಕಡೆಗಣಿಸಲಾದ ಸಮುದಾಯದ ಕ್ಲಿಷ್ಟ ವಿಷಯಗಳ ಪಟ್ಟಿ ಮಾಡಿರುತ್ತಾರೆ.
7. XXX ಶೇಕಡ ಸದಸ್ಯರು ತಮ್ಮ ಜೀವನ ಮಟ್ಟವನ್ನು ಸುಧಾರಿಸಲು ಏನನ್ನಾದರೂ ಮಾಡಬೇಕು ಎಂಬ ಭಾವನೆಯನ್ನು ಹೊಂದಿದ್ದಾರೆ.
8. XXX ಶೇಕಡ ಸದಸ್ಯರು CBOಗಳನ್ನು ಬಲಪಡಿಸುವ ಅಗತ್ಯ ಮತ್ತು ಸಮುದಾಯವನ್ನು ಮುನ್ನಡೆಸುವಲ್ಲಿ ತಮ್ಮ ಪಾತ್ರವನ್ನು ಗ್ರಹಿಸಿಕೊಂಡಿದ್ದಾರೆ.
9. XXX ಸದಸ್ಯರು ಮಿಶ್ರ ಗುಂಪಿನ ಸ್ಥಾಪನೆ ಸರಿಯಾದ ನಿರ್ಧಾರ ಹಾಗೂ ಅದು ಜಾತಿ ಮತ್ತು ಧರ್ಮಕ್ಕೆ ಮೇಲಾದದು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ.
10. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಆತ್ಮಾವಲೋಕನ ಮತ್ತು ವಿಶ್ಲೇಷಣೆ

| | ಈ ಕೆಳಗಿನ ವಿಷಯಗಳ ಆಧಾರದ ಮೇಲೆ ಅಸಮಾನತೆ/ ಸಂತೃಸ್ತರು/ ತಾರತಮ್ಯಕ್ಕೆ ಒಳಗಾದವರನ್ನು ಗುರುತಿಸಲಾಗಿದೆ | | | | ಈ ವ್ಯವಸ್ಥೆಯನ್ನು ಬದಲಾಯಿಸಲು ಸದಸ್ಯರು ಏನನ್ನು ಮಾಡಲು ಬಯಸುತ್ತಾರೆ |
|---|---|---|---|---|---|
| ಸದಸ್ಯರು | ಜಾತಿ | ಧರ್ಮ | ಲಿಂಗ | ವಿಕಲತೆ | |
| ಮಹಿಳೆಯರು | | | | | |
| ಯುವ ಹೆಣ್ಣು ಮಕ್ಕಳು | | | | | |
| ಯುವ ಗಂಡು ಮಕ್ಕಳು | | | | | |
| ಮಕ್ಕಳು | | | | | |
| ಪುರುಷರು | | | | | |
| CBOಗಳು | | | | | |



## ವಿಷಯಗಳ ವಿಶದತೆ

| | ವಿಶದಪಡಿಸಲಾದ ವಿಷಯಗಳು | | |
|---|---|---|---|
| | ವ್ಯಕ್ತಿಗಳ ಬಗ್ಗೆ ಕಾಳಜಿಗಳು | ಸಮುದಾಯದ ಸಾಮಾನ್ಯ ವಿಷಯಗಳು | ಸದಸ್ಯರು ವಿಶದಪಡಿಸಲು ಕಷ್ಟವೆಂದು ಪರಿಗಣಿಸಿದ ವಿಷಯಗಳು |
| ಮಹಿಳೆಯರು | | | |
| ಯುವ ಹೆಣ್ಣು ಮಕ್ಕಳು | | | |
| ಯುವ ಗಂಡು ಮಕ್ಕಳು | | | |
| ಮಕ್ಕಳು | | | |
| ಪುರುಷರು | | | |
| CBOಗಳು | | | |

## ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

೧. ಕೆಲವು ಜನರು ಗುಂಪಿನ ಸಭೆಯಲ್ಲಿ ಮೌನವಾಗಿರುತ್ತಾರೆ, ನಾಚಿಕೆಯನ್ನು ಪ್ರದರ್ಶಿಸುತ್ತಾರೆ. ಕುಟುಂಬದಲ್ಲಿ ಅವರ ಅಂತಸ್ತು ಮತ್ತು ಪಾತ್ರಕ್ಕೂ ಈ ವರ್ತನೆಗೂ ಏನಾದರೂ ಸಂಬಂಧವಿದೆಯೆ e?

೨. ಎಲ್ಲಾ ಸದಸ್ಯರ ಸಹಭಾಗಿತ್ವಕ್ಕೆ ನೀವು ಪ್ರಯೋಗಿಸಿದ ಮಾರ್ಗೋಪಾಯವೇನು?

೩. ನಿಮ್ಮ ಸುತ್ತಮುತ್ತಲಿನ ವಿದ್ಯಮಾನಗಳನ್ನು ಟೀಕಾತ್ಮಕವಾಗಿ ನೋಡಿ ಎಂದು ಸದಸ್ಯರಿಗೆ ಹೇಳಿದಾಗ ನೀವು ತೊಡಕನ್ನು ಎದುರಿಸಿದ್ದೀರಾ? ಹೌದಾದರೆ ಅದನ್ನು ಯಾವ ರೀತಿಯಲ್ಲಿ ಪರಿಹರಿಸಿದಿರಿ?

೪. ವ್ಯಕ್ತಿ, ಗುಂಪುಗಳ ಮುಖಂಡತ್ವ ಬೆಳವಣಿಗೆಯಲ್ಲಿ ವ್ಯಕ್ತಿತ್ವ ವಿಕಸನದ ಯಾವ ಅಂಶ ಮಾರ್ಗೋಪಾಯವಾಯಿತು? ಹೌದಾದರೆ ಯಾವ ಅಂಶ?

೫. ವಿವಿಧ ವಿಷಯಗಳ ಬಗ್ಗೆ ವಿವರಗಳನ್ನು ನೀವು ಹೂಡಿಕೆ ಮಾಡಿದಾಗ ಅವನ್ನು ಅವರು ಸ್ವೀಕರಿಸಿದರೇ? ಅವರು ಅಸಹಾಯಕರು, ಕೋಪಿಷ್ಠರಾದರೋ? ಅಥವಾ ಪ್ರಸ್ತುತ ಪರಿಸರವನ್ನು ಮಾರ್ಪಡಿಸುವ ನಿರ್ಧಾರ ಮಾಡಿದರಾ?

೬. ಗುಂಪುಗಳು ನಿಯಮಿತವಾಗಿ ಸಭೆ ಸೇರುವುದರ ಬಗ್ಗೆ ಸಮುದಾಯದ ಸದಸ್ಯರಿಂದ ನೀವು ಗಮನಿಸಿದ ಪ್ರತಿಕ್ರಿಯೆ ಏನು?

೭. ಬದಲಾದ ನಿರೂಪಣೆಗಳಲ್ಲಿ ನೀವು ಗುರುತಿಸಿದ ಗಮನಾರ್ಹ ಅಂಶಗಳಾವುವು?

೮. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಅಪಹರಣಕ್ಕೆ ಒಳಗಾದ ಸೋದರಿಯನ್ನು ಸಂರಕ್ಷಿಸಿದೆ

ಕುಮಾರಿ ನಫಿಜಾ ಖಾತುಮ್ ೧೩ ವರ್ಷದ ವಿದ್ಯಾರ್ಥಿನಿಯಾಗಿದ್ದು ಮಕ್ಕಳ ಗುಂಪಿನ ಸದಸ್ಯೆಯಾಗಿದ್ದಳು. ಒಂದು ಕೆಟ್ಟ ಘಟನೆಯ ಬಗ್ಗೆ ಅವಳ ನಿರೂಪಣೆ ಇದು.

"ನನ್ನ ತಂದೆ ಮತ್ತು ರಫೀಕ್ ಎಂಬುವವರು ಪರಸ್ಪರ ವಿರೋಧಿಗಳಾಗಿದ್ದರು. ಅವರು ಹೊಟ್ಟೆಕಿಚ್ಚಿನಿಂದ ನನ್ನ ೧೬ ವರ್ಷದ ಅಕ್ಕ ನೀರನ್ನು ತರಲು ರೈಲ್ವೆ ಲೈನಿನ ಆಚೆ ಹೋದಾಗ ಅವಳನ್ನು ಅಪಹರಿಸಲಾಯಿತು. ಅವಳ ಜ್ಞಾನ ತಪ್ಪಿಸಿ, ಬುರ್ಖಾ ಹಾಕಿ ಅವಳನ್ನು ಉತ್ತರ ಪ್ರದೇಶಕ್ಕೆ ಸಾಗಿಸಿ ೩ ಲಕ್ಷ ರೂಪಾಯಿಗಳಿಗೆ ಮಾರಲಾಯಿತು. ಅಲ್ಲಿ ಒಂದು ಬಾರಿನ ಮಾಲೀಕನು ಅಕ್ಕನಿಗೆ ಅರೆ ಬೆತ್ತಲೆ ವಸ್ತ್ರಗಳನ್ನು ತೊಡಿಸಿದನು. ಉರಿಯುತ್ತಿರುವ ಸಿಗರೇಟಿನ ಮೋಟುಗಳನ್ನು ಮೈಮೇಲೆ ಮುಟ್ಟಿಸಿ ಹಿಂಸಿಸಲಾಯಿತು. ಜನರ ಮುಂದೆ ಕುಣಿಯುವಂತೆ ಅವಳನ್ನು ಬಲಾತ್ಕರಿಸಲಾಯಿತು. ಈ ಮಧ್ಯೆ ರಫೀಕ್ ಸಮುದಾಯದ ಜನರಲ್ಲಿ ನನ್ನ ಅಕ್ಕ ಯಾರೊಡನೆಯೋ ಓಡಿ ಹೋದಳು ಎಂದು ಸುದ್ಧಿಯನ್ನು ಹಬ್ಬಿಸಿದನು. ಸ್ಥಳೀಯ ಪೋಲಿಸರು ನಾವು ಕೊಟ್ಟ ದೂರನ್ನು ದಾಖಲಿಸಿಕೊಳ್ಳಲಿಲ್ಲ. ನಾನು ನನ್ನ ತಾಯಿಗೆ ಮಕ್ಕಳ ಸುರಕ್ಷಾ ವಾಣಿಯ ಸಂಖ್ಯೆ (೧೦೯೮) ಬಗ್ಗೆ ತಿಳಿಸಿದೆ. ಈ ವಿವರ ನನಗೆ ನಮ್ಮ ಮಕ್ಕಳ ಗುಂಪಿನಲ್ಲಿ ಸಿಕ್ಕಿತು. ನನ್ನ ತಾಯಿ ಈ ಸಂಖ್ಯೆಗೆ ಫೋನ್ ಮಾಡಿ ವಿಷಯವನ್ನು ತಿಳಿಸಿದರು. ತಕ್ಷಣ ಕೆಲವು ಜನರು ನಮ್ಮ ಮನೆಗೆ ಬಂದು ದೂರನ್ನು ದಾಖಲಿಸಲು ಸಹಾಯ ಮಾಡಿದರು. ಈ ಮಧ್ಯೆ ನನ್ನ ಅಕ್ಕ ತಾನಿದ್ದ ಸ್ಥಳದಿಂದ ಹೇಗೋ ದೂರ ವಾಣಿಯ ಮುಖಾಂತರ ತನ್ನನ್ನು ಅಪಹರಿಸಿದವರ ಹೆಸರು ಮತ್ತು ವಿವರಗಳನ್ನು ನೀಡಿದಳು. ಮಕ್ಕಳ ಸುರಕ್ಷಾ ಸಂಸ್ಥೆ ಸ್ಥಳೀಯ ಪೋಲೀಸರ ಸಹಕಾರದಿಂದ ನನ್ನ ಅಕ್ಕನಿರುವ ಸ್ಥಳವನ್ನು ಕಂಡು ಹಿಡಿದರು. ಅವಳು ನಮ್ಮ ಊರಿನಿಂದ ೪೦೦ ಕಿ.ಮೀ ದೂರದಲ್ಲಿರುವ ಲಕ್ನೊ ಪಟ್ಟಣದಲ್ಲಿದ್ದಳು. ಅವರು ಉತ್ತರ ಪ್ರದೇಶದ ಪೊಲೀಸರನ್ನು ಸಂಪರ್ಕಿಸಿದರು. ಅವರು ನನ್ನ ಅಕ್ಕನನ್ನು ಸಂಧಿಸಿ ಅವಳನ್ನು ಮನೆಗೆ ತಂದು ತಲುಪಿಸಿದರು. ನನ್ನ ಅಕ್ಕನ ಸಾಕ್ಷ್ಯದ ಆಧಾರದ ಮೇಲೆ ಅಪಹರಣಕಾರರನ್ನು ಜೈಲಿಗೆ ಕಳುಹಿಸಲಾಯಿತು.

CHAPTER 6

# ಸಾಮಾಜಿಕ ಸಮಸ್ಯೆಗಳ ಗುರುತಿಸುವಿಕೆ ಮತ್ತು ಶ್ರೇಣೀಕರಣ



# ಸಾಮಾಜಿಕ ಸಮಸ್ಯೆಗಳ ಗುರುತಿಸುವಿಕೆ ಮತ್ತು ಶ್ರೇಣೀಕರಣ

## ಉದ್ದೇಶ

ಸಮುದಾಯದ ಸದಸ್ಯರಿಂದ ಸಾಮಾಜಿಕ ಸಮಸ್ಯೆಗಳ ಪರಿಶೀಲನೆ ಸಮುದಾಯದ ಮುಂದಿನ ಎಲ್ಲ ತೀರ್ಮಾನಗಳಿಗೆ ಅಸ್ತಿರವಾಗಿದೆ. ಸಾಮಾಜಿಕ ಸಮಸ್ಯೆಗಳ ಪರಿಶೀಲನೆಯಲ್ಲಿ ಏನನ್ನು ಬದಲಾಯಿಸಬೇಕು ಎಂಬುದರ ಗುರುತಿಸುವಿಕೆ ಒಳಗೊಂಡಿರುತ್ತದೆ. ಅದೇ ಸಂದರ್ಭದಲ್ಲಿ ಸಮುದಾಯದಲ್ಲಿರುವ ಸಂಪನ್ಮೂಲಗಳ ಬಗ್ಗೆಯೂ ನೀಲಿ ನಕ್ಷೆಯನ್ನು ಸಿದ್ಧಪಡಿಸಬೇಕಾಗುತ್ತದೆ. ಒಂದು ಸಮಸ್ಯೆ ಒಬ್ಬ ವ್ಯಕ್ತಿ, ಗುಂಪು ಅಥವಾ ಇಡೀ ಸಮುದಾಯದ ಸಂವೇದನೆಗೆ ಬರಬಹುದು. ಅದು ಆಹಾರ, ನೀರು, ನೈರ್ಮಲ್ಯದಂತಹ ಸಾಮಾನ್ಯ ಅಗತ್ಯವಾಗಿರಬಹುದು ಅಥವಾ ಜಾತಿ ಮತ್ತು ಧರ್ಮದ ವೈವಿಧ್ಯತೆಯ ಮಧ್ಯೆ ಸಹಬಾಳ್ವೆಯ ಬಗ್ಗೆಯೂ ಆಗಿರಬಹುದು. ಇಲ್ಲಿ ಸಂಪನ್ಮೂಲ ಅಥವಾ ಬಂಡವಾಳ, ವ್ಯಕ್ತಿಗಳು, ಸಂಸ್ಥೆ ಸಂಘಟನೆಗಳು, ಕಟ್ಟಡಗಳು, ಸಾರ್ವಜನಿಕ ಆಸ್ತಿ, ಉದ್ದಿಮೆಗಳು ಮತ್ತು ಲೋಕೋಪಯೋಗಿ ದಾನಿಗಳ ಸೇರ್ಪಡೆಯಾಗಬಹುದು. ಸಮುದಾಯದ ವಾಸ್ತವ ಹಾಗೂ ಸಮಗ್ರ ಚಿತ್ರಣ ಅಭಿವೃದ್ಧಿ ಕಾರ್ಯಕ್ಕೆ ಅಗತ್ಯವಾಗಿದೆ. ಸಾಮಾಜಿಕ ಸಮಸ್ಯೆಗಳ ಗುರುತಿಸುವಿಕೆಯಿಂದ ಅಲ್ಲಿ ಏನಿದೆ ಮತ್ತು ಏನಿರಬೇಕು ಎಂಬುದರ ಮಧ್ಯೆ ಇರುವ ಅಂತರದ ಬಗ್ಗೆ ತಿಳಿಯುತ್ತದೆ. ಈ ಪ್ರಕ್ರಿಯೆಯಲ್ಲಿ ವಿಸ್ತ್ರತ ದತ್ತ ಮಾಹಿತಿ, ಅಂಕಿ ಅಂಶಗಳು, ವಾಸ್ತವತೆಗಳು  ಸಂತೃಸ್ತರು, ಇತಿಹಾಸದ ಮತ್ತು ಅನುಭವಗಳು ಒಳಪಡುತ್ತವೆ. ಅವುಗಳ ವಿಶ್ಲೇಷಣೆಯಿಂದ ಪ್ರತ್ಯೇಕ ಕೊರತೆಗಳ ಬಗ್ಗೆ ನಿಖರ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ. ಪರಿಪೋಷಕರು ಸದಸ್ಯರಿಗೆ ಸೂಕ್ತ ಸೂಚನೆ, ತಪ್ಪಿ ಹೋದ ವಿವರ ಅಥವಾ ಇತರೆ ದತ್ತ ಮಾಹಿತಿಯನ್ನು ಕೊಟ್ಟು ನೆರವಾಗಬಹುದು.

ಎಲ್ಲಾ ಸಾಮಾಜಿಕ ಸಮಸ್ಯೆಗಳನ್ನು ಏಕಕಾಲದಲ್ಲಿ ಎತ್ತಿಕೊಳ್ಳುವುದು ವ್ಯಾವಹಾರಿಕವೂ ಸಾಧ್ಯವೂ ಅಲ್ಲ. ಆದುದರಿಂದ ಒಮ್ಮೆ ಸಮಸ್ಯೆಗಳನ್ನು ಗುರುತಿಸಿದ ಮೇಲೆ ಸಮುದಾಯದ ಸದಸ್ಯರು ಅವುಗಳಲ್ಲಿ ಯಾವುವು ಅತ್ಯಗತ್ಯ ಮತ್ತು ತಕ್ಷಣ ಪರಿಹರಿಸಬೇಕು ಎಂಬುದನ್ನು ನಿರ್ಧರಿಸಲು ಶ್ರೇಣೀಕರಿಸಬೇಕು.

ಅವು ವ್ಯಕ್ತಿ, ಗುಂಪು ಮತ್ತು ಇಡೀ ಸಮುದಾಯದಲ್ಲಿರುವ ಸಂತ್ರಸ್ತರಿಗೆ ಪ್ರಯೋಜನಕಾರಿಯಾಗಿರಬೇಕು. ಸಾಮಾಜಿಕ ಸಮಸ್ಯೆಗಳನ್ನು ಅಗತ್ಯಕ್ಕೆ ತಕ್ಕಂತೆ ಪಟ್ಟಿ ಮಾಡಿದ ಮೇಲೆ ಸಮುದಾಯದ ಸದಸ್ಯರನ್ನು ಸಭೆ ಸೇರಿಸಿ ಪ್ರತಿಯೊಂದು ಸಮಸ್ಯೆ, ಕೊರತೆಗೆ ಕ್ರಿಯಾ ಯೋಜನೆಯನ್ನು ತಯಾರಿಸಬೇಕು. ಅನಂತರ ಸಮಸ್ಯೆಯ ಸಂಕೀರ್ಣತೆಯನ್ನು ಅರಿತು ಸದಸ್ಯರಿಗೆ ಜವಾಬ್ದಾರಿಗಳನ್ನು ವಹಿಸಬೇಕು. ಈ ಹಂತದ ಪ್ರಾಮುಖ್ಯತೆ ಏನೆಂದರೆ, ನಿಗದಿಪಡಿಸಲಾದ ಸಮಸ್ಯೆಗಳನ್ನು ಸಂಪನ್ಮೂಲಗಳೊಂದಿಗೆ ಜೋಡಿಸಬೇಕು. ಅವನ್ನು ಮುಂದಿನ ಕ್ರಿಯಾ ಯೋಜನೆ ಮತ್ತು ಹೊಣೆ ಹೊರುವ ಸದಸ್ಯರೊಡನೆ ಸಮೀಕರಿಸಬೇಕು.

# ಕಾಲಾವಧಿ

ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದು ಏಕ ಕಾಲದ ಅಭ್ಯಾಸವಲ್ಲ. ಅದನ್ನು ಸಮುದಾಯದ ಸದಸ್ಯರು ವಾಸ್ತವತೆಯ ಬಗ್ಗೆ ತಮ್ಮ ಅರಿವು ಆಳವಾದಂತೆಲ್ಲಾ ಅದನ್ನು ಪುನರೀಕರಿಸಬೇಕಾಗುತ್ತದೆ. ಅವರು ಪ್ರಗತಿಯನ್ನು ಸಾಧಿಸಿದಂತೆಲ್ಲಾ ಮುಂದುವರಿಸಬೇಕಾಗುತ್ತದೆ. ಪ್ರಾರಂಭಿಕ ಪ್ರಕ್ರಿಯೆಯಲ್ಲಿ ಸಮುದಾಯದ ಸದಸ್ಯರು ಮೂರು ಅಥವಾ ನಾಲ್ಕು ಬಾರಿ ಸಭೆ ಸೇರಬೇಕಾಗುತ್ತದೆ. ಈ ಸಂದರ್ಭದಲ್ಲಿ ಸಮಸ್ಯೆಗಳ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಾಮುಖ್ಯತೆಗೆ ತಕ್ಕಂತೆ ಕೆಲಸವನ್ನು ಕೈಗೊಳ್ಳಲು ಸಹಮತವನ್ನು ಪಡೆದುಕೊಳ್ಳಬೇಕಾಗುತ್ತದೆ.

**“ಇಲ್ಲ” ಮತ್ತು “ಹೌದು” ಎನ್ನುವ ಕಲಿಕೆ**

| ✗ | ✓ |
|---|---|
| ಕೊಡುಗೆ: ಗ್ರೈಂಡರ್ ಮಿಕ್ಸಿ<br>ಬ್ರಷ್ಟಾಚಾರ<br>ಮಧ್ಯವರ್ತಿ | ಮಕ್ಕಳ ಶಿಕ್ಷಣ<br>ನೈರ್ಮಲ್ಯ ಮತ್ತು ಆರೋಗ್ಯ<br>ರಕ್ಷಣೆ ನೀರು, ವಿದ್ಯುತ್,<br>ಶೌಚಾಲಯ, ರಸ್ತೆಗಳು,<br>ಸಂರಕ್ಷಣೆ, ಭದ್ರತೆ |

# ಸಾಗುವ ಮಾರ್ಗಗಳು

- ಸದಸ್ಯರನ್ನು ಸಭೆ ಸೇರಿಸಿ. ಅವರು ಸಾಮಾಜಿಕ ಪರಿಸ್ಥಿತಿ ಏಕೆ ಹೀಗಿದೆ ಎಂಬುದನ್ನು ಸಂವೇದಿಸಲು ಮುಕ್ತ ಸಂವಾದಕ್ಕೆ ಅವಕಾಶ ಮಾಡಿಕೊಡಿ. ಲಭ್ಯವಿರುವ ದತ್ತ ಮಾಹಿತಿ, ಸತ್ಯಾಂಶ, ಅಂಕಿ ಅಂಶ, ವಾಸ್ತವತೆ, ಸಾಧಕ ಬಾಧಕ ವಿಷಯಗಳು, ಇತಿಹಾಸ ಮತ್ತು ಅನುಭವಗಳನ್ನು ಮುಂದಿಟ್ಟುಕೊಳ್ಳಿ. ಆಗ ಸದಸ್ಯರಲ್ಲಿ ಅಧಿಕ ಸಂಖ್ಯಾತರು ವಾಸ್ತವತೆಯ ಮತ್ತು ಸಮಸ್ಯೆಗಳ ಬಗ್ಗೆ ಸಮಾನ ಮಾಹಿತಿಯನ್ನು ಪಡೆಯುವರು.

- ಸಮಸ್ಯೆಯ ವಿಶ್ಲೇಷಣೆಯನ್ನು ಮಾಡಿ ಲಭ್ಯವಾದ ಮಾಹಿತಿಯನ್ನು ಚರ್ಚಾ ಸಭೆಯಲ್ಲಿ ಬಾಹ್ಯ ಆಮಿಷ, ಅಭಿಪ್ರಾಯಗಳನ್ನು ಹೇರದೆ ಮುಂದಿಡಬಹುದು. ಇಲ್ಲಿ ಅಭ್ಯಾಸ ಸಂಶೋಧನೆ ಮಾದರಿಯನ್ನು ಅನುಸರಿಸಬಹುದು. ಅಭ್ಯಾಸ ಸಂಶೋದನೆ ವಿಧಾನದ ಮೂಲವೆಂದರೆ ಸಿದ್ಧಾಂತದಿಂದ ಕ್ರಿಯೆಗೆ ಚಾಲನೆ ಕೊಡುವುದು ಮತ್ತು ಈ ಪ್ರಕ್ರಿಯೆ ಕೇವಲ ಶುಷ್ಕ ಪಾಂಡಿತ್ಯವಾಗಲಾರದು. ಇದರಲ್ಲಿ ಸಂಶೋಧನೆ ಮತ್ತು ಅಭ್ಯಾಸದ ಮಿಶ್ರಣವಿದೆ, ಕ್ಷೇತ್ರ ಅನ್ವೇಷಣೆಗೆ ಮತ್ತು ವ್ಯಾವಹಾರಿಕ ಅನುಭವವಿದೆ. ಪಠ್ಯಾಧಾರ ಪರಿಣಾಮ ಮತ್ತು ಸಾಕ್ಷ್ಯಾಧಾರಿತ ಪ್ರಯೋಗ, ಬದುಕಿನ ಭಾಗವಾಗಿದ್ದು ಸಮಾಜ ಸೇವೆಯನ್ನು ಅಳೆಯುವ ಮಾಪನವಾಗಿದೆ (ಓಸ್ಬೋರ್ನ್ ೨೦೦೨; ಹೈನ್ರಿಕ್ ೨೦೦೨).

- ಸಹಭಾಗಿತ್ವದ ಕಲಿಕೆ ಮತ್ತು ಕ್ರಿಯೆ (PLA) ಮತ್ತು ಸಹಭಾಗಿತ್ವದ ಗ್ರಾಮೀಣ ಮೌಲ್ಯ ನಿಷ್ಕರ್ಷೆ (PRA) ತಾಂತ್ರಿಕತೆಗಳು ಕೇಂದ್ರಿಕೃತ ಗುಂಪು ಚರ್ಚೆಯೊಂದಿಗೆ ಮಧ್ಯಂತರ ನಡೆಯನ್ನು ಕ್ರಿಯಾತ್ಮಕವಾಗಿ ಬಳಸಿ ಸಮುದಾಯದ "ದೊಡ್ಡ ಚಿತ್ರಣ"ವನ್ನು ಅಭಿವೃದ್ಧಿಪಡಿಸಬಹುದು. ಅಲ್ಲದೆ ಯೋಜನೆಯ ಸೂಕ್ಷ್ಮ ವಿಷಯಗಳನ್ನು ಗುರುತಿಸಬಹುದು. PLAಮತ್ತು (PRA) ವಿಧಾನಗಳ ಕಲಿಕೆ ಮತ್ತು ಸಮುದಾಯಗಳನ್ನು ಸಹಭಾಗಿತ್ವ ಮತ್ತು ದೃಶ್ಯ ಮಾಧ್ಯಮಗಳ ಮುಖಾಂತರ ತೊಡಗಿಸುವುದರಿಂದ ಯೋಜನೆಯ ಮುಖಾಮುಖಿ ದರ್ಶನವಾಗುತ್ತದೆ. ಈ ವಿಧಾನಗಳು ಸಾಮೂಹಿಕ ವಿಶ್ಲೇಷಣೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಪೋಷಿಸುತ್ತವೆ. ಈ ವಿಧಾನಗಳ ಮುಖಾಂತರ ಸಮಸ್ಯೆಗಳ ಗುರುತಿಸುವಿಕೆ, ಯೋಜನೆ ಮತ್ತು ಅದರ ಮೇಲೆ ನಿಗಾವಿಡಲು ಸಹಕರಿಸುತ್ತವೆ. ಇವು ಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಿಂತ ಮಿಗಿಲಾಗಿ ಸಮುದಾಯದ ಸಹಭಾಗಿತ್ವವನ್ನು ಅವುಗಳ ಮಧ್ಯಸ್ತಿಕೆಯಿಂದ ಪೋಷಿಸುತ್ತಾ ಅವರ ಜೀವನವನ್ನು ರೂಪಿಸುತ್ತದೆ.
- ಸಂಪನ್ಮೂಲಗಳನ್ನು ಕ್ರೋಢೀಕರಿಸುವ ವ್ಯವಸ್ಥೆಯನ್ನು ಮುಂದಿಟ್ಟುಕೊಂಡು ಭವಿಷ್ಯದಲ್ಲಿ ಬರಬಹುದಾದ ಬಂಡವಾಳ ಮೂಲಗಳಿಂದ ಯೋಜನೆಯ ಅನುಷ್ಠಾನಕ್ಕೆ ಮುಂದಾಗಬೇಕಾಗುತ್ತದೆ.
- ಈ ಹಂತದಲ್ಲಿ ಸದಸ್ಯರು ಒಂದು ನಿರ್ದಿಷ್ಟ ನಿಯಾಮವಳಿಯನ್ನು ರೂಪಿಸುವುದು ಸೂಕ್ತ. ಅದರ ಆಧಾರದ ಮೇಲೆ ಕೈಗೊಳ್ಳಲಿರುವ ಶ್ರೇಣೀಕೃತ ಅಭ್ಯಾಸವನ್ನು ಅನುಷ್ಠಾನಕ್ಕೆ ತರಬಹುದು. ಉದಾಹರಣೆಗೆ ಸಮುದಾಯದ ಅತ್ಯಧಿಕ ಸದಸ್ಯರನ್ನು ಕಾಡುತ್ತಿರುವ ವಿಷಯ; ಸಮುದಾಯದಲ್ಲಿ ಸಂಕಷ್ಟಕ್ಕೆ ಒಳಗಾಗಿರುವ ಸದಸ್ಯರು ಎದುರಿಸುತ್ತಿರುವ ಕೊರತೆ; ಸಮುದಾಯದ ಶಕ್ತಿ ಮೂಲ ಮತ್ತು ಲಭ್ಯವಿರುವ ಸಂಪನ್ಮೂಲಗಳಿಂದ ನಿಭಾಯಿಸಬಹುದಾದ ವಿಷಯ; ಬಹುತೇಕ ಸದಸ್ಯರನ್ನು ಒಗ್ಗೂಡಿಸುವ ವಿಧಾನ ಅಥವಾ ಬಾಹ್ಯ ಅವಲಂಬನೆಯ ಜಂಜಾಟವಿಲ್ಲದೆ ಬಗೆಹರಿಸಬಹುದಾದ ವಿಚಾರ. ಇಲ್ಲಿ ಸಮಸ್ಯೆಗಳನ್ನು ಶ್ರೇಣೀಕರಿಸುವ ವಿಧಾನವನ್ನು ಬಳಸಿರಿ.
- ಈ ಎಲ್ಲ ಸಮಸ್ಯೆಗಳನ್ನು ಎದುರಿಸಲು ಒಂದು ಚರ್ಚಾ ಸಭೆಯನ್ನು ಏರ್ಪಡಿಸಿರಿ. ಈ ಸಭೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಗಮನಕ್ಕೆ ತಂದುಕೊಳ್ಳಿರಿ ಮತ್ತು ಪರಿಸ್ಥಿತಿಯನ್ನು ಮಾರ್ಪಡಿಸುವ ಹೆಜ್ಜೆಗಳನ್ನಿಡಲು ಯೋಜನೆ. ಇಲ್ಲಿ ಸಮಸ್ಯೆಯ ಪರಿವರ್ತನಾ ವಿಶ್ಲೇಷಣೆಯಿಂದ ವಾಸ್ತವ ವಿಶ್ಲೇಷಣೆಗೆ ಬನ್ನಿರಿ. ಸಭಿಕರಲ್ಲಿ ಸಕಾರಾತ್ಮಕ ಚಿಂತನೆಯನ್ನು ಪ್ರಚೋದಿಸಿರಿ.
- ಅನುಷ್ಠಾನವನ್ನು ಪರಿಗಣಿಸಿ ಕ್ರಿಯಾ ಮಾತೃಕೆಯನ್ನು ಸಿದ್ಧಗೊಳಿಸಿರಿ. ಅದು ನಿರ್ಧಿಷ್ಠ, ಮಾಪನಾರ್ಹ, ಗುರಿಸಾಧ್ಯ, ಸಮಂಜಸ ಮತ್ತು ಸಮಯೋಚಿತ (SMART) ವಾಗಿರಬೇಕು. ಈ ಸೂತ್ರವನ್ನು ಅನುಸರಿಸುತ್ತಾ ಪ್ರತಿಯೊಂದು ಚಟುವಟಿಕೆಗೆ ಜವಾಬ್ದಾರಿಯುತ ವ್ಯಕ್ತಿಯನ್ನು ನಿಗಾವಹಿಸಲು ನೇಮಕ ಮಾಡಿರಿ, ಜೊತೆಗೆ ತಾಂತ್ರಿಕತೆ ಮತ್ತು ಪುನರ್ಮನನ ಮಾಡಲು ಸಮಯವನ್ನು ನಿಗದಿಪಡಿಸಿರಿ.
- ಚಟುವಟಿಕೆಗಳ ಜವಾಬ್ದಾರಿಯನ್ನು ಹೊರುವ ಸದಸ್ಯರ ಕೌಶಲ್ಯ ಮತ್ತು ಸಾಮರ್ಥ್ಯ ಅದನ್ನು ನಿರ್ವಹಿಸಲು ಸರಿಸಾಟಿಯಾಗಿರಬೇಕು. ಆದುದರಿಂದ ಅವರಿಗೆ ವಿಶೇಷ ಮಾರ್ಗದರ್ಶನ ನೀಡಿ.
- ವಿವಿಧ ಗುಂಪು ಚಟುವಟಿಕೆಗಳನ್ನು ನಡೆಸಿಕೊಡುವ ಸದಸ್ಯರಿಗೆ ಅಗತ್ಯವಾದ ನೈತಿಕ ಮತ್ತು ತಾಂತ್ರಿಕ ಬೆಂಬಲವನ್ನು, ಸರಿದೂಗುವ ಮಾರ್ಗದರ್ಶನ ನೀಡಿರಿ.
- ಗುಂಪುಗಳು ಸೋಲನ್ನು ಜೀವನದ ಒಂದು ಭಾಗವನ್ನಾಗಿ ಅಂಗೀಕರಿಸುವಂತೆ ಅವರನ್ನು ಉತ್ತೇಜಿಸಿರಿ. ಅವರು ಯಶಸ್ಸನ್ನು ಸವಿಯದಿದ್ದರೂ ನಿರಾಶರಾಗದಂತೆ ಪ್ರೋತ್ಸಾಹಿಸಿರಿ. ತರಬೇತಿ, ಯೋಜನೆ ಮತ್ತು ಗುಂಪಾಗಿ ಹೊಸ ವಿಚಾರಗಳನ್ನು ಕಲಿಯುವುದು ವಿಶೇಷತೆ. ಆದುದರಿಂದ ಈ ಛಲ ಅನಗತ್ಯ ಆತಂಕಕ್ಕೂ ಯಶಸ್ಸು ಮತ್ತು ಫಲತಾಂಶದಿಂದ ವಿಚಲಿತರಾಗದಂತೆ ನೋಡಿಕೊಳ್ಳಬೇಕು.




## ಉಪಯುಕ್ತ ಸೂಚನೆಗಳು

- ಪ್ರತಿಯೊಂದು ಸಮುದಾಯವು ತನ್ನದೇ ಕೊರತೆ ಮತ್ತು ಆಸ್ತಿ, ಸಂಸ್ಕೃತಿ ಮತ್ತು ವಿನ್ಯಾಸ, ಚರಿತ್ರೆ, ಸಾಮರ್ಥ್ಯ ಮತ್ತು ತಿಕ್ಕಾಟಗಳನ್ನು ಹೊಂದಿದ್ದು ಅವು ಸದಸ್ಯರಲ್ಲಿರುವ ವಿಶಿಷ್ಟ ಸಂಬಂಧಗಳನ್ನು ನಿರೂಪಿಸುತ್ತವೆ. ಸಾಮಾಜಿಕ ಸಂಬಂಧ ಮತ್ತು ಸಾಮಾಜಿಕ ವಿನ್ಯಾಸಗಳು ಹೇಗೆ ಕ್ರಿಯಾತ್ಮಕವಾಗಿವೆ ಎಂಬುದನ್ನು ಗುರುತಿಸಿ ಅದಕ್ಕೆ ಅನುಗುಣವಾಗಿ ಸಂವೇದಿಸಿರಿ.
- ಸಾಧ್ಯವಾದರೆ ಸಮಾಜದ ಪೂರ್ಣಚಿತ್ರಣದ ಬಗ್ಗೆ ಮಾಹಿತಿಯುಳ್ಳವರು, ಅಂದರೆ ಸರಕಾರದ ಅಧಿಕಾರಿಗಳು, ಅನುಭವವುಳ್ಳವರು, ಸ್ಥಳೀಯ ಮುಖಂಡರನ್ನು ಕರೆಸಿಕೊಳ್ಳಿ. ಅವರು ವಾಸ್ತವತೆ ಮತ್ತು ಮುಂದಿರುವ ಅವಕಾಶಗಳ ಬಗ್ಗೆ ಸದಸ್ಯರ ಮನಸ್ಸನ್ನು ಬೆಳಗಿಸಬಲ್ಲರು. ಆದರೆ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಾದರೆ ಅದು ಸದಸ್ಯರ ಕೈಯಲ್ಲೇ ಇರುತ್ತದೆ.
- ಅಧಿಕ ಸಂಖ್ಯೆಯ ಸದಸ್ಯರು ತಮ್ಮ ಸಮುದಾಯದ ಬಗ್ಗೆ ದೊಡ್ಡ ಚಿತ್ರಣವನ್ನು ಹೊಂದಿದ್ದು ಅದರಲ್ಲಿರುವ ಸಾಧಕ ಬಾಧಕಗಳನ್ನು ಸಮಸ್ಯೆಗಳನ್ನು ತಮ್ಮದನ್ನಾಗಿಸಿಕೊಳ್ಳಲಿ. ಈ ಅರಿವು ಮುಂದಿನ ಅನಾವಶ್ಯಕ ಜಂಜಾಟವನ್ನು ನೀಗಿಸುತ್ತದೆ.
- ಶ್ರೇಣೀಕರಣ ಕೇವಲ ಸಮಸ್ಯೆಗಳನ್ನು ಗುರುತಿಸಲು ಮಾತ್ರ ಬಳಸಬೇಕೆಂದಿಲ್ಲ. ಅದನ್ನು ಸಮುದಾಯದ ಸದಸ್ಯರ ಬಲಾಬಲ, ಕೌಶಲ್ಯ, ಹಿತಾಸಕ್ತಿ, ಸಮಯ ಪಾಲನೆಯಂಥಹ ಸಮಸ್ಯೆಗಳೊಂದಿಗೆ ವ್ಯವಹರಿಸಲು, ನಿರ್ವಹಿಸಲು ಅಗತ್ಯ.
- ಮಾತುಕತೆಯ ಸಂದರ್ಭದಲ್ಲಿ ಪ್ರತಿಯೊಬ್ಬ ಸದಸ್ಯನ ಸ್ವರವೂ ಕಾಳಜಿಯೂ ಕೇಳುವಂತೆ ಸಭೆಯನ್ನು ಆಯೋಜಿಸಿರಿ.

- ಸಮುದಾಯದ ಕೆಲವು ಸದಸ್ಯರಿಗೆ ಆಂತರಿಕ ಮತ್ತು ಬಾಹ್ಯ ಸಂಪನ್ಮೂಲಗಳು ಲಭ್ಯವಿರುವುದು. ಅಂಥವರೆಲ್ಲರೂ ಸದಸ್ಯರ ಮುಂದಿರುವಂತೆ ಮಾಡಿರಿ.
- ಉದಯೋನ್ಮುಖ ಮುಖಂಡರನ್ನು ಗುರುತಿಸಿ ಅವರಿಗೆ ಅವಕಾಶಗಳನ್ನು ಕಲ್ಪಿಸಿಕೊಡಿ. ಹೀಗೆ ಪ್ರತಿಯೊಬ್ಬರೂ ತಮ್ಮಲ್ಲಿ ಉತ್ತಮವಾದದನ್ನು ನೀಡುವತಾಗಲಿ.
- ಪ್ರತಿಯೊಬ್ಬರೂ ತಮ್ಮ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಕ್ರಿಯಾಯೊ ೞಜನೆಯನ್ನು ರೂಪಿಸಲು ಗುಂಪುಗಳನ್ನು ಪ್ರೋತ್ಸಾಹಿಸಿರಿ.
- ಈ ಯೋಜನಾ ಪ್ರಕ್ರಿಯೆ ಸಮುದಾಯದ ಸದಸ್ಯರಿಗೆ ಸಮುದಾಯದ ನಿರೀಕ್ಷೆ ಮತ್ತು ಹಿಂಜರಿತದ ಬಗ್ಗೆ ಅಭಿಪ್ರಾಯಗಳನ್ನು ನೀಡುವ ಅವಕಾಶ ಲಭ್ಯವಾಗುತ್ತದೆ. ಇಂಥಹ ಸಿದ್ಧತೆಯ ಯೋಜನೆಯನ್ನು ಸುಗಮವಾಗಿ ಕಾರ್ಯಗತ ಮಾಡಲು ಸಾಧ್ಯವಾಗುತ್ತದೆ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಉಪಯುಕ್ತ ಎಚ್ಚರಿಕೆಗಳು

- ಪರಿಹಾರಕ್ಕಾಗಿ ಒಂದೇ ಸಾರಿ ಅನೇಕ ಸಮಸ್ಯೆಗಳನ್ನು ಎತ್ತಿಕೊಳ್ಳಬೇಡಿ.
- ಸದಸ್ಯರ ನಡೆಗೆ ತಕ್ಕಂತೆ ಅವರನ್ನು ನಡೆಸಿರಿ. ಅತೀ ವೇಗ ಬೇಡ. ಕೆಲವು ಗುಂಪುಗಳು ಇತರರಿಗಿಂತ ಅಧಿಕ ಸಮಯವನ್ನು ತೆಗೆದುಕೊಳ್ಳಬಹುದು.
- ನಿಮ್ಮ ದೃಷ್ಟಿಕೋನದಲ್ಲಿ ಅತೀ ಮುಖ್ಯ ಸಮಸ್ಯೆ ಅಥವಾ ಪರಿಪೋಷಕ ಸಂಸ್ಥೆಯ ಆದ್ಯತೆ ಸಮುದಾಯಕ್ಕೆ ಅಗತ್ಯವೆಂದು ತೋರದಿರಬಹುದು. ಸಮುದಾಯದ ತೀರ್ಮಾನವನ್ನು ಗೌರವಿಸಿ.
- ಪರಿಪೋಷಕರು ಸದಸ್ಯರಿಗೆ ಪ್ರೋತ್ಸಾಹ, ಮಾರ್ಗದರ್ಶನ, ತಾಂತ್ರಿಕ ಬೆಂಬಲ, ವಾಸ್ತವತೆಯನ್ನು ತಿಳಿಸಬೇಕೇ ವಿನಃ ಯೋಜನೆಯನ್ನು ನಡೆಸುವವರು ಅವರಾದ್ದರಿಂದ ಬಾಹ್ಯ ವಿಚಾರಗಳನ್ನು ಅವರ ಮೇಲೆ ಹೇರಬಾರದು.
- ಅತೀ ಪ್ರಬುದ್ಧ, ಅರ್ಥವಾಗದ ಭಾಷೆಯನ್ನು ಬಳಸಬೇಡಿ. ಅದು ಸಮುದಾಯದ ಸದಸ್ಯರನ್ನು ಗೊಂದಲಕ್ಕೆ ಒಳಪಡಿಸಬಹುದು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಸೂಚಿಗಳು

- XXX ಶೇಕಡ ಗುಂಪುಗಳು ಈ ಸಮುದಾಯದ ಸಮಗ್ರ ಚಿತ್ರಣ ಮತ್ತು ಪ್ರಸ್ತಾವನೆಗೆ ಸಹಮತವನ್ನು ಸೂಚಿಸಿರುತ್ತಾರೆ.
- XXX ಶೇಕಡ ಗುಂಪುಗಳು ತಮ್ಮ ಸಮಸ್ಯೆಯನ್ನು ಗುರುತಿಸಿರುತ್ತಾರೆ ಮತ್ತು XXX ಶೇಕಡ ಗುಂಪುಗಳು ಸಮಸ್ಯೆಗಳ ಶ್ರೇಣೀಕರಣ ಮಾಡಿರುತ್ತಾರೆ.
- XXX ಶೇಕಡ ಸದಸ್ಯರು ಸಮುದಾಯದಿಂದ ಸಂಪನ್ಮೂಲ ಸಂಗ್ರಹದ ವಿಷಯ ಈ ಸಮಸ್ಯೆಯನ್ನು ಎದುರಿಸಲು ಹೊಸ ಒಳನೋಟವನ್ನು ಕೊಟ್ಟಿದೆ ಎಂದು ತಿಳಿಸಿದರು.
- ಸಮಸ್ಯೆಗಳ ಶ್ರೇಣೀಕರಣ ಮತ್ತು ಸಂಪನ್ಮೂಲ ಕ್ರೋಡೀಕರಣ XXX ಶೇಕಡ ಗುಂಪುಗಳ ಶಕ್ತಿ ಅಭಿವೃದ್ಧಿ ಮತ್ತು ಸಾಮೂಹಿಕ ಸಮರ್ಪಣೆಗೆ ಕಾರಣವಾಗಿದೆ.

- XXX ಶೇಕಡ ಗುಂಪುಗಳಲ್ಲಿ ಪೂರ್ಣ ಸಹಭಾಗಿತ್ವ ವ್ಯಕ್ತವಾಗಿದೆ.
- XXX ಶೇಕಡ ಗುಂಪುಗಳಲ್ಲಿ ಸಮಸ್ಯೆಗಳ ಶ್ರೇಣೀಕರಣದ ಬಗ್ಗೆ ಆಂತರಿಕ ಗೊಂದಲಗಳು ಇದ್ದವು. ಅದರಲ್ಲಿ ಶೇಕಡ XXX ಗುಂಪುಗಳು ಅದನ್ನು ಸಹಾನುಮತದಿಂದ ಪರಿಹರಿಸಿರುವರು.
- XXX ಶೇಕಡ ಗುಂಪುಗಳು ತಮ್ಮ ಚಟುವಟಿಕೆಗಳ ಪಡಿಯಚ್ಚನ್ನು ಸಿದ್ಧಮಾಡಿರುವರು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಸಾಮಾಜಿಕ ಸಮಸ್ಯೆಗಳು ಮತ್ತು ಶ್ರೇಣೀಕರಣ ವ್ಯವಸ್ಥೆ

| ಕ್ರಮ ಸಂಖ್ಯೆ | ಸಮಸ್ಯೆಗಳ ಗುರುತಿಸುವಿಕೆ | | ಸಮಸ್ಯೆಗಳ ಶ್ರೇಣೀಕರಣ | |
|---|---|---|---|---|
| | ವ್ಯಕ್ತಿಗಳ ಸಮಸ್ಯೆಗಳು | ಶ್ರೇಣೀಕರಿಸಿದ ಮೂರು ಸಮಸ್ಯೆಗಳು | ಸಮುದಾಯದ ಸಮಸ್ಯೆಗಳು | ಶ್ರೇಣೀಕರಿಸಿದ ಮೂರು ಸಮಸ್ಯೆಗಳು |
| ಮಹಿಳೆಯರು | | | | |
| ಯುವ ಬಾಲಕಿಯರು | | | | |
| ಯುವ ಬಾಲಕರು | | | | |
| ಮಕ್ಕಳು | | | | |
| ಪುರುಷರು | | | | |
| CBOಗಳು | | | | |

## ಚಟುವಟಿಕೆ ಯೋಜನಾ ವ್ಯವಸ್ಥೆ

| ಚಟುವಟಿಕೆ ಯೋಜನಾ ವ್ಯವಸ್ಥೆ | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ಚಟುವಟಿಕೆಯ ವಿವರಗಳು SMART | ಸಂಪನ್ಮೂಲಗಳು ಅಗತ್ಯವಾದವು ಮತ್ತು ಲಭ್ಯವಾದವು | ಜವಾಬ್ಧಾರಿಯತ ವ್ಯಕ್ತಿಗಳು | ಯಾರಿಂದ? ಎಷ್ಟು ಬಾರಿ? | ನಿಗಾವಹಿಸುವ ವರು | ಪುನರ್‌ವಿಮರ್ಶೆ |
| | | | | | | |
| | | | | | | |
| | | | | | | |
| | | | | | | |
| | | | | | | |

## ಚಟುವಟಿಕೆಗಳ ತಪ್ಸೀಲು

| ಚಟುವಟಿಕೆಗಳ ತಪ್ಸೀಲು | | | | | | | |
|---|---|---|---|---|---|---|---|
| ಕ್ರಮ ಸಂಖ್ಯೆ | ಚಟುವಟಿಕೆಯ ವಿವರಗಳು SMART | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ |
| ೧ | XXX | XXX | | | | | |
| ೨ | XXX | XXX | XXX | | | | |
| ೩ | XXX | | XXX | | | | |
| ೪ | XXX | | XXX | XXX | XXX | | |
| ೫ | XXX | | | | | XXX | XXX |

# ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

೧. ಸಮಸ್ಯೆಗಳನ್ನು ಗುರುತಿಸುವಲ್ಲಿ ಸಮುದಾಯದ ಸದಸ್ಯರ ಅನುಭವಗಳೇನು? ನಿರಾಳವಾಗಿತ್ತಾ ಅಥವಾ ಸವಾಲಾಗಿತ್ತಾ? ಉದಾಹರಣೆಗಳೊಂದಿಗೆ ವಿವರಿಸಿ.

೨. ಹಿತಾಸಕ್ತಿಗಳ ಬಗ್ಗೆ ಗೊಂದಲವಿತ್ತೇ? ಕೆಲವರ ಮೇಲುಗೈ ಮತ್ತು ಕೆಲವರ ನಿರಾಕಾರ? ಹೌದಾದರೆ, ಅದನ್ನು ಹೇಗೆ ನಿಭಾಯಿಸಿದಿರಿ?

೩. ಸಮಸ್ಯೆಗಳ ಶ್ರೇಣೀಕರಣ ಸಂದರ್ಭದಲ್ಲಿ ಯಾವ ಮಾನದಂಡವನ್ನು ಸದಸ್ಯರು ರೂಪಿಸಿದರು?

೪. ಗುಂಪಿನ ಸದಸ್ಯರು ನಿಗದಿತ ಅಧಿಕ ಸಮಯ ತೆಗೆದುಕೊಂಡಾಗ ನಿಮಗೆ ಹೇಗೆ ಅನಿಸಿತು ಮತ್ತು ಈ ಸನ್ನಿವೇಶವನ್ನು ಹೇಗೆ ನಿಭಾಯಿಸಿದಿರಿ?

೫. ಸಮುದಾಯ ಎದರಿಸಬೇಕಾದ ಸಮಸ್ಯೆಯನ್ನು ಗುರುತಿಸಿ ಶ್ರೇಣೀಕರಿಸಿದಾಗ ಅವರ ಮನೋಭಾವ ಹೇಗಿತ್ತು?

೬. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

# ಸಣ್ಣ ಯೋಜನೆ ಆಟವನ್ನೇ ಮಾರ್ಪಡಿಸಿತು

“ಸಮುದಾಯದ ಸ್ವಾಮ್ಯದಲ್ಲಿದ್ದ ಒಂದು ಸಣ್ಣ ಯೋಜನೆ ಉಜ್ಜಯಿನಿಯಲ್ಲಿ ತನ್ನ ಆಟವನ್ನೇ ಬದಲಾಯಿಸಿತು. ಉಜ್ಜಯಿನಿಯ ಒಂದು ಗ್ರಾಮ ತನ್ನದೇ ಆದ ಯೋಜನೆಯನ್ನು ಆಯೋಜಿಸಿತ್ತು. ಯೋಜನೆಯ ಪಟ್ಟಿಯನ್ನು ಸಿದ್ಧಗೊಳಿಸಿದ ಮೇಲೆ ಸಮುದಾಯದ ಸದಸ್ಯರು ಪ್ರಮುಖ ವಿಷಯಗಳನ್ನು ಗುರುತಿಸಿದರು. ಪ್ರತಿ ಬಾರಿ ಅವರು ದಲಿತರ ವಸತಿಗಳದ್ದೆಡೆ ರಸ್ತೆಗಳು, ಸಮಾದಿ ಸ್ಥಳ ಅಥವಾ ಹಳ್ಳಿಗೆ ನೀರಿನ ಸೌಕರ್ಯಕ್ಕೆ ಪ್ರಾಶಸ್ತ್ಯಕೊಡುತ್ತಿದ್ದರು. ಇಡೀ ಗ್ರಾಮವೇ ಈ ಯೋಜನೆಗಳ ಸ್ವಾಮ್ಯವನ್ನು ವಹಿಸಿಕೊಂಡಾಗ ರಜಪೂತ ಮಹಿಳೆಯರು ದಲಿತ ಮಹಿಳೆಯರೊಂದಿಗೆ ಸೇರಿಕೊಂಡು ದಲಿತರಿರುವ ಸ್ಥಳಕ್ಕೆ ರಸ್ತೆ ನಿರ್ಮಾಣಕ್ಕೆ ಸಾತು ಕೊಟ್ಟರು. ಮೇಲ್ಜಾತಿಯವರು ದಲಿತರಿಗೆ ಬೆಂಬಲ ನೀಡುವುದು ಕೆಲವು ವರ್ಷಗಳ ಹಿಂದೆ ಊಹಿಸಲೂ ಆಗುತ್ತಿರಲಿಲ್ಲ. ಆದರೆ ಈಗ ಅದು ಸಾಧ್ಯವಾಯಿತು.” ಈ ಕಥೆಯನ್ನು ಕೃಪಾ ಸಂಸ್ಥೆಯ ಸಿಬ್ಬಂದಿ ಶ್ರೀ ಸಂತೋಷ್ ಹೆಮ್ಮೆಯಿಂದ ನಿರೂಪಿಸಿದರು. ಗ್ರಾಮಗಳಲ್ಲಿ ಮಹಿಳೆಯರು ತಾವು ತಯಾರಿಸಿದ ೧೬ ಯೋಜನೆಯಲ್ಲಿ ೬ನ್ನು ಕಾರ್ಯರೂಪಕ್ಕೆ ತಂದರು. ಇದೇ ಮನೋಭಾವವನ್ನು ಪಟ್ಟಣದವರೂ ತೋರ್ಪಡಿಸಿದರು. ಸಮುದಾಯದ ಸದಸ್ಯರು ಧರ್ಮವನ್ನು ಬದಿಗಿಟ್ಟು ಇತರೆ ಸಮುದಾಯದ ಜನರನ್ನು ಬೆಂಬಲಿಸಿದರು. ಸಮುದಾಯದ ಸಾಮೂಹಿಕ ಯೋಜನೆಗಳ ಶ್ರೇಣೀಕರಣ ಸದಸ್ಯರು ಕೆಲಸ ಮಾಡುತ್ತಿದ್ದಂತೆ ತನ್ನ ಮಾರ್ಗವನ್ನು ಬದಲಾಯಿಸಿತು.

CHAPTER 7

# ಕರ್ತವ್ಯ ನಿರ್ವಾಹಕರೊಂದಿಗೆ ಮಧ್ಯಂತರ, ಜೀವನೋಪಾಯ ಅವಕಾಶ ವಿಸ್ತರಣೆ



# ಕರ್ತವ್ಯ ನಿರ್ವಾಹಕರೊಂದಿಗೆ ಮಧ್ಯಂತರ ಜೀವನೋಪಾಯ ಅವಕಾಶ ವಿಸ್ತರಣೆ

## ಉದ್ದೇಶ

ಈ ಹಂತದ ಉದ್ದೇಶವೇನೆಂದರೆ, ನಾವು "ಅಭಿವೃದ್ಧಿ ಮಾದರಿ''ಯಿಂದ "ಹಕ್ಕು ಆಧಾರಿತ ಸಾಮಾಜಿಕ ಕ್ರಿಯೆ''ಗೆ ಪ್ರಜ್ಞಾಪೂರ್ವಕವಾಗಿ ವಿಧಾನ ಮಾರ್ಪಾಟು ಮಾಡಬೇಕಾಗುತ್ತದೆ. ಮಾನವ ಹಕ್ಕು ಆಧಾರಿತ ವಿಧಾನ ಜನರನ್ನು ಬಲಪಡಿಸುತ್ತಾ ಅವರು ತಮ್ಮ ಹಕ್ಕುಗಳಾಗಿ ಆಗ್ರಹಿಸುವ ಜ್ಞಾನವನ್ನು ನೀಡುತ್ತದೆ. ಗುಂಪುಗಳು ಮತ್ತು CBOಗಳು ಸಂಸ್ಥೆಯ ಪರಿಪೋಷಣೆಯಿಂದ "ಮೌನ ಮತ್ತು ಅವಲಂಬನಾ ಸಂಸ್ಕೃತಿ"ಯನ್ನು ಕಿತ್ತೊಗೆಯುವ ಸಾಮರ್ಥ್ಯವನ್ನು ಹೊಂದಿರುತ್ತವೆ. ತಾವು ಪೌರರು, ತಮ್ಮ ಹಕ್ಕು ಮತ್ತು ಅರ್ಹತೆಯನ್ನು ಪ್ರತಿಪಾದಿಸಲು ಆಸ್ತಿಪಾಸ್ತಿಯ ಮೇಲೆ ಅಧಿಕಾರವನ್ನು ಸ್ಥಾಪಿಸಲು, ತಾವು ನ್ಯಾಯಿಕ ಮತ್ತು ನೈತಿಕ ಕರ್ತವ್ಯ ನಿರ್ವಾಹಕರು ಉತ್ತರದಾಯಿಕರು ಎಂಬುದನ್ನು ಸಮರ್ಥಿಸಲು ಅಣಿಯಾಗಿದ್ದಾರೆ. ಹಕ್ಕು ಆಧರಿತಾ ಕ್ರಿಯೆಗಳು ಐದು ಸೂತ್ರಗಳಲ್ಲಿ ಬರೆಯಲಾಗಿದೆ. ಸಹಭಾಗಿತ್ವ (Participation), ಉತ್ತರದಾಯಿತ್ವ (Accountability), ತಾರತಮ್ಯ ಮುಕ್ತ (Non-Discrimination), ಸಮಾನತೆ (Equality) ಹಾಗು ಸಬಲತೆ ಮತ್ತು ಕಾನೂನು ಬದ್ಧತೆ (Empowerment and egality). Panel ಸೂತ್ರಗಳೆಂದು ಕರೆಯಲಾದ ಇವು ಮಾನವ ಹಕ್ಕು ಆಧಾರಿತವಾಗಿದೆ ಎಂದು ವಾಸ್ತವವಾಗಿ ಹೇಳಬಹುದು. ಹಕ್ಕುಗಳನ್ನು ಸರ್ಕಾರ ಕೊಡುವುದಿಲ್ಲ. ಅವು ಅನುವಂಶೀಯವಾಗಿದ್ದು ಅವನ್ನು ಪ್ರತಿ ಪೌರರಿಗೆ ದೇಶವು ಖಚಿತಪಡಿಸಬೇಕು. ಆದರೂ ನಮ್ಮ ಅನುಭವ ಹೇಳುವುದೇನೆಂದರೆ, "ಹಕ್ಕುಗಳು ಕೊಡಲಾಗುವುದಿಲ್ಲ, ಅವನ್ನು ನಾವು ಪಡೆದುಕೊಳ್ಳಬೇಕು. ಸಮುದಾಯದ ಸದಸ್ಯ ಇದನ್ನು ಗ್ರಹಿಸಿಕೊಳ್ಳುವಂತೆ ಹಕ್ಕು ಆಧಾರಿತ ಮಾದರಿ ಪೋಷಣೆಯನ್ನು ನೀಡುತ್ತದೆ. ಆದರೆ ದೇಶದ ಅಧಿಕಾರಿಗಳ ಉದ್ದಟತನದಿಂದ ಈ ಹಕ್ಕುಗಳು


ಪಲ್ಲಟವಾಗುವುದು; ಚುನಾಯಿತ ಪ್ರತಿನಿಧಿಗಳೂ, ಸಾರ್ವಜನಿಕ ಸಂಸ್ಥೆಗಳೂ ಆರಕ್ಷಕ ದಳವೂ ಇದರಲ್ಲಿ ಶ್ರಮಿಸಲಾಗಬಹುದು. ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಸಮುದಾಯದ ಸದಸ್ಯರು ತಮ್ಮ ಅಗತ್ಯ ಮಾನವ ಸಂಪನ್ಮೂಲ, ಸೂಕ್ತ ಕುಶಲತೆ, ಶಕ್ತಿ, ಕಾನೂನು ಅರಿವು, ಕಾರ್ಯವಿಧಾನದಿಂದ ಸಶಕ್ತರಾಗಿ ಸಂವಾದವನ್ನು ನಡೆಸುತ್ತಾ ಅಹಿಂಸಾ ವಿಧಾನಗಳಿಂದ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಬಹುದಾಗಿದೆ.

ಇದೇ ಸಂದರ್ಭದಲ್ಲಿ ಎಲ್ಲಾ ಅವಕಾಶಗಳನ್ನು ಕಂಡುಕೊಳ್ಳಬಹುದೋ ಅಲ್ಲಿ ಜೀವನೋಪಾಯ ಮಾರ್ಗಗಳನ್ನು ಉದ್ಯೋಗ ಕೌಶಲ್ಯ, ತರಬೇತಿಯಿಂದ ಸಬಲೀಕರಣ, ಬ್ಯಾಂಕ್ ಸಾಲ ಸೌಲಭ್ಯ ಇತ್ಯಾದಿಗಳಿಂದ ಭದ್ರಪಡಿಸಿಕೊಳ್ಳಬಹುದು. ಈ ಹಂತದ ಮಧ್ಯಂತರದಲ್ಲಿ ಕರ್ತವ್ಯ ನಿರ್ವಾಹಕರೊಂದಿಗೆ ಮಾತುಕತೆಯನ್ನು ನಡೆಸಿ ಹಕ್ಕು ಮತ್ತು ಪೌರತ್ವದ ಪೂರ್ಣಪ್ರಯೋಜನ ಪಡೆದುಕೊಂಡು ಜೀವನ ವಿಧಾನವನ್ನು ಉತ್ತಮ ಪಡಿಸಿಕೊಳ್ಳಬಹುದು.

## ಕಾಲಾವಧಿ

ಈ ಹಂತದಲ್ಲಿ ಸ್ಥಾಪಿಸಲಾದ ಗುಂಪುಗಳು ತಮ್ಮ ಅಗತ್ಯಗಳನ್ನು ವ್ಯಕ್ತಪಡಿಸುವುದಲ್ಲದೆ ಅವನ್ನು ಸಮರ್ಥಿಸಿಕೊಳ್ಳಲು ಪ್ರಾರಂಭಿಸುತ್ತಾರೆ. ತಮ್ಮ ಹಕ್ಕು ಮತ್ತು ಅರ್ಹತೆಯನ್ನು ಕರ್ತವ್ಯ ನಿರ್ವಾಹಕರೊಂದಿಗೆ ಚರ್ಚಿಸಿ ಗಿಟ್ಟಿಸಿಕೊಳ್ಳಬಹುದು. ಅವರು ತಮ್ಮ ಪೌರತ್ವವನ್ನು ಹೊಸವಿಧಾನದಲ್ಲಿ ಕಂಡುಕೊಳ್ಳಲು ಶಕ್ತರಾಗುತ್ತಾರೆ. ನಮ್ಮ ಪ್ರಸ್ತುತ ಆಡಳಿತ ಮತ್ತು ಅಧಿಕಾರಶಾಹಿ ವ್ಯವಸ್ಥೆಯಲ್ಲಿ ನಮ್ಮ ಹಕ್ಕು ಭಾದ್ಯತೆ ಅಥವಾ ಪ್ರಗತಿಪರ ಯೋಜನೆಗಳನ್ನು ಅಥವಾ ಅವಕಾಶಗಳನ್ನು ಗಳಿಸಲು ನಿರಂತರ ಪ್ರಯತ್ನ ಅಗತ್ಯ. ಈ ಕಾರ್ಯಗಳಿಗೆ ೨ ರಿಂದ ೩ ವರ್ಷಗಳು ಹಿಡಿಯುತ್ತವೆ.

**ಪರಿಣಾಮಕಾರಿ ಮಧ್ಯಂತರಕ್ಕೆ ಅರಿವು ಮತ್ತು ಕೌಶಲ್ಯಗಳು.**




## ಸಾಗುವ ಮಾರ್ಗಗಳು

- ಸದಸ್ಯರು ತಮ್ಮ ಹಕ್ಕು ಮತ್ತು ಒಡೆತನದ ಅರಿವನ್ನು ಪಡೆಯುವಂತೆ ಸೂಕ್ತ ಮಾಹಿತಿಯನ್ನು ಒದಗಿಸುವುದು.
- ವಿವಿಧ ಸಂಪರ್ಕ ಮತ್ತು ಕೆಳಗಿನ ವಿಷಯಗಳ ಬಗ್ಗೆ ಮಾಹಿತಿ: ಸಾಮಾಜಿಕ ಕಾನೂನುಗಳು, ಮಾಹಿತಿ ಹಕ್ಕು, ಶಿಕ್ಷಣ ಹಕ್ಕು, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಆಹಾರದ ಹಕ್ಕು, ಒಡೆತನ, ಸಾರ್ವಜನಿಕ ಹಂಚಿಕೆ ವ್ಯವಸ್ಥೆಯಲ್ಲಿ ಸಾಮಾಗ್ರಿಗಳನ್ನು ಪಡೆಯುವುದು, ಉಚಿತ ಕಾನೂನು ನೆರವು, ಹೆರಿಗೆ ಭತ್ಯೆ, ಪಿಂಚಣಿ, ವಿಕಲ ಚೇತನರ ಬೆಂಬಲ, ದಲಿತ, ಆದಿವಾಸಿ ಮತ್ತು ಅಲ್ಪಸಂಖ್ಯಾತರ ಅನುದಾನ, ಶಿಕ್ಷಣ, ಶಿಷ್ಯವೇತನದ ಬಗ್ಗೆ ತರಬೇತಿ. ಇಷ್ಟು ಮಾತ್ರವಲ್ಲದೆ ದಾಖಲಾತಿಗಳಾದ ಜನನ, ಮರಣ ಮತ್ತು ವರಮಾನ ಪತ್ರಗಳನ್ನು ಪಡೆಯುವ ವಿಧಾನ, ಗುರುತಿನ ಚೀಟಿ, ಆಧಾರ್ ಕಾರ್ಡ್, ಉದ್ಯೋಗ ಕಾರ್ಡ್, ಬಡತನ ರೇಖೆ ಕಾರ್ಡ್ (BPL).



- ಸಮುದಾಯದ ಸದಸ್ಯರಿಗೆ ಭಾರತದ ಸಂವಿದಾನದಲ್ಲಿರುವ ಮೌಲ್ಯಗಳ ಪರಿಚಯ, ವಿವಿಧ ಸಂಹಿತೆ ಕಾಯಿದೆಗಳು, ಸಾಲ ಸೌಲಭ್ಯ, ಕಲ್ಯಾಣ ಯೋಜನೆಗಳ ಬಗ್ಗೆ ತರಬೇತಿ.
- ವಿವಿಧ ಕೆಲಸ ಕಾರ್ಯಗಳಿಗೆ ಸಲ್ಲಿಸಬೇಕಾದ ನಮೂನೆಗಳನ್ನು ಭರ್ತಿಮಾಡುವುದು, ಆನ್‌ಲೈನ್ ಸಂಪರ್ಕ, ವಿವಿಧ ನೋಡಲ್ ಕಛೇರಿಗಳ ಮಾಹಿತಿ, ಆಡಳಿತ ವಿನ್ಯಾಸ–ಪಂಚಾಯತ್ ರಾಜ್ ಮತ್ತು ವಿವಿಧ ಇಲಾಖೆ ಮತ್ತು ಸ್ಥಳೀಯ ಘಟಕ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಆಡಳಿತ ವೈಖರಿಯ ಬಗ್ಗೆ ತರಬೇತಿ.
- ಸಮುದಾಯದ ಸದಸ್ಯರು ತಮ್ಮ ಜೀವನೋಪಾಯ ಮಾರ್ಗಗಳನ್ನು ಕಂಡುಕೊಳ್ಳಲು ಇರುವ ಅವಕಾಶಗಳ ಮಾಹಿತಿ. ಅವರಿಗೆ ಸಂಪರ್ಕ ಏರ್ಪಡಿಸುವುದು ವಿವಿಧ ಸರಕಾರಿ ಯೋಜನೆಗಳು, ಉದ್ಯೋಗ ಕೌಶಲ್ಯಗಳು, ಖಾಸಗಿ ಮತ್ತು ಸಂಯುಕ್ತ ಸಾಮಾಜಿಕ ಹೊಣೆಗಾರಿಕೆ CSR ಉಪಕ್ರಮಗಳನ್ನು ತಿಳಿಯಪಡಿಸುವುದು.
- ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ಹೇಗೆ ಬರೆಯುವುದು ಮತ್ತು ತಲುಪಿಸುವುದು ಹೇಗೆ ಅವರೊಡನೆ ಮುಖಾಮುಖಿ ಮಾತನಾಡುವುದು ಎಂಬ ಮಾಹಿತಿ.
- ಮಾದರಿ ಸಹಾಯ ಕೇಂದ್ರಗಳನ್ನು ಯುವ ಸ್ವಯಂ ಸೇವಕರ ಮುಖಾಂತರ ಸ್ಥಾಪಿಸಿ ಅವರ ಪರಿಣತೆಯನ್ನು ಮಧ್ಯವರ್ತಿಗಳ ವಿನಃ ಅಭ್ಯಾಸ ಮಾಡಲು ಅವಕಾಶ ನೀಡುವುದು.

- ಸಬಲೀಕರಣ ಪ್ರಕ್ರಿಯೆಯನ್ನು ಅನುಸರಿಸುತ್ತಾ ಅಂದರೆ ಬಲವರ್ಧನೆ, ಮನವರಿಕೆ ಮತ್ತು ಉತ್ಥಾನದ ಮುಖಾಂತರ ಸಮುದಾಯದ ಸದಸ್ಯರು "ಮೌನ ಸಂಸ್ಕೃತಿ"ಯನ್ನು ಮತ್ತು ಅವಲಂಬನಾ ಪ್ರವೃತ್ತಿಯನ್ನು ಕೊನೆಗಾಣಿಸುವುದು.
- ಕರ್ತವ್ಯ ನಿರ್ವಾಹಕರ ಜೊತೆಯಲ್ಲಿ ಮಾತುಕತೆಯನ್ನು ನಡೆಸುತ್ತಾ ಒಡೆತನ, ವಿಧಿವಿಧಾನ, ಸಂವಾದ ಮತ್ತು ಮಹತ್ತರ ಪಾತ್ರ ವಹಿಸುವ ವಿಚಾರ ವಿನಿಮಯದ ಬಗ್ಗೆ ತಿಳಿದುಕೊಳ್ಳುವುದು.
- PANEL ಸೂತ್ರಗಳನ್ನು ಜಾರಿಗೆ ತರುವುದು ಹಾಗು ಅವುಗಳ ಪಾಲನೆ ಮತ್ತು ಪೋಷಣೆ ಸಮುದಾಯದಲ್ಲಿ ಆಗುವುದನ್ನು ನಿಖರಪಡಿಸುವುದು.
- ಪ್ರಮುಖ ಪರವಾದದ ಸಾಧನವಾದ ಸಾರ್ವಜನಿಕ ಅಭಿಪ್ರಾಯವನ್ನು ಹುಟ್ಟು ಹಾಕುವುದು, ಬಹಿರಂಗ ಸಭೆಗಳಿಂದ ಬೆಂಬಲ, ಭಿತ್ತಿ ಪತ್ರ ಆಂದೋಲನ, ಸಾಮಾಜಿಕ ಸಂವಹನ, ಮುದ್ರಣ, ಮಾಧ್ಯಮಗಳ ಸಂದರ್ಶನ ಮತ್ತು ಭೇಟಿ, ಪ್ರಮುಖ ವ್ಯಕ್ತಿಗಳೊಂದಿಗೆ ಸಂವಾದ ಮತ್ತು ಸರಕಾರ ಹಮ್ಮಿಕೊಳ್ಳುವ ದೂರಿನ ವಿಚಾರಣೆಯಲ್ಲಿ (ಜನಸಂವಾದ) ಭಾಗವಹಿಸುವುದು.
- ಕೆಲವು ಸಂದರ್ಭಗಳಲ್ಲಿ ಧರಣಿ, ಪ್ರತಿಭಟನೆ, ಸಾರ್ವಜನಿಕ ರ್‍ಯಾಲಿ ಅಥವಾ ಯಾವುದೇ ಅಹಿಂಸಾ ಚಳುವಳಿಯ ಮುಖಾಂತರ ಸಮುದಾಯದ ಬೇಡಿಕೆಗಳ ಮಂಡನೆ, ಇಂತಹ ಸತ್ಯಾಗ್ರಹಗಳ ಬಗ್ಗೆ ಸಮುದಾಯಕ್ಕೆ ಮಾಹಿತಿ.
- ಆರಕ್ಷಕ ಕಛೇರಿ, ಕೋರ್ಟು ಮತ್ತು ಸರಕಾರಿ ಕಛೇರಿಗಳ ಭೇಟಿ ಸದಸ್ಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ.)

## ಉಪಯುಕ್ತ ಸೂಚನೆಗಳು

- ಪ್ರಗತಿಪರ ಮಾದರಿಯಿಂದ ಹಕ್ಕು ಆಧಾರಿತ ಮಾದರಿಗೆ ಸಾಗುವುದು ಸಮಯವನ್ನು ತೆಗೆದುಕೊಳ್ಳುತ್ತದೆ. ಸರಕಾರದ ವಿನ್ಯಾಸ ಮತ್ತು ವಿಧಾನಗಳೊಂದಿಗೆ ನಿಕಟತೆಯನ್ನು ಗಳಿಸಲು ಕೆಲವು ಗುಂಪುಗಳನ್ನು ಕೈಹಿಡಿದು ನಡೆಸಬೇಕಾಗುತ್ತದೆ. ಕೆಲವು ಬಾರಿ ಸದಸ್ಯರು ತಮ್ಮೊಂದಿಗೆ ಸಿಬ್ಬಂದಿ ಇರಬೇಕೆಂದು ವಿನಂತಿಸಬಹುದು. ಇದು ತರಬೇತಿಯ ಒಂದು ಭಾಗವಾಗಿದ್ದು ಕ್ರಮೇಣ ಅವರು "ವಾಹಕನ ಆಸನ"ದಲ್ಲಿ ಕುಳಿತುಕೊಳ್ಳಲು ಅವರಿಗೆ ಮಾರ್ಗದರ್ಶನ ಮಾಡಲೇಬೇಕು.
- ಈ ಮಧ್ಯಂತರದಲ್ಲಿ ಕರ್ತವ್ಯ ನಿರ್ವಾಹಕರ ನೆರವು ಪೋಷಕ ಸಂಸ್ಥೆಯ ವಿಶ್ವಾಸನೀಯತೆಯನ್ನು ಅಧಿಕಗೊಳಿಸುತ್ತದೆ. ಆದರೂ ಸಂಸ್ಥೆ ಪೂರ್ಣ ಪ್ರಜ್ಞೆಯಿಂದ ಜನಬೆಂಬಲಿತ ವಿಚಾರ ವಿನಿಯಮಗಳನ್ನು ಪೋಷಿಸಬೇಕು.
- ಈ ನೈತಿಕ ಬೆಂಬಲ ಮುನ್ನಡೆದಂತೆ ಲಿಖಿತ ಬರವಣಿಗೆಯಿಂದ ತಾಂತ್ರಿಕ ಬೆಂಬಲಕ್ಕೆ ಹೋಗುತ್ತದೆ. ಏನೇ ಆದರೂ ಸಮುದಾಯದ ಸದಸ್ಯರಿಗೆ ಅಥವಾ ಮಕ್ಕಳಿಗೆ ತರಬೇತಿ ನೀಡಬೇಕಾಗುತ್ತದೆ. ಯುವ ಜನರು ಸುಲಭವಾಗಿ ಬರವಣಿಗೆ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಕಲಿತುಕೊಳ್ಳುತ್ತಾರೆ. ಅವರ ಕುಶಲತೆಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು.
- ಸರಕಾರದ ಯೋಜನೆಗಳು, ಸಾಮಾಜಿಕ ಸಂರಕ್ಷಣಾ ವಿಧಾನಗಳು ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಮತ್ತು ವಿವರಗಳ ಬಗ್ಗೆ ಸಂಪನ್ಮೂಲ ಕೈಪಿಡಿಯನ್ನು ತಯಾರಿಸಿ.
- ಓದುವ ಅಭ್ಯಾಸ ಹಾಗೂ ಹಂಚಿಕೆಯನ್ನು ಪ್ರಚಲಿತಗೊಳಿಸಲು ಸಮುದಾಯ ನಿರ್ವಹಿತ ಪುಸ್ತಕ ಭಂಡಾರ ಮತ್ತು ಸಂಪನ್ಮೂಲ ಪರಿಕರಗಳನ್ನು ಸ್ಥಾಪಿಸಿರಿ.

- ಒಮ್ಮೆ ಸದಸ್ಯರು ವೈಯಕ್ತಿಕ ಮತ್ತು ಸಾಮೂಹಿಕ ಸಚೇತನ, ಸಾಧನಾ ಪ್ರವೃತ್ತಿ ಮತ್ತು ಸಮರ್ಪಣಾ ಮನೋಭಾವವನ್ನು ಗಳಿಸಿದ ಮೇಲೆ ಅವರು ತಮ್ಮ ಸಮಸ್ಯೆಗಳನ್ನು ಶ್ರೇಣೀಕರಿಸಿ ಕ್ರಿಯಾ ಯೋಜನೆಯನ್ನು ರೂಪಿಸಿದ ಮೇಲೆ ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಲು ಮುಂದಾಳತ್ವ ವಹಿಸುವವರು ಹಾಗೂ ಸಮುದಾಯದ ಸದಸ್ಯರೊಂದಿಗೆ ಕೆಲಸ ಕಾರ್ಯಗಳನ್ನು ಮುನ್ನಡೆಸಲು ಶಕ್ತರಾಗುವರು.
- ಕಾಲಕಾಲಕ್ಕೆ ಸಮುದಾಯದ ಸದಸ್ಯರ ಪುನರ್‌ವಿಮರ್ಶೆ ಮತ್ತು ಪರ್ಯಾಲೋಚನಾ ಸಭೆಗಳನ್ನು ಅವರು ಅನುಭವದಿಂದ ಪಾಠಗಳನ್ನು ಕಲಿಯಲು ಏರ್ಪಡಿಸಿರಿ.
- "ಇದು ಅವಳ ಅಥವಾ ಅವನ ಹೋರಾಟವಾದರೆ ಅವಳು ಅಥವಾ ಅವನು ಮುಂದಾಳತ್ವ ವಹಿಸಲಿ" (ಜಿಸ್ಕೆ ಲಡಾಯ್ ಉಸ್ಕೆ ಅಗುವಾಯ್) ಎಂಬ ಧ್ಯೇಯ ವಾಕ್ಯ ಮರೆಯದಿರಿ.
- ಅನುಭವ ತಿಳಿಸುವಂತೆ ಭಾವನೆಗಳು ಬಹಿರಂಗ ಕಾರ್ಯಗಳಲ್ಲಿ ವಿಚಾರ ಶೀಲತೆಯನ್ನು ಕಳೆದುಕೊಳ್ಳುತ್ತದೆ. ಆದುದರಿಂದ ಪ್ರತಿಯೊಬ್ಬರ ಜವಾಬ್ದಾರಿಗಳನ್ನು ನಿಖರಗೊಳಿಸಿ, ಗುಂಪನ್ನು ನಿಯಂತ್ರಿಸಿ. ವಿನಿಮಯ ತಂಡ ಬಹಿರಂಗ ಸಭೆಯ ಮುನ್ನ ಬೇಡಿಕೆಯನ್ನು ಮುಂದಿಟ್ಟು ಎಲ್ಲವನ್ನೂ ಪೂರ್ವ ಯೋಜನೆಗೆ ಒಳಪಟ್ಟಿರಬೇಕು.
- ಆರಕ್ಷಕ ದಳದ ಅನುಮತಿ, ಶಿಷ್ಟಾಚಾರ ಮತ್ತು ವಿಧಿನಿಯಮಗಳನ್ನು ಅನುಸರಿಸುವಂತೆ ಸದಸ್ಯರನ್ನು ಪ್ರೋತ್ಸಾಹಿಸಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ.)

## ಉಪಯುಕ್ತ ಎಚ್ಚರಿಕೆಗಳು

- ಸಮುದಾಯದ ಸದಸ್ಯರು ಕರ್ತವ್ಯ ನಿರ್ವಾಹಕರ ಮೇಲೆ ಸವಾಲು ಹಾಕಲು ಅಥವಾ ಎದುರಿಸಲು 'ಒತ್ತಡ' ಹಾಕಬೇಡಿ.
- ಜನರು ಪ್ರತಿಭಟನೆ ಅಥವಾ ಧರಣಿ ಕೂರುವಂತೆ ಪ್ರಚೋದಿಸಬೇಡಿ. ಧರಣಿ ಮಾಡುವ ನಿರ್ಧಾರಗಳನ್ನು ಸಮುದಾಯದ ಸದಸ್ಯರು ಮಾತ್ರ ತೆಗೆದುಕೊಳ್ಳಬಹುದು.
- ಧರಣಿ ಮತ್ತು ಪ್ರತಿಭಟನೆಯಂಥಹ ಬಹಿರಂಗ ಕಾರ್ಯಚರಣೆ, ಅದರ ಪರಿಣಾಮ ಮತ್ತು ಇಂಗಿತದ ಬಗ್ಗೆ ಜನರಿಗೆ ತಿಳುವಳಿಕೆ ಕೊಡಿ. ಏಕೆಂದರೆ ಕೆಲವು ಬಾರಿ ಸರಕಾರ ಪೌರರ ಈ ಕಾರ್ಯಕ್ರಮಕ್ಕೆ ಪ್ರತಿಯಾಗಿ ಬಲಪ್ರಯೋಗ ಮಾಡಬಹುದು.
- ಜನರು ಎಲ್ಲಾ ವಿಧವಾದ ಹಿಂಸಾಚಾರ, ಖಾಸಗಿ ಮತ್ತು ಸಾರ್ವಜನಿಕ ಆಸ್ತಿ ನಾಶದಂಥಹ ದುಷಕೃತ್ಯಕ್ಕೆ ಕೈ ಹಾಕದಂತೆ ಪ್ರತಿಭಟನೆಯ ಸಮಯದಲ್ಲಿ ಎಚ್ಚರ ವಹಿಸಿ.
- ಕರ್ತವ್ಯ ನಿರ್ವಾಹಕರ ಮಧ್ಯ ಮಧ್ಯಂತರ ಮಾತುಕತೆ ಕೇವಲ ಮುಂಖಡರ ಅಥವಾ ಕಲಿಕೆಯುಳ್ಳ ಸದಸ್ಯರಿಗೆ ಸೀಮಿತವಾದುದಲ್ಲ, ಅದರಲ್ಲಿ ಎಲ್ಲರೂ ಭಾಗಿಯಾಗುವಂತೆ ಪ್ರೇರೇಪಿಸಿರಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ.)

# ಸೂಚಿಗಳು

1. XXX ಮಹಿಳೆಯರು, XXX ಪುರುಷರು, XXX ಯುವ ಜನರು, XXX ಮಕ್ಕಳು ಮನವಿ ಪತ್ರಗಳನ್ನು ಬರೆಯಲು ಮತ್ತು ಅರ್ಜಿಗಳನ್ನು ಭರ್ತಿ ಮಾಡಲು ಕಲಿತಿದ್ದಾರೆ.
2. XXX ವೈಯಕ್ತಿಕ ಅರ್ಜಿಗಳನ್ನು ರೇಷನ್ ಚೀಟಿ, ಮತದಾರರ ಚೀಟಿ ಮತು ಆಧಾರ್ ಕಾರ್ಡ್ ಮತ್ತು XXX ಮಹಿಳೆಯರು ವಿಧವಾ ಪಿಂಚಣಿ ಆರ್ಜಿಗಳನ್ನು ಹಾಕಿರುತ್ತಾರೆ.
3. XXX ಜನರು ಗುರುತಿನ ಚೀಟಿ; XXX ವಿದ್ಯಾರ್ಥಿಗಳು ಶಿಷ್ಯ ವೇತನ, XXX ಕುಟುಂಬಗಳು ಉದ್ಯೋಗ ಖಾತ್ರಿ ಚೀಟಿ ಮತ್ತು XXX ಕುಟುಂಬಗಳು ಅರ್ಹತಾ ಪತ್ರಗಳನ್ನು ಪಡೆದಿರುವರು.
4. XXX ಗುಂಪುಗಳು ಸಮುದಾಯದ ಹಲವು ಸಾಮಾನ್ಯ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಿರುತ್ತವೆ.
5. XXX ಶೇಕಡ ಮುಖಂಡರು ಸಂವಾದಿಸುವ, ಸಂಧಾನ ಸೌಹಾರ್ದ ಮಾತುಕತೆ ಮಾಡುವ ಮತ್ತು ಯೋಜನೆಯ ಮೇಲೆ ನಿಗಾಯಿಡುವ ಕಲೆಯನ್ನು ಬೆಳೆಸಿಕೊಂಡಿದ್ದಾರೆ.
6. ಸುಮಾರು XXX ಸಮುದಾಯದ ಸದಸ್ಯರು ಸರಕಾರಿ ಕಛೇರಿಗಳ ಪರಿಚಯವನ್ನು ಮಾಡಿಕೊಂಡಿದ್ದು ತಾವೇ ಅಧಿಕಾರಿಗಳನ್ನು ಭೇಟಿ ಮಾಡುವ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದಾರೆ.
7. XXX ಸಮುದಾಯದ ಸದಸ್ಯರು ಸರಕಾರದ ಅಥವಾ ಖಾಸಗಿ ಪ್ರಗತಿಪರ ಸಂಸ್ಥೆಗಳಿಂದ ಕಾರ್ಯಕ್ರಮ ಮತ್ತು ಯೋಜನೆಗಳಿಗೆ ಪರವಾನಗಿಯನ್ನು ಪಡೆದಿರುತ್ತಾರೆ.
8. XXX ಶೇಕಡ ಯುವ ಜನರು ಕುಟುಂಬಗಳ ಮನವಿ ಪತ್ರಗಳನ್ನು ಬರೆಯಲು ಸ್ವಯಂ ಸೇವಕರಾಗಿ ಸರ್ಮಪಿಸಿಕೊಂಡಿದ್ದಾರೆ.
9. XXX ಸದಸ್ಯರು ಪೌರರ ಬಗ್ಗೆ ಕರ್ತವ್ಯ ನಿರ್ವಾಹಕರು ಜವಾಬ್ದಾರಿಯನ್ನು ಹೊಂದಿರುವವರು ಎಂಬ ವಿಷಯವನ್ನು ತಿಳಿದುಕೊಂಡಿರುತ್ತಾರೆ.
10. XXX ಮುಖಾಮುಖಿ ಸಭೆಗಳು ಜರುಗಿದ್ದು ಅವುಗಳಲ್ಲಿ ಗುಂಪುಗಳು ವೈಯಕ್ತಿಕ ಅಥವಾ ಸಮುದಾಯಿಕ ವಿಷಯಗಳ ಬಗ್ಗೆ ಸರಕಾರಿ ಅಧಿಕಾರಿಗಳೊಂದಿಗೆ ಸಂವಾದಿಸಿರುತ್ತಾರೆ.
11. XXX ವ್ಯಕ್ತಿಗಳು ಮಾಹಿತಿ ಹಕ್ಕು (RTI) ಅರ್ಜಿಗಳನ್ನು ಮಾಡಲು ಮತ್ತು ಅವುಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸಲ್ಲಿಸಲು ಕಲಿತಿರುತ್ತಾರೆ.
12. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ.)

# ಸ್ವಯಂ ಮೌಲ್ಯ ನಿರ್ಧಾರ ಸಾಧನ

**ಈ ಕೆಳಗಿನ ಪಟ್ಟಿಯಲ್ಲಿ ಒಂದೊಂದು ಕ್ರಮ ಸಂಖ್ಯೆ ೧ ರಿಂದ ೫ ಅಂಕಗಳನ್ನು ಕೊಡಬಹುದು. ೧ ಅಂಕ ಕನಿಷ್ಠವಾಗಿದ್ದರೆ ೫ ಗರಿಷ್ಠವಾಗಿರುತ್ತದೆ. ನಿಮ್ಮ ಪ್ರಗತಿಯನ್ನು ಹೇಗೆ ನಿರ್ಧರಿಸುತ್ತೀರಿ? ನೋಡೋಣ.**

| ಕ್ರಮ ಸಂಖ್ಯೆ | ಅಭಿವೃದ್ಧಿ ಕ್ಷೇತ್ರ | ಅಂಶಗಳು |
|---|---|---|
| 1. | ನಾನು ವಿವಿಧ ಅರ್ಜಿ ಮತ್ತು ಮನವಿ ಪತ್ರಗಳನ್ನು ಬರೆಯಲು ಕಲಿತಿದ್ದೇನೆ | |
| 2. | ನಾನು ಸ್ಥಳೀಯ ಸರಕಾರಿ ಕಛೇರಿಗಳಿರುವ ಸ್ಥಳಗಳನ್ನು ತಿಳಿದಿದ್ದೇನೆ | |
| 3. | ನಾನು ಒಂಟಿಯಾಗಿ ಕಛೇರಿಗೆ ಹೋಗಿ ಮನವಿಯನ್ನು ಸಲ್ಲಿಸುವ ಧೈರ್ಯ ಹೊಂದಿದ್ದೇನೆ | |
| 4. | ನಾನು ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲು ಕಲಿತಿದ್ದೇನೆ | |
| 5. | ನನ್ನ ಹಕ್ಕು ಮತ್ತು ಒಡೆತನವನ್ನು ಪಡೆದುಕೊಳ್ಳಲು ನಾನು ವಿಶ್ರಮಿಸದೆ ಪ್ರಯತ್ನಿಸುತ್ತೇನೆ | |
| 6. | ನಾನು ಅಗತ್ಯವುಳ್ಳವರಿಗೆ ಸಹಾಯ ಮಾಡಲು ಮನವಿ ಪತ್ರಗಳನ್ನು ಬರೆಯುತ್ತೇನೆ ಹಾಗೂ ಅಧಿಕಾರಿಗಳನ್ನು ಭೇಟಿಯಾಗಲು ಹೋಗುತ್ತೇನೆ. | |
| 7. | ನಾನು ಪೌರತ್ವದ ಬಗ್ಗೆ ಬಲವಾದ ಸಂವೇದನೆಯನ್ನು ಬೆಳೆಸಿಕೊಂಡಿದ್ದೇನೆ. | |
| 8. | ನಾನು ಸಾಮಾಜಿಕ ಯೋಜನೆ, ಒಡೆತನದ ಬಗ್ಗೆ ಅರಿವನ್ನು ಹೊಂದಿದ್ದೇನೆ. ಅವನ್ನು ಪಡೆದುಕೊಳ್ಳುವ ವಿಧಾನವನ್ನು ಸಂಸ್ಥೆಯ ತರಬೇತಿಯಿಂದ ಪಡೆದುಕೊಂಡಿದ್ದೇನೆ. | |
| 9. | ಅಧಿಕಾರಿಗಳು ನಮ್ಮ ಸ್ಥಳಕ್ಕೆ ಬಂದಾಗ ವಿನಂತಿಗಳ ಬಗ್ಗೆ ಅವರೊಡನೆ ಯಾವ ಭಯ ಮತ್ತು ಅಂಜಿಕೆಯಿಲ್ಲದೆ ಮಾತನಾಡುತ್ತೇನೆ. | |
| 10. | ಗುಂಪಿನ ಸದಸ್ಯರು ತಮ್ಮ ಸಮಸ್ಯೆಗಳ ಬಗ್ಗೆ ಸ್ಥಳೀಯ ಸರಕಾರಿ ಅಧಿಕಾರಿಗಳನ್ನು ಒಮ್ಮನಸ್ಸಿನಿಂದ ಸಂಧಿಸುತ್ತಾರೆ. | |
| 11. | ಗುಂಪಿನ ಸದಸ್ಯರು ಅಧಿಕಾರಿಗಳನ್ನು ಭೇಟಿಯಾಗುವಾಗ ಧೈರ್ಯ, ಸ್ನೇಹ ಮತ್ತು ಆತ್ಮ ವಿಶ್ವಾಸವನ್ನು ತೋರ್ಪಡಿಸುತ್ತಾರೆ. | |
| 12. | ಗುಂಪಿನ ಸದಸ್ಯರು ತಮ್ಮ ಸಾಮರ್ಥ್ಯ ಮತ್ತು ಕೌಶಲ್ಯಕ್ಕೆ ತಕ್ಕಂತೆ ಹೊಣೆಗಾರಿಕೆಯನ್ನು ಹಂಚಿಕೊಳ್ಳುತ್ತಾರೆ. | |
| 13. | ಗುಂಪಿನ ಸದಸ್ಯರು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಪೋಷಕ ಸಂಸ್ಥೆ ಮತ್ತು NGO ಗಳಿಂದ ಉತ್ತರದಾಯಿತ್ವವನ್ನು ಕೇಳುತ್ತಾರೆ. | |
| 14. | ನಾವು ಒಂದು ಸಮುದಾಯವಾಗಿ ನೀಲಿನಕ್ಷೆ, ಕ್ರಿಯಾ ಯೋಜನೆಯನ್ನು ತಯಾರಿಸಿ ಅದನ್ನು ಅನುಷ್ಠಾನಕ್ಕೆ ತರುತ್ತೇವೆ. | |
| 15. | ಗುಂಪಿನ ಮುಖಂಡರು ಯೋಜನೆ ಮತ್ತು ಪುನರ್ವಿಮರ್ಶಾ ಸಭೆಯನ್ನು ನಡೆಸುತ್ತಾರೆ. | |
| 16. | (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ) | |

ಟಿಪ್ಪಣಿ: ಸ್ವ ಮೌಲ್ಯ ನಿರ್ಧಾರ ಮಾಡಿ ಅಂಕಗಳನ್ನು ಕೂಡಿಸುವಂತೆ ಎಲ್ಲಾ ಮುಖ್ಯಸ್ಥರಿಗೆ ತಿಳಿಸಿರಿ. ಮೊದಲನೆಯ ೮ ಕ್ರಮ ಸಂಖ್ಯೆಗಳು ವೈಯಕ್ತಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಅಂಕಗಳ ಮೊತ್ತದ ಬಗ್ಗೆ ಸಂವಾದಿಸಿರಿ. ಸಾಮರ್ಥ್ಯಗಳನ್ನು ಗುರುತಿಸಿ ಮತ್ತು ಸವಾಲುಗಳನ್ನು ಗೊತ್ತು ಮಾಡಿ. ಅಂತೆಯೇ ಇನ್ನೊಂದು ಚರ್ಚೆಯನ್ನು ಗುಂಪು ಅಥವಾ ಮುಖಂಡರ ಬೆಳವಣಿಗೆಯ ಬಗ್ಗೆ ಮಾಡಿ.



## ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

೧. ಹಕ್ಕು ಆಧಾರಿತ ಮಾದರಿಯ ಒಳಪ್ರವೇಶವನ್ನು ಅಂಗೀಕರಿಸುವುದರಿಂದ ಸಮುದಾಯದ ಸದಸ್ಯರ ಅನುಭವ, ಸಂಘರ್ಷ ಅಥವಾ ಸವಾಲುಗಳ ಅನುಭವಗಳೇನು?

೨. ಸಮುದಾಯದ ಸದಸ್ಯರು ವಿಶೇಷ ತರಬೇತಿಗಳನ್ನು ಉಪಯುಕ್ತವೆಂದು ಕಾಣುತ್ತಾರೆಯೇ? ಹೌದಾದರೆ ಯಾವುದನ್ನು ಸದಸ್ಯರು ಅತೀ ಪ್ರಯೋಜನಕಾರಿ ಎಂದು ಪರಿಗಣಿಸುತ್ತಾರೆ? ಅವರು ತರಬೇತಿಯ ವಿಷಯ ಮತ್ತು ವಿಧಾನದ ಬಗ್ಗೆ ಪ್ರತಿಕ್ರಿಯಿಸಿದರೇ?

೩. ಸಮುದಾಯದ ಸದಸ್ಯರು ತಾವಾಗಿ ಅಧಿಕಾರಿಗಳನ್ನು ಭೇಟಿಯಾದಾಗ ಆತ್ಮವಿಶ್ವಾಸವುಳ್ಳವರಾಗಿದ್ದಾರೆಯೇ? ಹೌದಾದರೆ ಅವರ ಕಲಿಕೆ ಮತ್ತು ಸವಾಲುಗಳೇನು?

೪. ಹಕ್ಕುದಾರರು ಮತ್ತು ಕರ್ತವ್ಯ ನಿರ್ವಾಹಕರನ್ನು ಹೊಂದಿಸಿ ನೋಡಿದಾಗ ನಿಮ್ಮ ಸಂತೃಪ್ತಿ ಯಾವ ಮಟ್ಟದಲ್ಲಿದೆ? ನಿಮ್ಮ ಸಂತೃಪ್ತಿಯನ್ನು ಉದಾಹರಣೆಗಳಿಂದ ನಿರೂಪಿಸಿರಿ.

೫. ಯಾವ ವಿಷಯಗಳಿಗಾಗಿ ಸಮುದಾಯದ ಸದಸ್ಯರು ಆಂದೋಲನ, ಪ್ರತಿಭಟನೆ ಮತ್ತು ಧರಣಿಗೆ ಶರಣಾಗುತ್ತಾರೆ ಮತ್ತು ಇದರಿಂದ ಅವರ ಕಲಿಕೆ ಏನು?

೬. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# "ಒಡೆತನದ ಸ್ವಾಧೀನಕ್ಕೆ ತೆತ್ತ ಬೆಲೆ"

PGSSನ ಶ್ರೀಮತಿ ಮೈನಾದೇವಿ ಈ ಘಟನೆಯನ್ನು ನಿರೂಪಿಸಿದರು: "ಜನರು ಒಬ್ಬ ಗರ್ಭಿಣಿ ಸ್ತ್ರೀಯನ್ನು ಆಸ್ಪತ್ರೆಗೆ ಕೊಂಡೊಯ್ಯುವಾಗ ಆಕೆ ಮಾರ್ಗ ಮಧ್ಯದಲ್ಲಿ ಮೃತಳಾದಳು. ರಸ್ತೆ ತುಂಬಾ ಕೆಟ್ಟದ್ದಾಗಿದ್ದರಿಂದ ಆ ಸ್ತ್ರೀಯನ್ನು ಆಸ್ಪತ್ರೆಗೆ ತಲುಪಿಸಲಾಗಲಿಲ್ಲ. ಗರ್ಭಿಣಿ ಸ್ತ್ರೀಯ ಮರಣದಿಂದ ರೊಚ್ಚಿಗೆದ್ದ ಹಳ್ಳಿಯ ಜನರು ಸ್ವಯಂ ಪ್ರೇರಿತರಾಗಿ ರಸ್ತೆಯನ್ನು ತಡೆದರು. ಪೊಲೀಸರು ಬಂದು ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಲು ಪ್ರಯತ್ನಿಸಿದರು. ಆದರೆ ಮಹಿಳೆಯರನ್ನು ಅಲುಗಾಡಿಸಲು ಅವರಿಂದ ಸಾಧ್ಯವಾಗಲಿಲ್ಲ. ಅನಂತರ ವಿಭಾಗೀಯ ಅಭಿವೃದ್ಧಿ ಇಲಾಖೆಯ ಅಧಿಕಾರಿ ಬಂದು ಮಹಿಳೆಯರನ್ನು ಸಂಪರ್ಕಿಸಿ ರಸ್ತೆ ದುರಸ್ಥಿ ಮಾಡುವುದಾಗಿ ತಿಳಿಸಿದರು. ಈ ಘಟನೆಯ ಬಗ್ಗೆ ಯೋಚಿಸುತ್ತಾ ಮಹಿಳಾ ಸಂಘದ ಸದಸ್ಯರು ಲಾಠಿ ಪ್ರಹಾರವಾಗುತ್ತಿದ್ದರೂ ತಮಗೆ ರಸ್ತೆಯನ್ನು ತಡೆಯುವ ಸಾಮರ್ಥ್ಯ ಹೇಗೆ ಬಂತು? ಅಧಿಕಾರಿಗಳನ್ನು ಎದುರಿಸಲು ಹೇಗೆ ಸಾಧ್ಯವಾಯಿತು? ಎಂದು ಆಶ್ಚರ್ಯಪಟ್ಟರು. ಇದು ಸಾಮೂಹಿಕ ಶಕ್ತಿಯ ಪ್ರದರ್ಶನವಲ್ಲದೆ ಮತ್ತೇನು?

ಶ್ರೀಮತಿ ಸೈಫುನ್ ೫ ವರ್ಷದ ವಿಧವೆ. ಆಕೆ ಕಳೆದ ೪೫ ವರ್ಷಗಳಿಂದ ತಂಗ್ರಾ ಪ್ರದೇಶದ ಮುಸ್ಲಿಂ ವಿಭಾಗದ ನಿವಾಸಿ. ತನ್ನ ಪತಿಯನ್ನು ಕಳೆದುಕೊಂಡಿದ್ದರೂ, ಕುಟುಂಬದಲ್ಲಿ ಅನೇಕ ಅನಾಹುತಗಳಾಗಿದ್ದರೂ ಆಕೆ ಸ್ವ ಸಹಾಯ ಸಂಘದ ಸಕ್ರೀಯ ಸದಸ್ಯಳಾಗಿದ್ದಳು. ಆ ವಿಭಾಗದಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳಿದ್ದವು. ಚರಂಡಿಯ ನೀರು ರಸ್ತೆಯಲ್ಲಿ ಹರಿಯುತ್ತಿತ್ತು, ದಾರಿ ದೀಪಗಳಿರಲಿಲ್ಲ. ಇದ್ದೆಡೆ ಅವು ಒಡೆದು ಹೋಗಿದ್ದವು. ಸೈಫುನ್ ಆ ವಿಭಾಗದ ಮಹಿಳೆಯೇನ್ನು ಪ್ರೋತ್ಸಾಹಿಸಿ ನಗರ ಸಭೆಯ ಅಧಿಕಾರಿಗಳನ್ನು ಭೇಟಿಯಾಗಿ ಬಹುತೇಕ ಸಮಸ್ಯೆಗಳನ್ನು ಪರಿಹರಿಸಿಕೊಂಡಳು. ಆಕೆ ಅಧಿಕಾರಿಗಳಿಗೆ ಪರಿಚಿತಳಾಗಿ ವಿವಿಧ ಇಲಾಖೆಗಳ ಪ್ರಮುಖ ಅಧಿಕಾರಿಗಳೊಂದಿಗೆ ಸಂಪರ್ಕವನ್ನು ಏರ್ಪಡಿಸಿಕೊಂಡಳು. ಈಗ ಈ ಮಹಿಳೆ ಆತ್ಮ ವಿಶ್ವಾಸದಿಂದ ಎಲ್ಲ ಇಲಾಖೆಗಳ ಕಛೇರಿಗಳಲ್ಲಿ ಸರಾಗವಾಗಿ ಪ್ರವೇಶಿಸಿ ಕ್ಷಣ ಮಾತ್ರದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಶಕ್ತಳಾಗಿದ್ದಾಳೆ.

CHAPTER 8

# ಕ್ಷೇತ್ರ ದರ್ಶನ ಮತ್ತು ಪೂರಕ ಕಲಿಕೆ



# ಕ್ಷೇತ್ರ ದರ್ಶನ ಮತ್ತು ಪೂರಕ ಕಲಿಕೆ

## ಉದ್ದೇಶ

ಈ ಹಂತದ ಉದ್ದೇಶವೇನೆಂದರೆ, ಸಮುದಾಯದ ಮುಖಂಡರಿಗೆ ಪೂರಕ ಕಲಿಕೆಯಾಗಿ ಕ್ಷೇತ್ರ ದರ್ಶನದಂತಹ ಇತರೆ ಸಮುದಾಯ ಸಂಚಲನಗಳು ಕೈಗೊಂಡಿರುವ ಪ್ರಕ್ರಿಯೆಗಳನ್ನು ಕಂಡು ಕಲಿಯುವ ಅವಕಾಶವನ್ನು ಕಲ್ಪಿಸಿ ಕೊಡುವುದಾಗಿದೆ. ಹೀಗೆ ಪರಸ್ಪರ ಕಲಿಕೆ ಮತ್ತು ಹಂಚಿಕೆಯಿಂದ ಮುಖಂಡರನ್ನು ಸಶಕ್ತರನ್ನಾಗಿ ಮಾಡುವುದಾಗಿದೆ. ಹೊರಾಂಗಣ ಸಂದರ್ಶನ "ನೋಡು, ನಿರ್ಧರಿಸು ಮತ್ತು ಮಾಡು" ಎಂಬ ಚಕ್ರಗತಿ ಸೂತ್ರವನ್ನು ಪೋಷಿಸುತ್ತದೆ. ಸಮುದಾಯ ಸಂಚಲನ "ಮಾಡಿ ಕಲಿ" ಸೂತ್ರಕ್ಕೆ ಒತ್ತು ಕೊಟ್ಟರೂ "ನೋಡಿ ಕಲಿಯುವಿಕೆ"ಯನ್ನು ಕಡೆಗಣಿಸುವಂತಿಲ್ಲ. ಆದರೆ "ಸದಸ್ಯರು ಸಮುದಾಯ ಅಭಿವೃದ್ಧಿಯಲ್ಲಿ ತಲ್ಲೀನರಾದ ಸಮಾನ ಮತ್ತು ವಿಭಿನ್ನ ಸನ್ನಿವೇಶದಲ್ಲಿ ಸಾಧನೆ ಮಾಡಿರುವವರೊಂದಿಗೆ ಪರಸ್ಪರ ವಿನಿಮಯ ಮಾಡುವುದು" ಲಾಭದಾಯಕವಾಗದೆ ಇರಲಾರದು. ಕ್ಷೇತ್ರ ದರ್ಶನದಲ್ಲಿ ಸದಸ್ಯರು ಇನ್ನೊಂದು ಸಮುದಾಯವನ್ನು ಸಂಧಿಸಲು ಹೋಗುವುದು ಆ ಸಮುದಾಯವನ್ನು ಅಂಗೀಕರಿಸುವ ಪ್ರಕ್ರಿಯೆಯನ್ನು ಒಳಗೊಂಡಿದೆ. ಈ ವಿಭಿನ್ನ ಸನ್ನಿವೇಶ ಇನ್ನಷ್ಟು ಕಲಿಕೆಗೆ ಅವಕಾಶವನ್ನು ಕಲ್ಪಿಸಿ ಕೊಡುತ್ತದೆ.

ಪ್ರಸ್ತುತ ಕ್ಷೇತ್ರ ದರ್ಶನದಲ್ಲಿ ನಾವು ಇನ್ನೊಂದು ಸಂಸ್ಥೆ ಹಮ್ಮಿ ಕೊಂಡಿರುವ ಸಮಾನ ಕಾರ್ಯಕ್ರಮವನ್ನು ವೀಕ್ಷಿಸುತ್ತೇವೆ. ನಾವು ಒಂದು ಭೌಗೋಳಿಕ ವಿಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಿ ಇನ್ನೊಂದು ಬಗೆಯ ಪೂರಕ ಕಲಿಕೆಯಲ್ಲಿ ಭಾಗಿಯಾಗುತ್ತೇವೆ. ಇದು ಒಂದೇ ಪರಿಪೋಷಕ ಸಂಸ್ಥೆಯ ಯೋಜನೆಯೇ ಆಗಿದ್ದರೂ ನಮ್ಮ ವೀಕ್ಷಣಾ ದೃಷ್ಟಿಕೋನ ಬೇರೆಯಾಗಿರುತ್ತದೆ. ನಾವು ಸಮುದಾಯ ಸಂಚಲನದಲ್ಲಿ ವಿಭಿನ್ನ ಮಾದರಿಗಳನ್ನು ಅಳವಡಿಸಿಕೊಳ್ಳುವುದರಿಂದ ಇನ್ನೊಂದು ಸಂಸ್ಥೆಯ ಕಾರ್ಯ

ವೈಖರಿಯನ್ನು ಕಂಡಾಗ ನಾವು ಹೊಸ ಅನ್ವೇಷಣೆ ಮತ್ತು ಅನುಭವಕ್ಕೆ ಮುಕ್ತರಾಗುತ್ತೇವೆ. ಈ ಅಭ್ಯಾಸದ ಮುಖಾಂತರ ಸಮುದಾಯದ ಸದಸ್ಯರೂ ಅಧಿಕ ಚೇತನಭರಿತರಾಗುತ್ತಾರೆ. ಇನ್ನೊಂದು ಸಂಸ್ಥೆಯ ಸಾಧನೆಯನ್ನು ಪ್ರತ್ಯಕ್ಷವಾಗಿ ಕಂಡಾಗ ಅವರು ಗಳಿಸಿದ ಯಶಸ್ಸಿನ ಬಗ್ಗೆ ನಮಗೆ ಹೆಮ್ಮೆ ಎನಿಸುತ್ತದೆ. ಇಲ್ಲಿ ನಾವು ನಮ್ಮ ನಿಯಮಿತ ಪ್ರಗತಿಯನ್ನು ಬದಿಗಿಟ್ಟು ಹೊಸ ವ್ಯಕ್ತಿ ಮತ್ತು ಅವರ ಕಾರ್ಯ ವಿಧಾನಗಳನ್ನು ಕಂಡುಕೊಳ್ಳುವಾಗ ಪರಸ್ಪರ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತೇವೆ, ಜೊತೆಗೆ ನಮ್ಮ ಪೂರಕ ಕಲಿಕೆ ಸಮೃದ್ಧವಾಗುತ್ತದೆ.

## ಕಾಲಾವಧಿ

ತಾತ್ವಿಕವಾಗಿ ಕ್ಷೇತ್ರ ದರ್ಶನ ಹಾಗೂ ಪೂರಕ ಕಲಿಕೆಯನ್ನು ಸಮುದಾಯ ಸಂಚಲನದಲ್ಲಿ ಯಾವಾಗಲೂ ಹಮ್ಮಿಕೊಳ್ಳಬಹುದು.  ಆದರೆ ಅದನ್ನು ೬ನೇ ಹಂತದ ನಂತರ ಕೈಗೊಂಡರೆ ಪ್ರಯೋಜನಕಾರಿಯಾಗುತ್ತದೆ. ಏಕೆಂದರೆ ಅಷ್ಟರಲ್ಲಿ ಗುಂಪುಗಳು ಸಾಕಷ್ಟು ಪರಿಪಕ್ವತೆ, ಅರಿವು ಮತ್ತು ಅನುಭವವನ್ನು ಗಳಿಸಿರುತ್ತವೆ. ಅವರು ತಾವು ಕಂಡದ್ದನ್ನು ತಮ್ಮ ಸಂಚಲನದ ಯಾವುದೇ ಸನ್ನಿವೇಶದಲ್ಲಿ ಅಳವಡಿಸಿಕೊಳ್ಳಲು ಶಕ್ತರಾಗಿರುತ್ತಾರೆ. ಇಂತಹ ಒಂದು ಭೇಟಿ ಒಂದು ದಿನ ಅಥವಾ ಕೆಲವು ಅನುಕ್ರಮ ದಿನಗಳವರೆಗೆ ಸನ್ನಿವೇಶಕ್ಕೆ ತಕ್ಕಂತೆ ಹಮ್ಮಿಕೊಳ್ಳಬಹುದು.

## ಸಾಗುವ ಮಾರ್ಗಗಳು

- ಕ್ಷೇತ್ರ ದರ್ಶನಕ್ಕೆ ಹೋಗುವ ಮೊದಲು ಗುಂಪುಗಳು ಚರ್ಚೆಯನ್ನು ಮಾಡಬೇಕಾಗುತ್ತದೆ. ಅದರಲ್ಲಿ ಭೇಟಿಯ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳು ವಿಷಯಗಳು ಮತ್ತು ಅನ್ವೇಷಿಸಬೇಕಾದ ಸಮಸ್ಯೆಗಳ ಪಟ್ಟಿ ಮಾಡಬೇಕು.
- ಭೇಟಿಯ ಮೊದಲು ತಂಡದೊಡನೆ ಯೋಜನಾ ಸಭೆ ಸೇರಿಸಿ ಭೇಟಿಯ ಉದ್ದೇಶ, ವಿಧಾನ ಕ್ರಮ, ದಿನ ಮತ್ತು ತಂಡದ ಸದಸ್ಯರ ಪಾತ್ರವನ್ನು ನಿಗಧಿಪಡಿಸಿಕೊಳ್ಳಬೇಕು, ತಂಡದ ಎಲ್ಲ ಸದಸ್ಯರು ಒಂದೇ ದೃಷ್ಟಿಕೋನ ಮತ್ತು ಏಕ ಉದ್ದೇಶದವರಾಗಿರಬೇಕು.
- ಆಯ್ಕೆಯಾದ ತಂಡದ ಸದಸ್ಯರು ಕ್ಷೇತ್ರ ದರ್ಶನಕ್ಕೆ ತಗಲುವ ಖರ್ಚನ್ನು ಭರಿಸಲು ಹಣ ಸಹಾಯ ಮಾಡುವಂತೆ ಅವರನ್ನು ಉತ್ತೇಜಿಸಬೇಕು.
- ಈ ಭೇಟಿಯನ್ನು ಚಳಿ ಬಿಡಿಸುವ ಒಂದು ಚಟುವಟಿಕೆ ಅಥವಾ ಆಟದಿಂದ ಆರಂಭಿಸಿರಿ. ಹೀಗೆ ಭೇಟಿ ನೀಡುವ ತಂಡ ಮತ್ತು ಮನೆ ತಂಡದವರು ನಿಕಟರೂ ಆತ್ಮೀಯರೂ ಆಗುತ್ತಾರೆ.
- ಪರಿಪೋಷಕ ಸಂಸ್ಥೆಯ ಸ್ವಯಂ ಸೇವಕರು ಅಥವಾ ಸಚೇತಕರು ಪೋಷಕ ಪಾತ್ರವನ್ನು ವಹಿಸಬೇಕು. ಅವರು ಎರಡು ತಂಡದ ಸದಸ್ಯರು ಪರಸ್ಪರ ವಿಚಾರ ವಿನಿಮಯ ಮಾಡುವಂತೆ ಉತ್ತೇಜನ ನೀಡಬೇಕು.
- ಈ ಕ್ಷೇತ್ರ ದರ್ಶನದ ಭೇಟಿಯನ್ನು NGOದ ಆಡಳಿತ ಅಥವಾ ಕ್ಷೇತ್ರ ಕಛೇರಿಗೆ ಮಾತ್ರ ಸೀಮಿತಗೊಳ್ಳದೆ ಅಲ್ಲಿನ ಸಮುದಾಯಗಳನ್ನು ಸಮುದಾಯಗಳ ಸದಸ್ಯರನ್ನು ಸಂಧಿಸಿ ಮಾತುಕತೆ ನಡೆಸುವ ಅವಕಾಶ ಖಡ್ಡಾಯವಾಗಿರಬೇಕು.
- ಎರಡು ತಂಡಗಳ ಸದಸ್ಯರು ಪರಸ್ಪರ ಪ್ರಶ್ನೆಗಳನ್ನು ಕೇಳಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಿರಿ. ಈ ಭೇಟಿ ಎರಡು ತಂಡಗಳಿಗೂ ಪ್ರಯೋಜನಕಾರಿಯಾಗಿರಬೇಕು.




- ಎರಡು ತಂಡಗಳು ಹೊಸ ಹೊಸ ವಿಧಾನಗಳನ್ನು ಮಧ್ಯ ಪ್ರವೇಶ, ಚರ್ಚಾ ವಿಧಾನದ ಮುಖಾಂತರ ತಮ್ಮ ಕಲಿಕೆಯನ್ನು ಬೆಳೆಸಿಕೊಳ್ಳಬೇಕು.
- ಈ ಭೇಟಿ ಮನೆ ಸಮುದಾಯದ ಬಗ್ಗೆ, ಮಾಹಿತಿ ನೀಡುವುದಲ್ಲಿ ಸಮಾಪ್ತಿಯಾಗಬೇಕು. ಇಲ್ಲಿ ಭೇಟಿ ನೀಡಿದ ತಂಡ ಮನೆ ತಂಡದಿಂದ ತನಗಾದ ಅನುಭವ ಮತ್ತು ಕಲಿಕೆಯನ್ನು ವಿವರವಾಗಿ ನಿರೂಪಿಸಬೇಕು.
- ಸಂಧಿಸಿದ ತಂಡದ ಸದಸ್ಯರನ್ನು ಮನೆ ಸಮುದಾಯದವರನ್ನು ಸ್ವಾಗತಿಸಲು ಮರೆಯದಿರಿ. ಅವರೂ ನಿಮ್ಮಿಂದ ಸಾಕಷ್ಟು ಕಲಿಯುವುದಿರುತ್ತದೆ.
- ಈ ಕ್ಷೇತ್ರ ದರ್ಶನದ ನಂತರ NGO ಸಿಬ್ಬಂದಿ ಮುಂದುವರಿದ ಚರ್ಚೆಯಲ್ಲಿ ಮನೆ ಸಮುದಾಯದ ಕಲಿಕೆಯಿಂದ ಏನನ್ನು ಅನುಷ್ಠಾನಕ್ಕೆ ತರಲು ಸಾಧ್ಯ ಎಂಬುದರ ಬಗ್ಗೆ ಮಾತನಾಡಬೇಕು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

## ಉಪಯುಕ್ತ ಸೂಚನೆಗಳು

- ಕ್ಷೇತ್ರ ದರ್ಶನ ಮಾಡಲಿರುವ ತಂಡದ ಸದಸ್ಯರು ತಾವು ಸಂಧಿಸಲಿರುವ ಸಮುದಾಯದ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ಹೊಂದಿರಬೇಕು. ಆ ಸ್ಥಳ, ಸ್ವಭಾವ, ಕಾರ್ಯಮಗ್ನತೆ ಮತ್ತು ಅದು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಲಭ್ಯ ಮಾಹಿತಿಯನ್ನು ತಿಳಿದಿರಬೇಕು.
- ಸಂದರ್ಶನಕ್ಕೆ ಹೋಗುತ್ತಿರುವವರು ಸಣ್ಣ, ಸಮ್ಮಿಶ್ರ ಗುಂಪಾಗಿರಬೇಕು. ಅದು ವಿಭಿನ್ನ ವಯಸ್ಸು, ಲಿಂಗ, ಉದ್ಯೋಗ, ಧರ್ಮ ಮತ್ತು ಜಾತಿಯದಾಗಿದ್ದರೆ ಮಾತ್ರ ಅವರ ಕಲಿಕೆ ಸಮಗ್ರವಾಗುತ್ತದೆ.
- ಸಂಧಿಸಲಿರುವ ತಂಡದ ಎಲ್ಲಾ ಸದಸ್ಯರ ಸಹಭಾಗಿತ್ವವನ್ನು ಗಮನದಲ್ಲಿರಿಸಿ, ಒಂದು ಅಜೆಂಡಾ ಅಥವಾ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧ ಮಾಡಬೇಕು.

- ಈ ಭೇಟಿಯನ್ನು ಮುಂಚಿತವಾಗಿ ಯೋಜಿಸಬೇಕು, ಕ್ಷೇತ್ರ ದರ್ಶನದ ತಂಡ ಮತ್ತು ಮನೆ ತಂಡದವರಿಗೆ ಹೊಂದಾಣಿಕೆಯಾಗುವಂತಿರಬೇಕು.
- ಕ್ಷೇತ್ರ ದರ್ಶನದ ಸಂದರ್ಭದಲ್ಲಿ ತಂಡದ ಎಲ್ಲಾ ಸದಸ್ಯರು ತಾವು ಏನನ್ನು ನಿರೀಕ್ಷಿಸುತ್ತಾರೆ ಎಂಬುದರ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇರಬೇಕು.
- ತಂಡದ ಸದಸ್ಯರ ಉದ್ದೇಶಗಳು ವಿಚಾರಶೀಲವಾಗಿದ್ದು ಅವರ ಸಾಮರ್ಥ್ಯ ವಿಭಿನ್ನವಾಗಿದ್ದರೂ ತಮ್ಮ ಮುಂದಿರುವ ಸಮಯದ ಬಗ್ಗೆ ಪರಿಜ್ಞಾನವುಳ್ಳವರಾಗಿರಬೇಕು.
- ತಂಡದ ಸದಸ್ಯರು ತಮ್ಮ ಕಾರ್ಯಕ್ರಮವನ್ನು ಚೆನ್ನಾಗಿ ಆಯೋಜಿಸಿ ಭೇಟಿಯ ನಂತರ ಮನೆಗೆ ಹಿಂತಿರುಗಿದಾಗ ತಮ್ಮ ಸಮುದಾಯದ ಸದಸ್ಯರಿಗೆ ಉತ್ತರಿಸುವಂತಿರಬೇಕು.
- ಸಮುದಾಯದ ಸದಸ್ಯರು ಇಂತಹ ಭೇಟಿಯನ್ನು ಸಂಘಟಿಸುವಂತೆ ಮತ್ತು ವಿಚಾರ ವಿನಿಮಯಕ್ಕೆ ಸೂಕ್ತ ಸಿದ್ಧತೆ ಮಾಡುವಂತೆ ಪ್ರೇರೇಪಿಸಿರಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

## ಉಪಯುಕ್ತ ಎಚ್ಚರಿಕೆಗಳು

- ಪರಿಪೋಷಕ ಸಂಸ್ಥೆಯ ಸಿಬ್ಬಂದಿ ಅಥವಾ ಕೆಲವು ಮುಖಂಡರು ತಮ್ಮ ಅಧಿಪತ್ಯದಿಂದ ಚರ್ಚಾ ಪ್ರಕ್ರಿಯೆಯನ್ನು ಪಲ್ಲಟಗೊಳಿಸಬಾರದು.
- ಈ ಭೇಟಿಯನ್ನು ಕ್ರಮಬದ್ಧವಾಗಿ ಆಯೋಜಿಸದಿದ್ದರೆ ಚಿಂತನೆ ಮತ್ತು ಕಲಿಕೆಯನ್ನು ಕಡೆಗಣಿಸಿದಂತಾಗುತ್ತದೆ.
- ಸಾಧ್ಯವಾದ ಮಟ್ಟಿಗೆ ಈ ತಂಡ ಒಂದೇ ರೀತಿಯದಾಗಿರಬಾರದು. ಅದರಲ್ಲಿ ಸಮುದಾಯದ ವಿವಿಧ ಘಟಕಗಳ ಪ್ರತಿನಿಧಿಗಳಿದ್ದು ಅವರು ಹಿಂತಿರುಗಿದ ಮೇಲೆ ಎಲ್ಲರಿಗೂ ತಮ್ಮ ಅನುಭವವನ್ನು ಹಂಚಿಕೊಳ್ಳುವಂತಿರಬೇಕು.
- ಈ ಕಲಿಕೆಯ ಉದ್ದೇಶ ಒಂದೇ ಆಗಿದ್ದು ಸನ್ನಿವೇಶಗಳು ಭಿನ್ನವಾಗಿರುವುದರಿಂದ ಎರಡು ಸಮುದಾಯಗಳ ಮಧ್ಯೆ ಅನಾರೋಗ್ಯಕರ ಹೋಲಿಸುವಿಕೆ ಅಥವಾ ಪೈಪೋಟಿ ಮನೋಭಾವವನ್ನು ತಡೆಹಿಡಿಯಬೇಕು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

## ಸೂಚಿಗಳು

1. XXX ಕ್ಷೇತ್ರ ದರ್ಶನ ಅಥವಾ ಪೂರಕ ಕಲಿಕೆಗಳನ್ನು ಆಯೋಜಿಸಲಾಗಿದೆ
2. XXX ಗುಂಪಿನ ಮುಖಂಡರು ಮತ್ತು XXX ಸದ್ಯಸರು ಅದರಲ್ಲಿ ಭಾಗವಹಿಸಿರುವರು
3. XXX ಗುಂಪುಗಳನ್ನು ಸಮುದಾಯದಿಂದ ಸ್ವೀಕರಿಸಲಾಯಿತು
4. XXX ಸಮುದಾಯದ ಸದಸ್ಯರು ಪೂರಕ ಭೇಟಿಯ ಅನುಭವ ಮತ್ತು ಕಲಿಕೆಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುವುದು

5. ವಿಧಾನ ಕ್ರಮಗಳನ್ನು ಮಧ್ಯಪ್ರವೇಶ ಚರ್ಚಾ ವಿಧಾನಗಳನ್ನು ಕ್ಷೇತ್ರ ದರ್ಶನದ ಮುಖಾಂತರ ಹೊಸದಾಗಿ ಕಲಿಯಲಾಯಿತು.
6. XXX ಯೋಜನೆಯನ್ನು ಪೂರಕ ಕಲಿಕೆಯ ಆಧಾರದ ಮೇಲೆ ಮಾರ್ಪಡಿಸಲಾಯಿತು.
7. XXX ಸದಸ್ಯರು ಸಂಧಿಸಿದ ಸದಸ್ಯರೊಡನೆ ಮತ್ತು ಸಂಸ್ಥೆಯ ಸಿಬ್ಬಂದಿಯೊಡನೆ ಸದಾ ಸಂವಾದದಲ್ಲಿರುತ್ತಿದ್ದರು.
8. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)



| ಕ್ರಮ ಸಂಖ್ಯೆ | ಪುನರಾವಲೋಕನದ ವಿಷಯಾಂಕ | ಯಾವ ಅಂಶ ಒಳಿತು? ಹೇಗೆ? | ಯಾವುದು ಉತ್ತಮವಾಗಿರುತ್ತಿತ್ತು? ಹೇಗೆ? |
|---|---|---|---|
| 1. | ಕ್ಷೇತ್ರ ದರ್ಶನಕ್ಕೆಂದು ಆಯ್ಕೆ ಮಾಡಿದ ಸಮುದಾಯ ಅಥವಾ ಯೋಜನೆ ಮತ್ತು ಸಂಸ್ಥೆ | | |
| 2 | ಕ್ಷೇತ್ರ ದರ್ಶನಕ್ಕೆಂದು ಅಯ್ಕೆಯಾದ ತಂಡ ಮತ್ತು ಅದರ ಸಂಯೋಜನೆ | | |
| 3 | ಪೂರಕ ಭೇಟಿಗೆಂದು ಮಾಡಿದ ಸಿದ್ಧತೆ, ನಿರ್ಣಯಿಸಲಾದ ಕಾರ್ಯಕ್ರಮದ ಪಟ್ಟಿಯ ಪ್ರಸ್ತುತತೆ | | |
| 4 | ನಿರ್ದಿಷ್ಟಗೊಳಿಸಲಾದ ದಿನಾಂಕ ಮತ್ತು ಸಮಯ | | |
| 5 | ಯೋಜನೆಯ ಅನುಷ್ಠಾನಕ್ಕೆಂದು ಆಯ್ಕೆ ಮಾಡಿದ ಕಾರ್ಯಕ್ರಮ ಪಟ್ಟಿಯ ಪ್ರಸ್ತುತತೆ | | |
| 6 | ಸಮುದಾಯದ ಸದಸ್ಯರೊಡನೆ ವಿಚಾರ ವಿನಿಮಯಕ್ಕೆ ಸಾಕಷ್ಟು ಸಮಯ | | |
| 7 | ಸಂಧಿಸಿದ ಮತ್ತು ಮನೆ ತಂಡಗಳ ಮಾತುಕತೆಯ ಸಂತೃಪ್ತಿ ಮಟ್ಟ | | |
| 8 | ಎಲ್ಲಾ ವಿಷಯಗಳನ್ನು ಪೂರ್ಣಗೊಳಿಸಲು ಸಾಕಷ್ಟು ಸಮಯ | | |
| 9 | ಸಂಸ್ಥೆಯ ಸಿಬ್ಬಂದಿಯ ಪರಿಪೋಷಕತೆ | | |
| 10 | ಮಾಹಿತಿ ಹಂಚಿಕೆ ಸಭೆಯ ಫಲಿತಾಂಶ | | |
| 11 | ವಿಸ್ತೃತ ಸಮುದಾಯದೊಂದಿಗೆ ಕಲಿಕೆ ಹಂಚಿಕೆ | | |
| 12 | ಭವಿಷ್ಯದ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಪುನರೂಪಿಸುವುದು ಅಥವಾ ಹರಿತಗೊಳಿಸುವುದರಲ್ಲಿ ಕಲಿಕೆಯ ಅಳವಡಿಕೆ | | |

# ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

1. ಯೋಜನೆ ಅನುಷ್ಠಾನ ಮತ್ತು ಕಲಿಕೆಯ ದೃಷ್ಟಿಕೋನದಿಂದ ನೋಡುವುದಾದರೆ ಈ ಭೇಟಿಯಿಂದ ಕಂಡುಕೊಂಡ ಸಾಮರ್ಥ್ಯ ಮತ್ತು ದುರ್ಬಲತೆಗಳು ಯಾವುವು?
2. ಸದಸ್ಯರು ಈ ಭೇಟಿಯ ಮಹತ್ವವನ್ನು ಅರಿತುಕೊಂಡಿರುವರೇ? ಹೌದಾದರೆ ಯಾವ ವಿಷಯಾಂಕಗಳು ಪೋಷಕವಾಗಿದ್ದವು; ಇಲ್ಲವಾದರೆ ಎದುರಿಸಿದ ಸವಾಲುಗಳು ಯಾವುವು?
3. ಸಮುದಾಯದ ಮುಖಂಡರು ಸದಸ್ಯರನ್ನು ನಡೆಸಿ ದಾರಿ ತೋರಿಸಲು ಶಕ್ತರಾಗಿದ್ದಾರೆಯೇ?
4. ಸದಸ್ಯರು ಜನರ ಹೊಸ ಗುಂಪು ಮತ್ತು ಸಂಸ್ಥೆಯ ಸಿಬ್ಬಂದಿಯೊಡನೆ ಸಮಾಲೋಚನೆ ಮಾಡುವಾಗ ಆತ್ಮ ವಿಶ್ವಾಶವುಳ್ಳವರಾಗಿದ್ದರೇ?
5. ಸಾಧಾರಣ ತರಬೇತಿ ಅಥವಾ ಸಬಲೀಕರಣ ತರಗತಿಗಿಂತ ಕ್ಷೇತ್ರ ದರ್ಶನದ ಪೂರಕ ಕಲಿಕೆ ಭಿನ್ನವಾಗಿತ್ತೇ?

6. ಅನುಭವದ ಪುನರ್ವರದಿಯ ಪರಿಣಾಮವೇನು?


7. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಮಕ್ಕಳ ಸಂಸತ್ತಿನಿಂದ ಕಲಿಕೆ

ಮಕ್ಕಳ ಸಂಸತ್ತಿನ ಪರಿಣಾಮದ ಬಗ್ಗೆ ಚೇತನಾಲಯದ ಕ್ಷೇತ್ರ ಸಂಯೋಜಕರು ಹೇಳಿದ ಮಾತುಗಳವು: "ಚೇತನಾಲಯದ ಕ್ಷೇತ್ರ ದರ್ಶನದ ಫಲಾನುಭವಿಗಳು ಪ್ರಮುಖರು ಎನ್ನಬಹುದು. ಮಕ್ಕಳಿಗೆ ಹೊರಾಂಗಣ ಭೇಟಿಯನ್ನು ಚೇತನಾಲಯ ಏರ್ಪಡಿಸಿತು. ಅವರನ್ನು ಇತರೆ ಸಂಸ್ಥೆಗಳಿಗೆ ಕೊಂಡೊಯ್ದು ಮಕ್ಕಳ ಸಂಸತ್ತನ್ನು ಪೋಷಿಸಲಾಯಿತು. ಮಕ್ಕಳು ಈ ಭೇಟಿಯಿಂದ ಹಿಂತಿರುಗಿದಾಗ ಅವರಲ್ಲಿ ನವಚೇತನ ತುಂಬಿತ್ತು, ಅವರು ಅಧಿಕ ಕ್ರಿಯಾಶೀಲರಾಗಿದ್ದರು. ಇತರ ಸಂಸ್ಥೆಗಳಿಂದ ಅವರು ಅನೇಕ ವಿಷಯಗಳನ್ನು ಕಲಿತುಕೊಂಡಿದ್ದರಿಂದ ಅವರ ಜೀವನ ಶೈಲಿಯಲ್ಲಿ ಬದಲಾವಣೆಯಿತ್ತು. ಅವರು ಐಕ್ಯತೆಯಿಂದ ಜವಾಬ್ಧಾರಿಯುತರಾಗಿ ನಡೆಯತೊಡಗಿದರು. ಅವರ ನಡೆ ನುಡಿ ಸಮುದಾಯಕ್ಕೆ ಅವರು ಕೊಟ್ಟ ವಿಶಿಷ್ಟ ಕೊಡುಗೆಯಾಗಿತ್ತು. ಅವರು ಬದಲಾವಣೆಯನ್ನು ತರುವುದರಲ್ಲಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಕಂಡುಕೊಂಡರು. ಅವರ ಕ್ರಿಯಾತ್ಮಕತೆಯಿಂದ ಸಿಮಾಪುರಿ ಪಟ್ಟಣ ಮೊಬಾಯ್ಲ್ ಕ್ರೆಷ್ ಪಾರ್ಕ್‌ನ್ನು ಮರಳಿ ಪಡೆಯುವುದರಲ್ಲಿ ಯಶಸ್ವಿಯಾಯಿತು.

CHAPTER 9

# ಕ್ರಿಯೆ – ಚಿಂತನಾ ಪ್ರಕ್ರಿಯೆ ಮತ್ತು ವ್ಯಾವಹಾರಿಕಾ ಪಾಠಗಳು



# ಕ್ರಿಯೆ – ಚಿಂತನಾ ಪ್ರಕ್ರಿಯೆ ಮತ್ತು ವ್ಯಾವಹಾರಿಕಾ ಪಾಠಗಳು

## ಉದ್ದೇಶ

ಸಮುದಾಯ ಸಂಚಲನ ಸಾಮಾನ್ಯ ಕಾರಣಗಳನ್ನು ಮುಂದಿಟ್ಟುಕೊಂಡು ಸಮುದಾಯಗಳು ಜೊತೆಗೂಡಿ ಬರುವುದರಿಂದ ಪ್ರಾರಂಭವಾಗುತ್ತದೆ. ಕ್ರಮೇಣ ಅದು ಗುಂಪಾಗಿ ಸಂಸ್ಥೆಯಾಗಿ ಬೆಳೆಯುತ್ತದೆ. ಅನಂತರ ಅದು ತನ್ನ ಪ್ರತ್ಯೇಕ ಸಮಸ್ಯೆ ಮತ್ತು ಕಾಳಜಿಗಳ ಬಗ್ಗೆ ಯೋಜನೆಯನ್ನು ರೂಪಿಸಿ ಚಟುವಟಿಕೆಗಳ ಮುಖಾಂತರ ಅನುಷ್ಠಾನಕ್ಕೆ ತರುತ್ತದೆ. ಹೀಗೆ ತೊಡಗಿಸಿಕೊಂಡ ಗುಂಪುಗಳು ತಮ್ಮ ಅನುಭವದ ಬಗ್ಗೆ ಪರ್ಯಾಲೋಚಿಸಿ, ಕಲಿತು ತನ್ನ ಸುತ್ತ ಸಮುದಾಯದ ಅರಿವನ್ನು ಬೆಳೆಸಿದರೆ ಈ ಪ್ರಕ್ರಿಯೆ ಗಾಢವೂ, ಸಂಪತ್ಭರಿತವೂ ಸಬಲವೂ ಆಗುತ್ತದೆ. ಪ್ರತಿದಿನದ ಯಾಂತ್ರಿಕ ಕೆಲಸ ಕಾರ್ಯಗಳ ಜಂಜಾಟದ ಮಧ್ಯೆ ಚಿಂತನೆಯ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದು ತುಂಬ ಪ್ರಯೋಜನಕಾರಿ. ಅದು ಸದಸ್ಯರು ತಮ್ಮ ಭಾವನೆಗಳೊಂದಿಗೆ ಸ್ಪರ್ಷಿಸಿ ಸಮುದಾಯದ ಸದಸ್ಯರು ಆಂತರಿಕ ಚಲನವಲನಗಳಿಗೆ ಸ್ಪಂದಿಸುವಂತೆ ಮಾಡುತ್ತದೆ. ಚಿಂತನಾ ಸಮಯ ಪರಸ್ಪರರೊಂದಿಗೆ ಆಳವಾದ ಸಂವಾದಕ್ಕೆ ಎಡೆಮಾಡಿಕೊಡುತ್ತದೆ.

"ಏನು ಸಂಭವಿಸಿತು ಅಥವಾ ಮಾಡಿದ್ದೇನು? ಎಂಬುದಕ್ಕೆ ಅತೀತವಾಗಿ ಕ್ರಿಯೆ–ಚಿಂತನಾ ಪ್ರಕ್ರಿಯೆ "ಹೇಗೆ" ಮತ್ತು "ಏಕೆ" ಹೇಗೆ ಒಬ್ಬ ವ್ಯಕ್ತಿ ಅಥವಾ ಗುಂಪು ಪ್ರತಿಕ್ರಿಯಿಸಿತು. ಅವರು ಏಕೆ ಹೀಗೆ ತೀರ್ಮಾನಿಸಿದರು ಎಂಬುದರ ಬಗ್ಗೆ ಕೇಂದ್ರೀಕರಿಸುತ್ತದೆ. ಎಲ್ಲಿ ಪ್ರಕ್ರಿಯೆ ಮತ್ತು ಫಲಿತಾಂಶಗಳ ಮೌಲ್ಯಮಾಪನಕ್ಕಿಂತ ಅಧಿಕವಾದುದು ಜರಗುತ್ತದೆ ಅಲ್ಲಿ ಚಿಂತನೆಯ ಪ್ರಕ್ರಿಯ ಆಲೋಚನೆ, ಭಾವನೆಗಳು, ಶರೀರ ಮತ್ತು ಆಂತರಿಕ ಆತ್ಮವನ್ನು ಒಳಗೊಳ್ಳುತ್ತದೆ. ಅದು ಟೀಕಾತ್ಮಕವಾಗಿ ಮೌಲ್ಯ ಮತ್ತು ನಂಬಿಕೆಯ ವ್ಯವಸ್ಥೆಯನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ. ಇಲ್ಲಿ ನಿಷ್ಕ್ರಿಯತೆ ಅರಗುವಿಕೆ ಮತ್ತು ಅನುಭವದ



ಮೂಲಕ ಅರ್ಥ ಕಲ್ಪಿಸುವ ಸಮಯವಾಗಿ "ಆದಂತೆ ಆಗಲಿ" ಎನ್ನುವ ಜೀವನ್ಮರಣ ಚಕ್ರದ ಸಮಗ್ರತೆಯ ಗಳಿಗೆಯಾಗುತ್ತದೆ. ಕ್ರಿಯೆ–ಚಿಂತನಾ ಪ್ರಕ್ರಿಯೆ ಒಳನೋಟ, ಸಾಧ್ಯತೆ ಹಾಗೂ ಶಕ್ತಿಯುತ ಕಾರ್ಯಗಳಿಗೆ ಅವಕಾಶ ಮಾಡಿಕೊಡಬಹುದು. ಅವನ್ನು ಈ ಹಿಂದೆ ಯೋಜನೆ ಮತ್ತು ಅನುಷ್ಠಾನದ ಸಂದರ್ಭದಲ್ಲಿ ಗುಂಪುಗಳು ಕಡೆಗಣಿಸಿರಬಹುದು, ವ್ಯಾವಹಾರಿಕ ಪಾಠಗಳು ಅರಿವು ಅಥವಾ ಸಿದ್ಧಾಂತವಾಗಿದ್ದು ಪರ್ಯಾಲೋಚನಾ ಅನುಭವ ಮತ್ತು ಕ್ರಿಯೆ – ಸಂಶೋಧನೆಯಿಂದ ಹುಟ್ಟುತ್ತದೆ. ಅದು ಸಮುದಾಯದ ಸದಸ್ಯರಿಗೆ ಸಾಮೂಹಿಕ ಸಾಮಾಜಿಕ ಕ್ರಿಯೆಯಲ್ಲಿ ಅವರ ಆಧ್ಯಾತ್ಮಿಕತೆಯನ್ನು ಗಾಢವಾಗಿಸಲು ಸಹಾಯಕವಾಗುತ್ತದೆ.

## ಸೂಕ್ತ ಸಮಯ

ಈ ವಿಷಯ ಒಳದಾರಿಯಾಗಿದ್ದು ಅದನ್ನು ಸಮುದಾಯ ಸಂಚಲನದ ಉದ್ದಗಲಕ್ಕೂ ಅಳವಡಿಸತಕ್ಕದ್ದು. ಎಲ್ಲ ಗುಂಪುಗಳಿಗೂ ಚಿಂತನೆ–ಕ್ರಿಯೆಯ ಅಭ್ಯಾಸ ಅತ್ಯುತ್ತಮವಾಗಿದ್ದು ಅದನ್ನು ಪ್ರತಿ ಹಂತದ ನಂತರ ಹಮ್ಮಿಕೊಳ್ಳಬಹುದು. ಹೀಗೆ ಪ್ರಕ್ರಿಯೆಗಳ ಬಗ್ಗೆ ಸದಸ್ಯರ ಭಾವನೆ, ಯೋಚನೆ ಮತ್ತು ಸ್ಪಂದನೆ ಅವರ ಸ್ಮರಣೆಯಲ್ಲಿ ಹಚ್ಚಹಸುರಾಗಿದ್ದು ಸ್ಮರಣೆ ಹಾಗೂ ಅರಿವಿನ ನಿರ್ಮಾಣದಲ್ಲಿ ಕೊರತೆಯಾದುದನ್ನು ಭರಿಸಬಹುದಾಗಿದೆ.

## ಸಾಗುವ ಮಾರ್ಗಗಳು

- ಗುಂಪು ಚರ್ಚೆಯನ್ನು ಆಯೋಜಿಸಿರಿ, ಅದರಲ್ಲಿ ಸದಸ್ಯರು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುವ ತೀರ್ಮಾನ ಮತ್ತು ಕ್ರಿಯೆಗಳ ಬಗ್ಗೆ ಚಿಂತಿಸಲಿ.
- ಗುಂಪುಗಳಿಗೆ ಅತೀ ಪ್ರಿಯವಾಗಿರುವ ಹಾಗೂ ಮರುಕಳಿಸಲು ಸಾಧ್ಯವಾಗುವ ಕ್ರಿಯಾ ವಿಧಾನ ಮತ್ತು ಸಾಧನವನ್ನು ತೀರ್ಮಾನಿಸಲು ಪ್ರೋತ್ಸಾಹಿಸಿರಿ.
- ಈ ಕೆಳಗೆ ನಮೂದಿಸಿದ ಪಟ್ಟಿಯಿಂದ ಭಾವಹಿಸಲಿರುವವರಿಗೆ ಚಿರಪರಿಚಿತವಾಗಿರುವ ಸೂಕ್ತ ಮಾದರಿಯನ್ನು ತಮ್ಮ ಪರ್ಯಾಲೋಚನೆಯನ್ನು ಸನ್ನಿವೇಶಕ್ಕೆ ತಕ್ಕಂತೆ ರೂಪಿಸಲು ಆಯ್ಕೆ ಮಾಡಲಿ.

- ಸಂವೇದನೆ, ಭಾವನೆ ಮತ್ತು ಆಲೋಚನೆಗಳನ್ನು ಚಾರ್ಟ್, ಪಟ, ಕುಶಲ ಚಿತ್ರ ಮತ್ತು ಸ್ಕಿಟ್‌ಗಳನ್ನು ಸಹಭಾಗಿಗಳ ಆಸಕ್ತಿಗೆ ಅನುಗುಣವಾಗಿ ಅವರು ವ್ಯಕ್ತಪಡಿಸುವಂತೆ ನವ ನವೀನ ವಿಧಾನಗಳನ್ನು ಉಪಕ್ರಮಿಸಿರಿ.
- ಸಹಭಾಗಿಗಳು ತಮ್ಮ ಆಲೋಚನೆಗಳಿಗೆ ಮಿಗಿಲಾಗಿ ಭಾವನೆ ಮತ್ತು ಸಂವೇದನೆಗಳನ್ನು ವ್ಯಕ್ತ ಪಡಿಸಲಿ, ಅದರ ಅಂಗ ವಿನ್ಯಾಸವನ್ನು ಗಮನಿಸಿರಿ.
- ವ್ಯವಸ್ಥಿತವಾಗಿರುವ ಸಾಧನ ಒಂದು ವಿಧದಲ್ಲಿ ಈ ತಾಂತ್ರಿಕತೆಯನ್ನು ಬಳಸುತ್ತದೆ. ಇದೊಂದು ಪರಿಣಾಮಕಾರಿ ಸಾಧನವಾಗಿದ್ದು ಗುಂಪಿನ ಸದಸ್ಯರನ್ನು ಅದರಲ್ಲಿ ಆಳವಾಗಿ ತಮ್ಮ ಆಲೋಚನೆ, ಭಾವನೆಗಳೊಂದಿಗೆ ಮುಳುಗಿಸುತ್ತದೆ. ಅದು ಅವರ ಕಲಿಕೆಯನ್ನು ಗುರುತಿಸಿ ಅನುಭವದ ಸುಜ್ಞಾನವನ್ನು ಹೊರಹಾಕುತ್ತದೆ.
- PRA ಮತ್ತು PLA ವಿಧಾನಗಳಿಂದ ಪರಿಚಿತವಾಗಿರುವ ಗುಂಪುಗಳನ್ನು ಕ್ರಿಯೆ – ಚಿಂತನಾ ಅಭ್ಯಾಸಕ್ಕೆ ಅನುವು ಮಾಡಿಕೊಡಬಹುದು. ಇದಕ್ಕೆ ವ್ಯತಿರಿಕ್ತವಾಗಿ ಅವರು ತಮ್ಮ ಆಲೋಚನೆಗಳಿಂದ ಕಲಿಕೆಯನ್ನು ಸೆರೆ ಹಿಡಿಯಲು ಪ್ರೋತ್ಸಾಹಿಸಬಹುದು.
- ಒಂದೇ ಘಟನೆಯನ್ನು ಮತ್ತು ಕ್ರಿಯೆಯನ್ನು ಹಲವಾರು ರೀತಿಯಲ್ಲಿ ನಿರೂಪಿಸಬಹುದು, ಅದರಲ್ಲಿರುವ ವೈವಿಧ್ಯಾಮಯ ಆಯಾಮ ಕಲಿಕೆಯನ್ನು ಪೋಷಿಸಬಹುದು.
- ಚಿಂತನೆಯ ಪ್ರಕ್ರಿಯೆಯಲ್ಲಿ ಸದಸ್ಯರು ತಾವು ಮಾಡಿದ್ದನ್ನು ಪುನರಾವರ್ತಿಸುವುದರಲ್ಲಿ ಸಫಲರಾದರೆ ಆಂತ್ಯವಾಗುವುದು ಯಾವ ಯಾವ ಕ್ರಿಯೆಗಳನ್ನು ಅವರು ಸಮಾನವಾಗಿ ಮಾಡುವರು ಮತ್ತು ಯಾವುದನ್ನು ಭಿನ್ನವಾಗಿ ಮಾಡಬಹುದು ಎಂಬುದರ ಬಗ್ಗೆ ಕಾರಣ ತಿಳಿದಿದ್ದರೆ ಅಷ್ಟೆ ಸಾಕು.
- . . . . . . . . . . . . . . . (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಆಥವಾ ಸಂಪರ್ಕಿಸಿರಿ)

# ಉಪಯುಕ್ತ ಸೂಚನೆಗಳು

- ಆರಂಭದಲ್ಲಿ ಸವಾಲಿನಂತಿದ್ದರೂ ಚಿಂತನಾ ಪ್ರಕ್ರಿಯೆಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ.
- ವಿಷಯಗಳ ಸಂಖ್ಯೆ ಮತ್ತು ಚಿಂತನೆಗೆ ಆಯ್ಕೆ ಮಾಡಿಕೊಂಡ ಸ್ಥಳ ಸೀಮಿತವಾಗಿದ್ದರೆ ಈ ಪ್ರಕ್ರಿಯೆ ಪರಿಣಾಮಕಾರಿಯಾಗಿರುತ್ತದೆ. ಆಗ ಗಾಢವಾದ ಆಲೋಚನೆ ಮತ್ತು ಸ್ಪಷ್ಟ ಉಚ್ಚರಣೆ ಸಾಧ್ಯವಾಗುತ್ತದೆ.
- ಕೈಪಿಡಿಯ ಒಂದೊಂದು ವಿಭಾಗವು ಫಲಿತಾಂಶ ಮತ್ತು ಪರಿಣಾಮದ ಮೌಲ್ಯವನ್ನು ನಿರ್ಧರಿಸುವ ಚಿಂತನೆ ಮತ್ತು ಹಂಚಿಕೆಯ ವಿಧಾನವನ್ನು ಹೊಂದಿದೆ. ಇವುಗಳು ಕ್ರಿಯೆ – ಚಿಂತನೆಯ ಚರ್ಚೆಯನ್ನು ಪ್ರಾರಂಭಿಸುವ ಕೀಲಿಯಾಗಿದೆ.
- “ಹೇಗೆ” ಕಾರ್ಯವಾಯಿತು, “ಏಕೆ” ಆಯಿತು ಮತ್ತು “ಹೇಗೆ” ಪ್ರಕ್ರಿಯೆಯ ಸಂದರ್ಭದಲ್ಲಿ ವರ್ತಿಸಿತು ಎಂಬುದರ ಬಗ್ಗೆ ಕೇಂದ್ರೀಕರಿಸಬೇಕು. ಇದು ಕೆಲವರ ಯಶಸ್ಸುಗಳ ಸರಣಿಯಲ್ಲ.
- ಕೆಲವು ಬಾರಿ ಸದಸ್ಯರು ತಮ್ಮ ದೈನಂದಿನ ದಿನಚರಿಯಲ್ಲಿ ಮಗ್ನರಾಗಿ ಬೇರೆ ಬೇರೆ ಸ್ಥಳಗಳಿಗೆ ಚಲಿಸುತ್ತಿರಬಹುದು. ಇಂಥವರಿಗೆ ಈ ಗಾಢ ಚಿಂತನಾ ಪ್ರಕ್ರಿಯೆ ಪ್ರಯೋಜನಕಾರಿಯಾಗಿದೆ.
- ವರ್ಷದಲ್ಲಿ ಎರಡು ಅಥವಾ ಮೂರು ಬಾರಿ ಚಿಂತನಾ ಸಭೆಗಳನ್ನು ಆಯೋಜಿಸುವುದು ಉಪಯುಕ್ತ ವಿಧಾನವಾಗಿದೆ.
- ಚಿಂತನಾ ಪ್ರಕ್ರಿಯೆ ಕೆಲವು ಬಾರಿ ನಿಗೂಢ ಗಾಯಗಳನ್ನು ಗುಣಪಡಿಸುತ್ತದೆ. ವಿಭಿನ್ನತೆಯನ್ನು ಎದುರಿಸುತ್ತದೆ. ವ್ಯಕ್ತಿಯ ಇತಿಮಿತಿಯನ್ನು ಅಂಗೀಕರಿಸುತ್ತದೆ ಮತ್ತು ಇತರ ಕೊಡುಗೆಗಳನ್ನು ಗುರುತಿಸುತ್ತದೆ.

- ಇದು ಸಮುದಾಯದ ಸದಸ್ಯರಲ್ಲಿ ನಂಬಿಕೆ ಮತ್ತು ಸ್ವಾತಂತ್ರ್ಯದ ಗಾಢ ಬಾಂಧವ್ಯವನ್ನು ಸ್ಥಾಪಿಸಲು ಸಹಾಯಕವಾಗುತ್ತದೆ.
- ಎಲ್ಲಿ ಸಮುದಾಯ ಸಂಚಲನ ಪ್ರಕ್ರಿಯೆ ವಿಸ್ತೃತ ಭೌಗೋಳಿಕ ಪ್ರದೇಶದಲ್ಲಿ ಅನುಷ್ಠಾನಕ್ಕೆ ತರಲಾಗಿದೆಯೋ, ಅಲ್ಲಿಂದ ಚಿಂತನಾ ಕಲಿಕೆಯಲ್ಲಿ ಪಳಗಿದವರನ್ನು ಇತರ ಸ್ಥಳಗಳಲ್ಲಿಯೂ ಉಪಕ್ರಮಿಸಲು ಬಳಸಿಕೊಳ್ಳಬಹುದು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಉಪಯುಕ್ತ ಎಚ್ಚರಿಕೆಗಳು

- ಚಿಂತನಾ ಪ್ರಕ್ರಿಯೆಯನ್ನು ಬಲತ್ಕಾರದಿಂದ ಯಾರ ಮೇಲೂ ಹೇರಬೇಡಿ, ಸಹಭಾಗಿಗಳನ್ನು ಸ್ವಯಂ ಪ್ರೇರಣೆಯನ್ನು ಉತ್ತೇಜಿಸಿರಿ.
- ಪ್ರಾರಂಭದಲ್ಲಿ ಸಹಭಾಗಿಗಳು ಸ್ವ ಪ್ರತಿಷ್ಠೆ, ಸ್ವ ಯಶಸ್ಸು, ತೀರ್ಪಿಡುವುದರಲ್ಲಿ ಮಗ್ನರಾಗದೆ ಇತರರು ವಾಗ್ವಾದ, ಚರ್ಚೆ ಮತ್ತು ಗಲಾಟೆಯಲ್ಲಿ ತೊಡಗುತ್ತಾರೆ. ಕೆಲವರು ತಮ್ಮ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸಲು ಕಷ್ಟಪಡಬಹುದು ಅಂಥವರನ್ನು ಸಾವಧಾನದಿಂದ ನಡೆಸಿರಿ.
- ಚಿಂತನಾ ಕ್ರಿಯೆ ಪ್ರಕ್ರಿಯೆ ಗಾಢ ಆಂತರಿಕ ಮಾತುಕತೆಯಾಗಬೇಕು. ಅದನ್ನು ಯಶಸ್ಸಿನ ಪಟ್ಟಿಯನ್ನಾಗಿ ಪರಿವರ್ತಿಸಬೇಡಿ ಅಥವಾ ತಪ್ಪನ್ನು ಕಂಡು ಹಿಡಿಯುವ ಅಸ್ತ್ರವನ್ನಾಗಿಸಬೇಡಿ. ಗಾಢವಾದ ಸಂವಾದ ಸಾಮೂಹಿಕ ಅರಿವನ್ನು ನಿರ್ವಹಿಸಲು ಸಹಾಯಕವಾಗುತ್ತದೆ. ಅದರಲ್ಲಿರುವ ಸೂಕ್ಷ್ಮ ವಿಷಯಗಳು ಜೀವನವನ್ನು ಪರಿವರ್ತಿಸಲು ಸಹಾಯಕವಾಗುತ್ತದೆ.
- ವಿರೋಧ ಮತ್ತು ವಿಭಿನ್ನತೆಯನ್ನು ಎಂದೂ ದಮನ ಮಾಡಬಾರದು. ಪ್ರತಿಯಾಗಿ ಒಬ್ಬ ವ್ಯಕ್ತಿ ಏಕೆ ಈ ರೀತಿ ಪ್ರತಿಕ್ರಿಯಿಸುತ್ತಾನೆ ಎಂಬ ಕಾರಣಗಳನ್ನು ಹಂಚಿಕೊಳ್ಳಲು ಉತ್ತೇಜಿಸಬೇಕು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)




## ಸೂಚಿಗಳು


1. XXX ಗುಂಪುಗಳು ಅಥವಾ CBOಗಳು ಕ್ರಿಯೆ–ಚಿಂತನೆ ಪ್ರಕ್ರಿಯೆಯನ್ನು XXX ಬಾರಿ ಹಮ್ಮಿಕೊಂಡರು.
2. XXX ಸಹಭಾಗಿಗಳು ತಮ್ಮ ಆಲೋಚನೆ ಮತ್ತು ಸ್ಪಂದನೆಯನ್ನು ಮುಕ್ತವಾಗಿ ವ್ಯಕ್ತಪಡಿಸಿದ ತೃಪ್ತಿಯನ್ನು ಹೊಂದಿದ್ದಾರೆ ಮತ್ತು XXX ತಾವು ಸಹ ಇತರರರಿಂದ ಆಲಿಸಿದ ಸಂತೋಷವನ್ನು ಹೊಂದಿದ್ದಾರೆ.
3. XXX ಸಹಭಾಗಿಗಳು ಅಥವಾ ಗುಂಪುಗಳು ನಮ್ಮ ಹೊರ ನೋಟ, ಅಭಿಪ್ರಾಯಗಳನ್ನು ಇತರರನ್ನು ಆಲಿಸಿದ ನಂತರ ಬದಲಾಯಿಸಿದರು.
4. XXX ಸಹಭಾಗಿಗಳು ಅಥವಾ ಗುಂಪುಗಳು ತಮ್ಮ ಕಲಿಕೆಯ ಫಲಿತಾಂಶವನ್ನು ವ್ಯಕ್ತಪಡಿಸಿದರು. ಈ ಫಲಿತಾಂಶ ಸಾಮಾನ್ಯ ವರದಿಯ ನಮೂನೆಯಲ್ಲಿ ಸೆರೆಹಿಡಿಯಲಾಗಲಿಲ್ಲ.
5. XXX ಸಹಭಾಗಿಗಳು ಅಥವಾ ಗುಂಪುಗಳು ಚಿಂತನಾ ಪ್ರಕ್ರಿಯೆ ತಮ್ಮ ಪರಸ್ಪರ ಬಾಂಧವ್ಯವನ್ನು ಬಲಪಡಿಸಿತು ಎಂಬ ಭಾವನೆಯನ್ನು ಹೊಂದಿದ್ದರು.
6. XXX ಸಹಭಾಗಿಗಳು ಅಥವಾ ಗುಂಪುಗಳು ಚಿಂತನಾ ತರಗತಿಗಳ ತಮ್ಮ ಮತ್ತು ಇತರರ ಸ್ವಂತ ಶಕ್ತಿ ಮತ್ತು ಇತಿಮಿತಿಗಳನ್ನು ಅಂಗೀಕರಿಸಲು ಸಾಧ್ಯವಾಯಿತು ಎಂದರು.
7. XXX ಸಹಭಾಗಿಗಳು ಅಥವಾ ಗುಂಪುಗಳು ತಮ್ಮ ಚಿಂತನಾ ಪ್ರಕ್ರಿಯೆಗಳ ಆಧಾರದ ಮೇಲೆ ಯೋಜಿತ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿದರು.
8. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಕ್ರಿಯೆ – ಚಿಂತನಾ ಮಾದರಿಗಳು


**ಮಾದರಿ:– ೧ ಕ್ರಿಯೆ, ಚಿಂತನೆ, ಕಲಿಕೆ ಮತ್ತು ಯೋಜನೆ (ARLP)**




**ಮಾದರಿ – ೨ ಗಿಬ್ಸ್‌ನ ಪ್ರತಿಫಲನಾ ಚಕ್ರ** (GIBBS G. 1988)




**ಮಾದರಿ ೩: ವ್ಯವಸ್ಥಿತ ಸಾಧನ**



### ಮಾದರಿ ೪: ಇಗ್ನೇಷಿಯನ್ ಆಳ ಸಂವಾದ – ವೈಯಕ್ತಿಕ ಮತ್ತು ಸಾಮುದಾಯಿಕ ವಿವೇಚನೆ





## ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

1. ಕ್ರಿಯೆ – ಚಿಂತನೆಯಲ್ಲಿ ತೊಡಗಿದ್ದ ಗುಂಪುಗಳ ಅನುಭವವೇನು?
2. ಸದಸ್ಯರು ಈ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆಯೇ? ಹೌದಾದರೆ ಹೇಗೆ? ಇಲ್ಲವಾದರೆ ಏಕೆ?
3. ಸಹಭಾಗಿಗಳು ಅನುಭವಿಸಿದ ಕೆಲವು ತೊಡಕುಗಳು ಮತ್ತು ಸವಾಲುಗಳು ಯಾವುವು?
4. ಚಿಂತನಾ ಪ್ರಕ್ರಿಯೆಯ ನಂತರ ಸಹಭಾಗಿಗಳ ಸಾಮರ್ಥ್ಯದ ಮಟ್ಟ ಹೇಗಿತ್ತು.
5. ಈ ಪ್ರಕ್ರಿಯೆಯ ಮುಖಾಂತರ ಸಹಭಾಗಿಗಳು ಯಾವ ಹೊಸ ಒಳನೋಟಗಳನ್ನು ಪಡೆದುಕೊಂಡರು?
6. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ.)

CHAPTER 10

# ಸಹಯೋಗ, ಜಾಲತಾಣ ಮತ್ತು ಪರವಾದದ ಕ್ರಿಯೆಗಳು



# ಸಹಯೋಗ, ಜಾಲತಾಣ ಮತ್ತು ಪರವಾದದ ಕ್ರಿಯೆಗಳು

## ಉದ್ದೇಶ

ಸಹಯೋಗ, ಜಾಲತಾಣ ಮತ್ತು ಪರವಾದದ ಕ್ರಿಯೆಗಳು ಸಮುದಾಯ ಬೆಂಬಲಿತ ಪ್ರಕ್ರಿಯೆಗಳ ಮೌಲ್ಯವನ್ನು ಗಣನೀಯವಾಗಿ ವೃದ್ಧಿಗೊಳಿಸುತ್ತವೆ. ಸರ್ವತೋಮುಖ ಅಭಿವೃದ್ಧಿ ಮತ್ತು ಸಮುದಾಯದ ಸದಸ್ಯರಿಂದ ಹಕ್ಕು ಮತ್ತು ಒಡೆತನದ ಗಳಿಕೆಯನ್ನು ಏಕಾಂತದಲ್ಲಿ ಅಥವಾ ಒಂದೇ ಪ್ರತ್ಯೇಕ ಪರಿಪೋಷಕ ಸಂಸ್ಥೆಯೊಂದಿಗೆ ಸಂಪರ್ಕದಿಂದ ಸಾಧ್ಯವಾಗಲಾರದು. ಸಹಯೋಗವೆಂದರೆ ಸಾಮಾನ್ಯ ಹಿತಾಸಕ್ತಿಯ "ಸಹದುಡಿಮೆ". ಅಂದರೆ ಅದರಲ್ಲಿ ಮಾಹಿತಿ ಹಂಚಿಕೆ, ಕಾರ್ಯಕ್ರಮ ಸಂಯೋಜನೆ, ಜಂಟಿ ಯೋಜನೆ ಮತ್ತು ಕ್ರಿಯೆಗಳನ್ನು ಒಳಗೊಂಡಿರುತ್ತದೆ. ಜಾಲತಾಣವು ಗುಂಪು ಸಂಸ್ಥೆಗಳಿಂದ ಸಂಯೋಜಿತಗೊಂಡಿರುತ್ತದೆ. ಅದರಲ್ಲಿ ವೈವಿಧ್ಯಮಯ ಸಂಬಂಧಗಳು, ಸಂಬಂಧದ ಶಕ್ತಿ ಮೂಲಗಳ ಜೊತೆಗೆ ನಂಬಿಕೆಯ ಆಸರೆ, ಪ್ರತ್ಯೇಕ ಉದ್ದೇಶವುಳ್ಳ ದುಡಿಮೆ ಅಥವಾ ವಿಸ್ತೃತ ಕೆಲಸಕಾರ್ಯಗಳ ಬೆಂಬಲ ಲಭ್ಯವಾಗುತ್ತದೆ. ಅದರಲ್ಲಿ ಪರಿಸರ ವ್ಯವಸ್ಥೆಯಂತೆ ವಿವಿಧ ಪಾತ್ರಧಾರಿಗಳು ದುಡಿಯುತ್ತಾರೆ ಹಾಗೂ ಅದರಲ್ಲಿ ಸಂಯೋಜನೆ ಪಾಲುಗಾರಿಕೆ ನಿರ್ಮಾಣ ಸಂಬಂಧಿತ ಪರಿಕಲ್ಪನೆಗಳಿರುತ್ತವೆ. ಪರವಾದ ಒಂದು ಸಂಸ್ಥೆಯ ನೀತಿ, ವಿನ್ಯಾಸ, ಸಂಸ್ಥೆಗಳ ಕಾರ್ಯಕ್ರಮಗಳ ಮಾರ್ಪಾಟಿನಂತಹ ನಿಯೋಜಿತ ಕ್ರಿಯೆಯಲ್ಲಿ ಮಗ್ನವಾಗಿರುತ್ತದೆ. ಪರವಾದದ ಕ್ರಿಯೆಗಳನ್ನು ಬುಡಮಟ್ಟದಿಂದ ಸಮಾಜದ ಉನ್ನತ ಹಂತದವರೆಗಿನ ವಿನ್ಯಾಸದವರೆಗೂ ಉಪಕ್ರಮಿಸಬಹುದು. ಲಾಬಿ ಮಾಡುವುದು ಎಂದರೆ ವೈಯಕ್ತಿಕ ಮತ್ತು ಅನೌಪಚಾರಿಕ

ವಿಚಾರ ವಿನಿಮಯದಿಂದ ತೀರ್ಮಾನ ತೆಗೆದುಕೊಳ್ಳುವವರ ಮೇಲೆ ಪ್ರಭಾವ ಬೀರುವುದು. ಹಕ್ಕು ಆಧಾರಿತ ಅಭಿವೃದ್ಧಿ ಪ್ರಕ್ರಿಯೆಯ ಅಗಾಧತೆ ಮತ್ತು ಸಂಕೀರ್ಣತೆಯನ್ನು ಗಮನಿಸಿದಾಗ ಸಮುದಾಯದ ಸದಸ್ಯರು "ನನ್ನ ಮಾರ್ಗ" ಅಥವಾ "ರಾಜ ಮಾರ್ಗ" ವಿಧಾನವನ್ನು ಕೈಬಿಟ್ಟು ಇತರ ಸಂಸ್ಥೆಗಳೊಂದಿಗೆ ಕೈಜೋಡಿಸಿ ಕೊಳ್ಳುವುದು ಶ್ರೇಯಸ್ಕರ. ಈ ವಿಧಾನದಲ್ಲಿ ಮಾಧ್ಯಮ, ವ್ಯಕ್ತಿಗಳು, ಕಾರ್ಯಕರ್ತರು, ಪರಿಣಿತರು, ಸ್ಥಳೀಯ ಆಡಳಿತ ಮತ್ತು ಇತರರನ್ನು ಜಾಲತಾಣದ ಮುಖಾಂತರ ಪರವಾದದ ಕಾರ್ಯಕ್ರಮಗಳನ್ನು ಉಪಕ್ರಮಿಸಬೇಕಾಗುತ್ತದೆ.

ವ್ಯವಸ್ಥಿತವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಬಹುದು. ಹಾಗೂ ಆಗಿಂದಾಗ್ಗೆ ಪುನರಾವಲೋಕನ ಮಾಡಬಹುದು. ಸಹಯೋಗ ಮತ್ತು ಜಾಲತಾಣ ವಿವಿಧ ಕೌಶಲ್ಯ, ಪರಿಣತೆ ಮತ್ತು ಅನುಭವಗಳಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತವೆ ಹಾಗೂ ಕೆಲವು ಬಾರಿ ಅಗತ್ಯ ಸಂಪನ್ಮೂಲ ಹಾಗೂ ವಿಸ್ತೃತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಧಿಕ ಜನರನ್ನು ಸಮದೂಗಿಸುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಸಂಕೀರ್ಣ ವಿಷಯಗಳಿಗೆ ನೆರವು ವಿಶೇಷವಾಗಿ ನೀತಿ ಸಂಹಿತೆ ಸಂಬಂಧಿತ ಕಾರ್ಯಕ್ರಮಗಳಿಗೆ ಸಾಮೂಹಿಕ ಶಕ್ತಿ ಮತ್ತು ಕ್ರಿಯಾತ್ಮಕತೆ ಅಗತ್ಯವಾಗಿರುತ್ತದೆ. ಇದೆಲ್ಲದರ ಮುಂದೆ ಪ್ರಮುಖವಾಗಿ ವಿವಿಧ ಸಹಕಾರಿಗಳು, ಸಂಘಟನೆ, ಸಮುದಾಯಗಳು ಮತ್ತು ಜಾಲತಾಣಗಳೊಂದಿಗೆ ಸಮಾನ ಆಸಕ್ತಿ ಹಾಗೂ ಗುರಿಯೊಂದಿಗೆ ಕೈ ಜೋಡಿಸುವುದನ್ನು ಮುನ್ನೋಡಲಾಗಿದೆ.

## ಸೂಕ್ತ ಸಮಯ

ಈ ಹಂತದಲ್ಲಿ ಗುಂಪುಗಳು ಮತ್ತು CBOಗಳು ತಮ್ಮದೇ ಆದ ಅಸ್ತಿತ್ವ ಮತ್ತು ಕಾರ್ಯಕ್ರಮಗಳಾಗಿ ಸಬಲ ಘಟಕಗಳಾಗಿ ಬೆಳೆದಿರಬೇಕೆಂದು ಊಹಿಸಲಾಗುತ್ತಿದೆ. ಇವುಗಳ ಗೈರುಹಾಜರಿಯಲ್ಲಿ ಅವುಗಳನ್ನು ಇತರೆ ಆಸಕ್ತಿಯುಳ್ಳ ಗುಂಪುಗಳು ಅವನ್ನು ದತ್ತು ತೆಗೆದುಕೊಳ್ಳಬಹುದು. ಸಹಯೋಗ ಮತ್ತು ಜಾಲತಾಣಗಳು ತಮ್ಮ ಕಾರ್ಯ ವಿಧಾನವನ್ನು ಪ್ರಕಟಿಸುತ್ತಿರುವಂತೆ ಇವು ವಿಶೇಷವಾಗಿ ಸಮುದಾಯದ ಮುಖಂಡರು ಮತ್ತು ಕರ್ತವ್ಯ ನಿರ್ವಾಹಕರೊಂದಿಗೆ ಮಧ್ಯಂತರದಲ್ಲಿ ಸಂಪೂರ್ಣವಾಗಿ ಇತರ ಹಂತದ ಭಾಗವಾಗಬೇಕು.

## ಸಾಗುವ ಮಾರ್ಗಗಳು

- ಇಷ್ಟರಲ್ಲಿ ಸಮಾನ ಮನಸ್ಕ ಸಂಸ್ಥೆಗಳು, ಜಾಲತಾಣಗಳು, ಸಂಚಲನಗಳು, ವ್ಯಕ್ತಿಗಳು, ಕಾರ್ಯಕರ್ತರು ಮತ್ತು ಮಾಧ್ಯಮ (ಇದನ್ನು ನಾವು ಪ್ರಾಯೋಜಿತ ಸಹಯೋಗಿಗಳು ಎನ್ನುತ್ತೇವೆ) ಸ್ಥಳೀಯ, ಘಟಕ, ಜಿಲ್ಲೆ ಅಥವಾ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡು ದತ್ತ ಮಾಹಿತಿಯನ್ನು ಸಿದ್ಧ ಮಾಡಬಹುದು. ಅವುಗಳೊಂದಿಗೆ ಗುಂಪುಗಳು ಮತ್ತು CBOಗಳು ಜೊತೆಯಾಗಿ ಕೆಲಸ ಮಾಡಬಹುದು. ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಬಹುದು ಹಾಗೂ ಸಾಮೂಹಿಕ ಚಟುವಟಿಕೆಗಳನ್ನು ಹಮ್ಮಿ ಕೊಳ್ಳಬಹುದು.
- ಸಾಮರ್ಥ್ಯವುಳ್ಳ ಸಹಯೋಗಿಗಳನ್ನು ಇಮೇಲ್, ದೂರವಾಣಿ, ಸಭೆ ಸಮ್ಮೇಳನಗಳಲ್ಲಿ ಸಂಧಿಸಿ, ಕಾರ್ಯಾಗಾರಗಳಲ್ಲಿ ಭೇಟಿಯಾಗಿ ಕೆಲಸದ ಬಗ್ಗೆ ವಿಚಾರಿಸುತ್ತಾ ಅವರನ್ನು ಆಲಿಸುತ್ತಾ ಸಂಪರ್ಕವನ್ನು ಕಲ್ಪಿಸಿಕೊಳ್ಳಿ.
- CBOಗಳ ಮುಖಂಡರು ವಿವಿಧ ಸಾಮಾನ್ಯ ಸಮಿತಿ ಮತ್ತು ಇತರೆ ಗುಂಪುಗಳೊಂದಿಗೆ ಕೆಲಸ ಮಾಡುತ್ತಿದ್ದು ಅಥವಾ ಇತರೆ ಗುಂಪುಗಳೊಂದಿಗೆ ಸಹಪಾಠಿಗಳಾಗುವಂತೆ ಉತ್ತೇಜಿಸಿರಿ.
- ಸಮರ್ಥ ಸಮಾನ ಮನಸ್ಕ ಗೆಳೆಯರು ಮತ್ತು ಮಿತ್ರ ಸಂಘಟನೆಗಳೊಂದಿಗೆ ಸಂಪರ್ಕ ಬೆಳೆಸಿ ಅವರೊಡನೆ ಸಾಮಾನ್ಯ ಕ್ರಿಯಾ ಯೋಜನೆಯ ಬಗ್ಗೆ ಚರ್ಚಿಸಲು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನೆರವಾಗಿರಿ.



- ಪರವಾದ ಕಾರ್ಯಗಳಲ್ಲಿ ಮಗ್ನವಾಗಿರುವ ಗುಂಪುಗಳನ್ನು ಕಂಡುಕೊಂಡು ಸದಸ್ಯರು ಅವರೊಂದಿಗೆ ಸೇರಿಕೊಳ್ಳಲು ಆಗ್ರಹಿಸಿರಿ.
- ಬಡವರ ಪರ ಆಂದೋಲನ ಮತ್ತು ಕಾರ್ಯಕ್ರಮಗಳನ್ನು ಜಾಲತಾಣ ಮತ್ತು ಇತರೆ ಸಂಸ್ಥೆಗಳು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಏರ್ಪಡಿಸಿದಾಗ ಅವುಗಳಲ್ಲಿ ಸದಸ್ಯರು ಪಾಲ್ಗೊಳ್ಳುವಂತೆ ಮಾರ್ಗದರ್ಶನ ಮಾಡಿರಿ. ಇಂತಹ ಬಾಹ್ಯ ಕಾರ್ಯಕ್ರಮಗಳು ಸಮುದಾಯದ ಸದಸ್ಯರು ಕೌಶಲ್ಯಗಳನ್ನು ಗಳಿಸಿಕೊಳ್ಳಲು ಸಹಕಾರಿಯಾಗಿವೆ. ಅವು ಸ್ಥಳೀಯವಾಗಿ ಪರವಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಕ್ಕು ಮತ್ತು ಅರ್ಹತೆಯನ್ನು ಸರಕಾರದ ಅಧಿಕಾರಿಗಳಿಂದ ಪಡೆದುಕೊಳ್ಳಲು ಶಕ್ತವಾಗುತ್ತವೆ.
- ಸಮುದಾಯದ ಸದಸ್ಯರು ಇತರೆ ಸಂಸ್ಥೆಗಳಾದ ಶಾಲಾ ಸಮಿತಿ, ಆರೋಗ್ಯ ಸಮಿತಿ, ಮತ್ತು ಅಭಿವೃದ್ಧಿ ಸಮಿತಿಗಳ ಸದಸ್ಯತ್ವವನ್ನು ಪಡೆದುಕೊಳ್ಳಲು ಪ್ರೋತ್ಸಾಹಿಸಿರಿ. ಹೀಗೆ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಗೆ ತಮ್ಮ ಕೊಡುಗೆಯನ್ನು ನೀಡುವ ಸದಾವಕಾಶವನ್ನು ಪಡೆಯಬಹುದು.
- ಗುಂಪುಗಳು ಮತ್ತು CBOಗಳಿಗೆ ಪಂಚಾಯತ್ ರಾಜ್ ಸಂಸ್ಥೆಯ ಬಗ್ಗೆ ತಿಳಿಸಿರಿ. ಈ ಸಂಸ್ಥೆ ಸ್ಥಳೀಯ ಆಡಳಿತ ಘಟಕವಾಗಿರುವುದರಿಂದ ಅದರಲ್ಲಿ ಭಾಗವಹಿಸುವುದು ಅವರ ಹಕ್ಕಾಗಿರುತ್ತದೆ. ಸಮುದಾಯದ ಸದಸ್ಯರು ವಿಶೇಷವಾಗಿ ಮಹಿಳಾ ಸದಸ್ಯರನ್ನು ಅಭ್ಯರ್ಥಿಗಳಾಗಿ ಚುನಾವಣೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿರಿ.
- CBOಗಳ ಮುಖಂಡರನ್ನು ಲೋಕೋಪಯೋಗಿ ಸಂಘಟನೆ ಮತ್ತು CSR ಸಂಸ್ಥೆಗಳಿಗೆ ಪರಿಚಯ ಮಾಡಿಕೊಡಿ. CBO ಮುಖಂಡರು ತಮ್ಮ ಗುಂಪನ್ನು ನೋಂದಾಯಿತ ಸಂಸ್ಥೆಯನ್ನಾಗಿಸುವಂತೆಯೂ, ಮಾರ್ಗದರ್ಶನ ಮಾಡಿ. ಹೀಗೆ ಅವರು ಸಮರ್ಥ ಸಹಪಾಠಿಗಳಾಗಿ ಸಮುದಾಯದ ಕಲ್ಯಾಣಕ್ಕಾಗಿ ದುಡಿಯಲು ಸಾಧ್ಯವಾಗುವಂತೆ ಅದರೊಂದಿಗೆ ಅಧಿಕೃತ ಒಪ್ಪಂದ ಮಾಡಿಕೊಳ್ಳಲು ನೆರವಾಗಿರಿ.

- ಸದಸ್ಯರು ತಮ್ಮ ಕ್ಷೇತ್ರದಲ್ಲಿ ಸ್ಥಳೀಯ ಸರಕಾರಿ ಅಧಿಕಾರಿಗಳು ಅನುಷ್ಠಾನಕ್ಕೆ ತರುವ ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳ ಮೇಲೆ ನಿಗಾ ಇಡುವಂತೆ ಮಾರ್ಗದರ್ಶನ ಮಾಡಿ. ಅಂತೆಯೇ ಸರಕಾರದ ವತಿಯಿಂದ ಯಾವುದೇ ವಿಫಲತೆ ಮತ್ತು ಕೊರತೆಯಾದರೆ ಅಧಿಕಾರಿಗಳಿಂದ ಉತ್ತರದಾಯಿತ್ವಕ್ಕೆ ಬೇಡಿಕೆ ಇಡಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಸೂಚನೆಗಳು

- ಪರಿಪೂರಕ ಸೂತ್ರ ಅಥವಾ ಸಹದುಡಿಮೆಯ ಸಂಸ್ಕೃತಿಯನ್ನು ಅಧಿಕ ಪ್ರಯೋಜನಕ್ಕಾಗಿ ರೂಢಿಸಿಕೊಳ್ಳಲು ಆಗ್ರಹಿಸಿ.
- ಸ್ವಾವಲಂಬಿತ ಪರಿವರ್ತನೆಗೆ ಹಿತಾಸಕ್ತಿ ಮತ್ತು ಜನಶಕ್ತಿಯ ಪ್ರಭಾವ ಅತ್ಯಗತ್ಯ.
- ಸಹಯೋಗ, ಬಾಂಧವ್ಯ ಮತ್ತು ಜಾಲತಾಣಗಳು ಪ್ರಗತಿಪರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶವನ್ನು ನೀಡುತ್ತದೆ. ಮಾತ್ರವಲ್ಲ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲೂ ಸಹಾಯಕವಾಗಿದೆ.
- ಸಹ ದುಡಿಮೆ, ದುಪ್ಪಟ್ಟು ಕೆಲಸ, ಸಂಪನ್ಮೂಲಗಳ ಸೋರಿಕೆಯನ್ನು ತಡೆಯುತ್ತದೆ. ಪ್ರತಿಯೊಬ್ಬರಿಂದ ಉತ್ತಮವಾದುದನ್ನು ಸಂಗ್ರಹಿಸಲೂ, ಇತರರಿಂದ ಕಲಿಕೆಗೂ ದಾರಿಯಾಗುತ್ತದೆ.
- ಕೆಲವು ಸ್ಥಳಗಳಲ್ಲಿ ಹಲವಾರು ಸಂಸ್ಥೆಗಳು ವಿವಿಧ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ ಮತ್ತು ಸೌಖ್ಯ ಸೇವೆ, ಹಕ್ಕು, ಅಪಹರಣ, ಮನೆ ಕೆಲಸದವರು, ಮಕ್ಕಳು ಮತ್ತು ಯುವಜನರು ವಿಭಾಗದಲ್ಲಿ ದುಡಿಯತ್ತವೆ. ಇಲ್ಲಿ ಜಾಲತಾಣದ ಸದಸ್ಯರಲ್ಲಿ ಸಹಯೋಗವಿದ್ದಲ್ಲಿ ಅದು ಸಮುದಾಯದ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗುತ್ತದೆ.
- ಜಾಲತಾಣ ಪರವಾದದ ನೀತಿಗೆ ಮಹತ್ತಾದ ಅವಕಾಶವನ್ನು ಕಲ್ಪಿಸುವುದಲ್ಲದೆ ಸಮಸ್ಯೆಗಳ ಮೂಲ ಕಾರಣಗಳನ್ನು ಎದುರಿಸಲೂ ನೆರವಾಗುತ್ತದೆ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಎಚ್ಚರಿಕೆಗಳು

- "ನನ್ನ ಮಾರ್ಗ" ಅಥವಾ "ರಾಜಮಾರ್ಗ" ಸಂಸ್ಕೃತಿಯನ್ನು ಉತ್ತೇಜಿಸಬೇಡಿ ಮತ್ತು ಇತರರು ಅದನ್ನು ಸೇರುವುದನ್ನು ಪ್ರೋತ್ಸಾಹಿಸಬೇಡಿ.
- ಜನರು ವಿಭಿನ್ನ ಹಿತಾಸಕ್ತಿಯಿಂದ ದುಡಿಯುವುದರಿಂದ ಸಹಯೋಗ ಮತ್ತು ಜಾಲತಾಣದ ಅನುಷ್ಠಾನಕ್ಕೆ ಸಮಯ ಹಿಡಿಯಬಹುದು.
- ಕೆಲವು ಬಾರಿ ಸಾಮಾನ್ಯ ಕ್ರಿಯಾ ಯೋಜನೆ ಮತ್ತು ನಿಯೋಜಿತ ಕಾರ್ಯಕ್ರಮದೊಂದಿಗೆ ಶಾಮೀಲಾಗಲೂ ಕೆಲವು ಗುಂಪುಗಳು ತಮ್ಮ ಯೋಜನೆಯೊಂದಿಗೆ ರಾಜಿ ಮಾಡಿಕೊಳ್ಳಬೇಕಾಗಬಹುದು.
- ಕೆಲವು ಸಹಭಾಗಿಗಳು ಅಥವಾ ಸಂಸ್ಥೆಗಳು ಸಾರ್ವಜನಿಕ ಮಾನ್ಯತೆಯನ್ನು ತಮಗಾಗಿ ಕಬಳಿಸಬಹುದು ಅಥವಾ ತಮ್ಮ ಕೆಲಸಕ್ಕಿಂತ ಅಧಿಕ ಗೌರವವನ್ನು ಪಡೆಯಬಹುದು.
- ವಿವಿಧ ಸಂಸ್ಥೆಗಳ ಮಧ್ಯೆ ಪೈಪೋಟಿ ನಮ್ಮ ಪ್ರಕ್ರಿಯೆಗೆ ಹಿಂದೇಟು ಹಾಕಲೂಬಹುದು.

- ಸಂಸ್ಥೆಗಳು ಮತ್ತು ಸಮುದಾಯದ ಸದಸ್ಯರು ಸಂಬಂಧದಲ್ಲಿ ಸಂಸ್ಥೆಗಳು ಕರ್ತವ್ಯ ನಿರ್ವಾಹಕರೂ ಮತ್ತು ಸಮುದಾಯದ ಸದಸ್ಯರು ಹಕ್ಕು ವಾಹಕರಾಗಿರುತ್ತಾರೆ. ಜನರು ರಚನಾತ್ಮಕವಾಗಿ ಸಹಯೋಗದಲ್ಲಿರಲು ಸಿದ್ಧವಾಗಿರಬೇಕು. ಅಗತ್ಯವೆನಿಸಿದರೆ ಪರಿಪೋಷಕ ಸಂಸ್ಥೆಗೂ ಸವಾಲನ್ನು ಎಸೆಯಬಹುದು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಸೂಚಿಗಳು

1. CBOಗಳು xxx ಸಮರ್ಥ ಮಿತ್ರರನ್ನು ಮತ್ತು xxx ಸಮಾನ ಮನಸ್ಕ ಸಂಸ್ಥೆಗಳನ್ನು ತಮ್ಮ ಗ್ರಾಮಕ್ಕೆ ಸಮೀಪದಲ್ಲಿ ಕೆಲಸ ಮಾಡುವುದನ್ನು ಗುರುತಿಸಿರುತ್ತದೆ.
2. xxx CBOಗಳು ತಮ್ಮ ಕೆಲಸ ಕಾರ್ಯಗಳನ್ನು ಮಾಡುವುದರ ಜೊತೆಗೆ ಸಂಕ್ಷಿಪ್ತ ಮಾಹಿತಿ ಕೈಪಿಡಿಯನ್ನು ಸಿದ್ಧ ಮಾಡಿರುತ್ತದೆ.
3. xxx ಸಭೆಗಳಲ್ಲಿ CBO ಮತ್ತು ಸಮಾನ ಮನಸ್ಕ ಸಂಸ್ಥೆಗಳೊಂದಿಗೆ ಹಮ್ಮಿಕೊಳ್ಳಲಾಗಿದೆ ಹಾಗೂ ವಿಷಯಗಳನ್ನು ಚರ್ಚಿಸಲಾಯಿತು.
4. xxx ಮುಖಂಡರು ಮತ್ತು ಸಮುದಾಯದ ಸದಸ್ಯರು ಜಾಲತಾಣಗಳು ಏರ್ಪಡಿಸಿದ xxx ಜಿಲ್ಲಾ, xxx ರಾಜ್ಯ, xxx ರಾಷ್ಟ್ರ ಮಟ್ಟದ ಕಾರ್ಯಕ್ರಮ ಮತ್ತು ಆಂದೋಲನಗಳಲ್ಲಿ ಪಾಲ್ಗೊಂಡಿರುತ್ತಾರೆ.
5. xxx ತಳಮಟ್ಟದ ಪರವಾಗಿ ಚಟುವಟಿಕೆಗಳನ್ನು ನಡೆಸಲಾಯಿತು.
6. xxx ಸಮುದಾಯದ ಸದಸ್ಯರು ಶಾಲಾ ಸಮಿತಿ, ಆರೋಗ್ಯ ಸಮಿತಿ ಮತ್ತು ಅಭಿವೃದ್ಧಿ ಸಮಿತಿಯ ಸದಸ್ಯರಾಗಿರುತ್ತಾರೆ.
7. xxx ಗುಂಪುಗಳ ಸದಸ್ಯರು ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ xxx ಚುನಾಯಿತರಾಗಿರುತ್ತಾರೆ.
8. xxx ಜನೋಪಯೋಗಿ ಸಂಸ್ಥೆಗಳನ್ನು ಅಥವಾ CSRನ್ನು ಸಂಪರ್ಕಿಸಲಾಗಿದೆ. CBOಗಳ ಸಂಕ್ಷಿಪ್ತ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ.
9. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

### ಸಹಯೋಗದ ಸಹಪಾಠಿಗಳ ಆಯೋಜನೆ

| ಸಹಯೋಗದ ಸಹಪಾಠಿಗಳ ಆಯೋಜನೆ | | | | | | |
|---|---|---|---|---|---|---|
| | ವ್ಯಕ್ತಿಗಳು | | ಸಂಸ್ಥೆಗಳು ಮತ್ತು ಸಂಚಲನಗಳು | | ಸಾಂಸ್ಥಿಕ ಬೆಂಬಲ | |
| CBO ಹೆಸರು | ಹೆಸರು ಮತ್ತು ಸಂಪರ್ಕ ವಿವರ | ಸಮರ್ಥ ವಿಷಯಗಳು ಮತ್ತು ಸಮಸ್ಯೆಗಳು | ಹೆಸರು ಮತ್ತು ಸಂಪರ್ಕ ವಿವರ | ಸಮರ್ಥ ವಿಷಯಗಳು ಮತ್ತು ಸಮಸ್ಯೆಗಳು | ಹೆಸರು ಮತ್ತು ಸಂಪರ್ಕ ವಿವರ | ಸಮರ್ಥ ವಿಷಯಗಳು ಮತ್ತು ಸಮಸ್ಯೆಗಳು |
| | | | | | | |
| | | | | | | |
| | | | | | | |
| | | | | | | |
| | | | | | | |

## ಸಂಪನ್ಮೂಲ ಸಹಪಾಠಿಗಳ ಆಯೋಜನೆ

| ಸಂಪನ್ಮೂಲ ಸಹಪಾಠಿಗಳ ಆಯೋಜನೆ | | | | | | |
|---|---|---|---|---|---|---|
| | ವ್ಯಕ್ತಿಗಳು | | CSR ಅಥವಾ ಸರಕಾರಿ ಮೂಲ | | | |
| CBO ಹೆಸರು | ಹೆಸರು ಮತ್ತು ಸಂಪರ್ಕ ವಿವರ | ಹಿತಾಸಕ್ತಿ ವಿಭಾಗಗಳು ಮಾನವ ಸಂಪನ್ಮೂಲ ಅಥವಾ ಆರ್ಥಿಕ ಬೆಂಬಲ | ಹೆಸರು ಮತ್ತು ಸಂಪರ್ಕ ವಿವರ | ಹಿತಾಸಕ್ತಿ ವಿಭಾಗಗಳು ಮಾನವ ಸಂಪನ್ಮೂಲ ಅಥವಾ ಆರ್ಥಿಕ ಬೆಂಬಲ | ಹೆಸರು ಮತ್ತು ಸಂಪರ್ಕ ವಿವರ | ಹಿತಾಸಕ್ತಿ ವಿಭಾಗಗಳು ಮಾನವ ಸಂಪನ್ಮೂಲ ಅಥವಾ ಆರ್ಥಿಕ ಬೆಂಬಲ |
| CBO 1 | | | | | | |
| CBO 2 | | | | | | |
| CBO 3 | | | | | | |
| CBO 4 | | | | | | |
| CBO 5 | | | | | | |

ಗಮನಿಸಿ: ಇಂತಹ ನಮೂನೆಗಳು ಜಾಲತಾಣ ಮತ್ತು ಪರವಾಗಿ ವಿಷಯಗಳಿಗೆ ಪ್ರಯೋಜನಕಾರಿ.



## ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

1. CBO ಮತ್ತು ಗುಂಪುಗಳ ಸಹಯೋಗ, ಜಾಲತಾಣ ಮತ್ತು ಪರವಾದದ ಉಪಕ್ರಮದ ಬಗ್ಗೆ ಅನುಭವಗಳೇನು? ಸದಸ್ಯರ ಸಾಮರ್ಥ್ಯ, ಕಲಿಕೆ ಮತ್ತು ಸವಾಲುಗಳೇನು?
2. CBO ಮುಖಂಡರು ಇತರರೊಂದಿಗೆ ಕೆಲಸ ಮಾಡುವ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವರೇ? ಅವರ ನೆಮ್ಮದಿಯ ಅಥವಾ ತೊಡಕಿನ ಕ್ಷೇತ್ರಗಳಾವುವು?
3. ಹಕ್ಕು ಆಧಾರಿತ ಅಭಿವೃದ್ಧಿ ಕ್ರಿಯೆಗೆ ಸಹಯೋಗ ಮತ್ತು ಜಾಲತಾಣ ಪ್ರಯತ್ನಗಳು ಯಾವ ವಿಧದಲ್ಲಿ ಮೌಲ್ಯವನ್ನು ಕೊಡಿಸಿದೆ?
4. ಸಹಯೋಗದ ಕಾರ್ಯಗಳನ್ನು ಅಭಿವೃದ್ಧಿಪಡಿಸಲು CBOಗಳಿಗೆ ಯಾವ ವಿಷಯದ ಪ್ರದೇಶ ಸಹಾಯಕವಾಗಿದೆ? ಹೇಗೆ?
5. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಆಡಳಿತ ವ್ಯವಸ್ಥೆಗೆ ಸೇರ್ಪಡೆಯಾಗಿ ನಿಮ್ಮ ಸ್ವರವನ್ನು ಎತ್ತಿರಿ

ಪರಿಪೋಷಕ ಸಂಸ್ಥೆಗಳಿಂದ ಕ್ಷೇತ್ರ ಮತ್ತು ಜಿಲ್ಲಾ ಮಟ್ಟದಲ್ಲಿ ಸಹಯೋಗ ಮತ್ತು ಜಾಲತಾಣದ ಕೆಲವು ಚಿಹ್ನೆಗಳಿದ್ದವು. ಆದರೆ ಪರಿಪೋಷಕ ಸಂಸ್ಥೆಗಳ ಸಿಬ್ಬಂದಿ ಸಮುದಾಯದ ಮುಖಂಡರಿಗಿಂತ ಪ್ರಮುಖ ಪಾತ್ರವಹಿಸಿತು. ಇದರಲ್ಲಿ ಪ್ರಶಂಸನೀಯ ಅಂಶವೇನೆಂದರೆ ಸಮುದಾಯಗಳ ಮತ್ತು ಗುಂಪುಗಳ ಮುಖಂಡ ಸ್ಥಳೀಯ ಸಂಸ್ಥೆಗಳ ವಿವಿಧ ಸಭೆಗಳಿಗೆ ತಪ್ಪದೆ ಹಾಜರಾಗುತ್ತಿದ್ದರು. ಕೆಲವರು ಶಾಲಾ ಸಮಿತಿ, ಗ್ರಾಮಾಭಿವೃದ್ಧಿ ಸಮಿತಿ ಮತ್ತು ಆರೋಗ್ಯ ಸಮಿತಿಯ ಸದಸ್ಯರಾಗಿದ್ದರು ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಯ ಸಹಯೋಗದಲ್ಲಿದ್ದರು. ಈ ಸಭೆಗಳು ಮುಖಂಡರಿಗೆ ಸಮುದಾಯದ ಹಿತಾಸಕ್ತಿಗಳ ಬಗ್ಗೆ ಪರವಾದಿಸಲು ಅವಕಾಶ ಕೊಟ್ಟವು. ಇಂತಹ ಸಕಾರಾತ್ಮಕ ಸಂಬಂಧ ಸಾರ್ವಜನಿಕ ಸಂಸ್ಥೆಗಳಿಗೆ ಕ್ರಿಯಾತ್ಮಕವಾಗಿ ಆಗುತ್ತಿದ್ದ ತೊಡಕುಗಳನ್ನು ನಿವಾರಿಸಲು ಖಚಿತ ಆಶ್ವಾಸನೆಯನ್ನಿತ್ತಿತು.

CHAPTER 11

# ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆ



# ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆ

## ಉದ್ದೇಶ

ಸಮುದಾಯದ ಸಂಚಲನದ ಇನ್ನೊಂದು ಪ್ರಮುಖ ಅಂಶವೆಂದರೆ ಸ್ವಯಂ ಸೇವಾ ಮನೋಭಾವ ಮತ್ತು ಸದಸ್ಯರಲ್ಲಿ ಕೊಡುವ ಮತ್ತು ಹಂಚಿಕೊಳ್ಳುವ ಪ್ರವೃತಿಯನ್ನು ಪೋಷಿಸುವುದು. ಸ್ವಯಂ ಸೇವೆ ಎಂದರೆ ಸಮಯ ಮತ್ತು ಶ್ರಮವನ್ನು ಸಮಾಜ ಮತ್ತು ಸಮುದಾಯದ ಪ್ರಯೋಜನಕ್ಕಾಗಿ ಸಮರ್ಪಿಸುವುದು. ಅದನ್ನು ಹಣಕಾಸು ಅಥವಾ ಇತರ ಉಪಕಾರದ ಫಲಾಪೇಕ್ಷೆಯಿಲ್ಲದೆ ಉಚಿತವಾಗಿ ನೀಡುವುದು. ಸ್ವತಂತ್ರ ಮತ್ತು ಸೌಜನ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದನ್ನು "ಸೀನೆಕ್ವಾನಾನ್" ಅಂದರೆ ಅವಿಭಾಜ್ಯ ಶರತ್ತಾಗಿದೆ. ಸ್ವಯಂ ಸೇವೆ ಸಮಯ, ಕೌಶಲ್ಯ ಮತ್ತು ಸಾಮರ್ಥ್ಯದ ಮನೋಭಾವವನ್ನು ಸದಸ್ಯರು ವ್ಯಕ್ತಪಡಿಸುದರಲ್ಲಿ ಅಡಕವಾಗಿದೆ. ಅವರು ಸ್ವತಂತ್ರವಾಗಿ ಕೊರತೆಯುಳ್ಳವರಿಗೆ ಅಥವಾ ಸಮುದಾಯದ ಹಿತಾಸಕ್ತಿಗಳಗೆ ಸೇವೆಯನ್ನು ಸಲ್ಲಿಸುವುದು ಉಚಿತವಾಗಿದೆ.

ಮಾನವ ಜೀವಿಗಳಾದ ನಾವು ಒಂದು ವರ್ಗಕ್ಕೆ ಸೇರಿದವರು ಮತ್ತು ಈ ಭಾವನೆ ಮುಂದುವರಿಯುವುದರಿಂದ ನಾವು ಪರಸ್ಪರ ಸಂಬಂಧಿತರಾಗುತ್ತೇವೆ. ಈ ಅವಲಂಬನೆ ನಮ್ಮನ್ನು ಸಂಬಂಧಗಳ ಜಾಲದಲ್ಲಿ ನಮ್ಮನ್ನು ಬಂಧಿಸುತ್ತದೆ. ಹಂಚಿಕೊಳ್ಳುವ ಮನೋಭಾವ ಕೇವಲ ಒಂದು ಕ್ರಿಯೆಯಾಗದೆ ಜೀವನ ಸಂಸ್ಕೃತಿ, ಜೀವನ ಶೈಲಿಯಾಗಿ ಅಪರೂಪ ವಾಸ್ತವತೆಯಾಗುತ್ತದೆ. ಸಾಮಾನ್ಯವಾಗಿ ವಿಪತ್ತು ಮತ್ತು ವಿಕೋಪದ ಸಂದರ್ಭದಲ್ಲಿ ಅನೇಕ ಜನರು ನೆರವನ್ನು ನೀಡಲು ಮುಂದೆ ಬರುತ್ತಾರೆ. "ಅನ್ಯೋನ್ಯತೆ" ಅಥವಾ "ಹಂಚಿಕೆಯ ಸಮುದಾಯ"ಗಳನ್ನು ಇಂದೂ ನಾವು ಗ್ರಾಮೀಣ ಮತ್ತು ಆದಿವಾಸಿ ಸಮುದಾಯಗಳಲ್ಲಿ ಕಾಣಬಹುದು. ಕೊಳ್ಳುಬಾಕತನ ಸಂಸ್ಕೃತಿ ಇದನ್ನು ನಾಶಪಡಿಸಿದೆ. ಬಡವರನ್ನು ಮತ್ತು ಕೊರತೆಯುಳ್ಳವರನ್ನು ಸಂರಕ್ಷಿಸುವುದು ಮಾನವತೆಯ ದೈವೀಗುಣವಾಗಿದೆ. ಮಾನವತೆಗಾಗಿ ಸ್ಪಂದಿಸುವವರು ಅನುಕಂಪದ ಲಕ್ಷಣವನ್ನು ಬೆಳೆಸಿಕೊಳ್ಳುತ್ತಾರೆ. ಅಂತೆಯೇ ಅನುಭೂತಿಯುಳ್ಳವರು,



ತಮ್ಮಲ್ಲಿರುವ ಅಲ್ಪವನ್ನೂ ಹಂಚಿಕೊಳ್ಳಲು ಮುಂದಾಗುತ್ತಾರೆ. ಸಮುದಾಯದಲ್ಲಿ ಪ್ರತಿಯೊಬ್ಬ ಸದಸ್ಯನನ್ನು ಘನತೆ ಮತ್ತು ಗೌರವದಿಂದ ಕಂಡಾಗ ಅದನ್ನು ನೈಜ ಸಮುದಾಯವೆಂದು ಕರೆಯಬಹುದು. ಆ ಸಮುದಾಯ ಸಾಮಾನ್ಯ ಒಳಿತು, ಸೌಹಾರ್ದ ಮತ್ತು ಸೋದರತ್ವದ ಸಿದ್ಧಾಂತದ ಮೇಲೆ ನೆಲೆಯಾಗಿರುತ್ತದೆ. ಹಂಚಿಕೆಯ ಸಮುದಾಯದಲ್ಲಿ ಪರಿಪಕ್ವತೆ ಮತ್ತು ಪ್ರಬುದ್ಧತೆಯ ಚಿಹ್ನೆಗಳು ಎದ್ದು ಕಾಣುತ್ತವೆ. ಕೊಡುವುದು ಅಥವಾ ಹಂಚಿಕೊಳ್ಳುವುದು ಕೇವಲ ಆರ್ಥಿಕ ಸಂಗತಿಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಮಾಹಿತಿ, ಕೌಶಲ್ಯ, ಜ್ಞಾನ, ಸುಪ್ತಶಕ್ತಿ, ದುಡಿಮೆ ಮತ್ತು ಸೇವೆಯ ಸಂತುಷ್ಟ ಕೊಡುಗೆ ಅಥವಾ ಕೇವಲ ಸಮಯದ ಕೊಡುಗೆಯೂ ಶ್ರೇಷ್ಠ ಹಂಚಿಕೆಯಾಗುತ್ತದೆ. ಸಮುದಾಯದ ಸದಸ್ಯರು ಬಡವರಾಗಿದ್ದರೂ ಅವರ ಸಂಪನ್ಮೂಲಗಳು ಕನಿಷ್ಠವಾಗಿದ್ದರೂ ಅವರು ಸಾಕಷ್ಟು ಹಂಚಿಕೊಳ್ಳಬಹುದು. ಗುಂಪುಗಳು ಮತ್ತು CBOಗಳು ಜನೋಪಯೋಗಿ ಸಂಸ್ಥೆಗಳಾಗಿ CSRನಂಥಹ ಸಂಸ್ಥೆಯಿಂದ ಸಂಪನ್ಮೂಲಗಳನ್ನು ಸ್ವೀಕರಿಸಿ ಸಮುದಾಯದ ಬಡವ ಮತ್ತು ಸಂಕಷ್ಟದಲ್ಲಿರುವವರನ್ನು ಸಂಭಾವಿಸಬಹುದು. ಬಡವರಿಗೆ ಸಹಾಯ ನೀಡಲು ಕೋರುವುದು ಅಥವಾ ಬೇಡುವುದು ಹಾಗೂ ಸಾಮಾನ್ಯ ಅಭಿವೃದ್ಧಿ ಕಾರ್ಯದಲ್ಲಿ ತೊಡಗುವುದು ಇನ್ನೊಂದು ಬಗೆಯ ಉದಾತ್ತ ಹಂಚಿಕೆಯ ವಿಧಾನವಾಗಿದೆ.

## ಸೂಕ್ತ ಸಮಯ

ಈ ಕಾರ್ಯಕ್ರಮಕ್ಕೆ ಪ್ರತ್ಯೇಕ ಸಮಯದ ಪ್ರತಿಬಂಧವಿಲ್ಲ. ಸಾಂಸ್ಕೃತಿಕತೆಯ ಭಾಗವಾಗಿರುವ ಈ ಕಾಯಕವನ್ನು ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಪ್ರಾರಂಭದಿಂದಲೂ ಪೋಷಿಸತಕ್ಕದ್ದು.

## ಸಾಗುವ ಮಾರ್ಗಗಳು

- ಸಮುದಾಯದ ಸದಸ್ಯರಿಗೆ ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆಯ ಅಭ್ಯಾಸವನ್ನು ಕಥೆ, ಘಟನೆ, ಮತ್ತು ವೈಯಕ್ತಿಕ ದಾನಿಗಳ ಉದಾಹರಣೆಗಳಿಂದ ತಿಳಿಸಿ ಅದನ್ನು ಅವರು ಮನಸಾರೆ ಅಂಗೀಕರಿಸುವಂತೆ ಮಾಡಿರಿ.
- ಸಮುದಾಯದ ಸದಸ್ಯರು ಮಾನವ ಜೀವದ ಬಗ್ಗೆ ಗೌರವ, ಪ್ರಶಂಸೆ ಹೊಂದುವಂತೆಯೂ ಮಾನವ

ಘನತೆ, ಸಮಾನತೆ, ಐಕ್ಯತೆ, ಸಾಮಾಜಿಕ ನ್ಯಾಯ, ಸೋದರತೆ, ಸಾಮಾನ್ಯ ಒಳಿತು, ಸೌಹಾರ್ದ, ಬಡವರ ಭಾದಿತರ ಪರ ಆಯ್ಕೆ, ನಿರ್ವಹಣೆ ಮತ್ತು ಸಹಭಾಗಿತ್ವವನ್ನು ಅಂಗೀಕರಿಸುವಂತೆಯೂ ಉತ್ತೇಜಿಸಿರಿ.

- ಯುವ ಜನರು, ಮಕ್ಕಳು, ಮಹಿಳೆಯರು ಮತ್ತು ಪುರುಷರು ಸ್ವಯಂ ಸೇವೆಗೆ ಮುಂದಾಗುವಂತೆಯೂ ಅವರು ತಮ್ಮ ಸಮಯ, ಕೌಶಲ್ಯ ಮತ್ತು ಶಕ್ತಿಯನ್ನು ಅರ್ಪಿಸುವಂತೆಯೂ ಅಥವಾ ಕೊರತೆಯುಳ್ಳವರಿಗೆ ಉಚಿತ ಸೇವೆಯನ್ನು ನೀಡುವಂತೆಯೂ ಪ್ರೋತ್ಸಾಹಿಸಿರಿ.
- "ಪ್ರತಿಯೊಬ್ಬ ನೀಡಲಿ–ಇನ್ನೊಬ್ಬನಿಗೆ ನೆರವಾಗಲಿ" ಎಂಬುವುದು ಆದರ್ಶ ಕ್ರಿಯಾ ಯೋಜನೆ. ಉದಾಹರಣೆಗೆ ಯುವ ಜನರು ಇತರ ಯುವ ಜನರಿಗೆ ಕೌಶಲ್ಯ ತರಬೇತಿಯನ್ನು ನೀಡುವುದು, ಅಂತೆಯೇ ಮಕ್ಕಳ ದುರ್ಬಲ ಮಕ್ಕಳಿಗೆ ವಿಧ್ಯಾಭ್ಯಾಸ ತರಗತಿಗಳನ್ನು ಏರ್ಪಡಿಸುವುದು.
- ಸಮುದಾಯದಲ್ಲಿರುವ ವಿವಿಧ ಕುಶಲತೆ ಮತ್ತು ಸಾಮರ್ಥ್ಯದ ಯುವಜನರು ಸ್ವಯಂ ಸೇವಕರಾಗಿ ಕೊರತೆಯುಳ್ಳ ಜನರೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳುವುದು.
- ಜನೋಪಯೋಗಿ ಸಂಸ್ಥೆ ಮತ್ತು CSRನಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹಾಗೂ ಸಮುದಾಯದ ಬಡವ ಮತ್ತು ಕೊರತೆಯುಳ್ಳವರಿಗೆ ನೆರವಾಗಲು ಮಾರ್ಗದರ್ಶನ ಮಾಡುವುದು.
- ಸದಸ್ಯರು ಎಲ್ಲಾ ಸಾಮಾನ್ಯ ಚಟುವಟಿಕೆಗಳಿಗೆ ದೇಣಿಗೆ ನೀಡುವಂತೆ ಹಂಚಿಕೆಯ ಸಂಸ್ಕೃತಿಯನ್ನು ಪ್ರೇರೇಪಿಸುವುದು ಒಂದು ವಿಧಾನ. ಭಾಗಿದಾರರು ತಮ್ಮ ಆಹಾರದ ಖರ್ಚುಗಳನ್ನು ವಸ್ತು ಅಥವಾ ಹಣದ ಮುಖಾಂತರ ನೀಡುವುದು.
- ಸಾಮಾನ್ಯವಾಗಿ ಸಮುದಾಯದ ಜನರು ವಿಶೇಷ ಸಂದರ್ಭಗಳಲ್ಲಿ ಅಸಾಮಾನ್ಯ ಉದಾರತೆಯನ್ನು ತೋರುತ್ತಾರೆ. ಅದು ತಮಗೆ ಪ್ರಯೋಜನಕಾರಿ ಎಂದು ಭಾವಿಸುತ್ತಾರೆ. ಸಮುದಾಯ ವಿಶೇಷ ಸಂದರ್ಭಗಳಲ್ಲಿ ತಮ್ಮ ಉದಾರತೆಯನ್ನು ಮೆರೆದು ಸ್ವಯಂ ಚಿತ್ತರಾಗಿ ದಾನವನ್ನು ಸಂಗ್ರಹಿಸಲಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಸೂಚನೆಗಳು

- ಸಮಯ, ಕೌಶಲ್ಯ ಮತ್ತು ಸಾಮರ್ಥ್ಯವನ್ನು ಚಿಕ್ಕ ಮಟ್ಟದಲ್ಲಿ ಕೂಡ ಹಂಚಿಕೊಳ್ಳಲು ಸಿದ್ಧರಿರುವ ಸದಸ್ಯರನ್ನು ಪ್ರೋತ್ಸಾಹಿಸಿರಿ.
- ಸ್ವಯಂ ಸೇವಕರ ಮೆಚ್ಚುಗೆ ಅಥವಾ ಸನ್ಮಾನ ಸಮಾರಂಭವನ್ನು ಪ್ರತಿ ವರ್ಷವೂ ಆಚರಿಸಿ. ಇತರ ಸಮುದಾಯಗಳನ್ನು ಸಚೇತನಗೊಳಿಸಿದ ಸ್ವಯಂ ಸೇವಕರನ್ನು ಗುರುತಿಸಿ ಅವರಿಗೆ ಬಹುಮಾನವನ್ನಿತ್ತು ಸನ್ಮಾನಿಸಿ.
- ಉದಾರ ಮನಸ್ಸಿನಿಂದ ಸ್ವಯಂ ಚಿತ್ತದಿಂದ ದಾನ ನೀಡುವ ದಾನಿಗಳ ಒಳಿತನ್ನು ಹಂಚಿಕೆ ಮನೋಭಾವವನ್ನು ಸಮರ್ಥಿಸಿರಿ. ಅವರನ್ನು ವೈಯಕ್ತಿಕವಾಗಿ ಹೆಸರಿಸಿ ಬಹಿರಂಗವಾಗಿ ಪ್ರಶಂಸಿಸಲು ಪ್ರತಿ ಅವಕಾಶವನ್ನು ಬಳಸಿಕೊಳ್ಳಿರಿ. ಈ ಸುಕ್ರಿಯೆ ಸ್ವಯಂ ಸೇವೆಗೆ ಮತ್ತು ಹಂಚಿಕೆಗೆ ಇತರ ಸದಸ್ಯರಿಗೆ ಪ್ರೇರಣೆಯನ್ನೀಯುತ್ತದೆ.
- ಬಡ ಜನರು ತಮ್ಮಲ್ಲಿದ್ದ ಸ್ವಲ್ಪದರಲ್ಲೂ ಕೊಡುವ ಕಾಣಿಕೆಯನ್ನು ಪ್ರಶಂಸಿಸಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಎಚ್ಚರಿಕೆಗಳು

- ಸ್ವಯಂ ಸೇವೆಯನ್ನು ಸಲ್ಲಿಸಲು ಸಮುದಾಯದ ಸದಸ್ಯರನ್ನು ಬಲಾತ್ಕರಿಸಬೇಡಿ ಅಥವಾ ತಮ್ಮ ಮನಸ್ಸಿಗೆ ವಿರುದ್ಧವಾಗಿ ಹಂಚಿಕೊಳ್ಳಲು ಒತ್ತಡ ತರಬೇಡಿ.
- ಕೆಲವು ಪ್ರಯತ್ನಗಳು ಸಮುದಾಯದಲ್ಲಿ ನಿರೀಕ್ಷಿಸಿದ ಫಲವನ್ನು ಕೊಡದೆ ಇದ್ದರೂ ನಿರಾಶರಾಗಬೇಡಿ ಅಥವಾ ನಿರುತ್ಸಾಹಿಗಳಾಗಬೇಡಿ.
- ನಿಮ್ಮ ಮನಸ್ಸು ಯಶಸ್ಸು ಅಥವಾ ಸೋಲಿನ ಮೇಲೆ ಕೇಂದ್ರೀಕೃತವಾಗದಿರಲಿ. ಅಪೇಕ್ಷಿಸಿದ ಅಥವಾ ನಿರೀಕ್ಷಿಸಿದ ಫಲ ತಕ್ಷಣ ಲಭ್ಯವಾಗದಿದ್ದರೂ ದೀರ್ಘ ಕಾಲದಲ್ಲಿ ಅದು ಫಲವನ್ನು ಕೊಟ್ಟೇ ಕೊಡುತ್ತದೆ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಸೂಚಿಗಳು

1. ಸಮುದಾಯದ XXX ಯುವ ಜನರು, XXX ಮಕ್ಕಳು, XXX ಮಹಿಳೆಯರು ಮತ್ತು XXX ಪುರುಷರು ತಮ್ಮ ಸಮಯ, ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಕೊರತೆಯುಳ್ಳ ಸದಸ್ಯರಿಗೆ ನೆರವು ನೀಡಲು ಸ್ವಯಂ ಚಿತ್ತದಿಂದ ಮುಂದೆ ಬಂದಿರುತ್ತಾರೆ.
2. XXX ಯುವ ಜನರು ಇತರ ಯುವ ಜನರಿಗೆ ವಿವಿಧ ಕೌಶಲ್ಯಗಳ ತರಬೇತಿ ಕೊಡಲು ಮುಂದೆ ಬಂದಿರುತ್ತಾರೆ.
3. XXX ಮಕ್ಕಳು ದುರ್ಬಲ ಮಕ್ಕಳಿಗೆ ವಿದ್ಯಾಭ್ಯಾಸದ ತರಗತಿಗಳನ್ನು ಏರ್ಪಡಿಸಿರುತ್ತಾರೆ.
4. XXX ಮಹಿಳಾ ಗುಂಪುಗಳು ಅಥವಾ ಸ್ವ ಸಹಾಯ ಸಂಘಗಳು ತಮ್ಮ ಸಾಮಾನ್ಯ ಹಣ ಸಂಗ್ರಹಣಾ ಖಾತೆಯಿಂದ ಕಠಿಣ ಕೊರತೆಯಲ್ಲಿದ್ದವರಿಗೆ ಧನಸಹಾಯ ಮಾಡಿವೆ.
5. XXX ಸಮುದಾಯದ ಸದಸ್ಯರು ಸ್ವ ಶ್ರಮದಾನದಿಂದ ಸ್ಥಳವನ್ನು ಶುದ್ಧೀಕರಿಸಿರುತ್ತಾರೆ.
6. XXX ಸದಸ್ಯರು ಅಸ್ವಸ್ಥರನ್ನು ಮತ್ತು PWDಗಳನ್ನು ಸಂಧಿಸಿ ಅವರೊಂದಿಗೆ ಸಮಯವನ್ನು ಕಳೆದಿರುತ್ತಾರೆ.
7. XXX ಯುವ ಜನರು, XXX ಮಹಿಳೆಯರು ಮತ್ತು XXX ಪುರುಷರು ಸರಕಾರ ಸಮುದಾಯದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಯ ಮೇಲೆ ನಿಗಾ ಇಟ್ಟು ಅದರ ಬಗ್ಗೆ ಸರಕಾರದ ಇಲಾಖೆಗಳಿಗೆ ತಮ್ಮ ಅಭಿಪ್ರಾಯಗಳನ್ನು ತಲುಪಿಸಿರುತ್ತಾರೆ.
8. XXX ಹಣವನ್ನು ಸಮುದಾಯದ ಸಾಮಾನ್ಯ ಸಂಭ್ರಮಕ್ಕೆ ಹಣ ಸಂಗ್ರಹಣೆ ಮಾಡಲಾಯಿತು.
9. XXX ಶೇಕಡ ಮೊತ್ತ ಹಣವನ್ನು ತರಬೇತಿಯಲ್ಲಿ ಭಾಗವಹಿಸಿದ ಸದಸ್ಯರ ಊಟದ ಖರ್ಚು ವೆಚ್ಚಗಳನ್ನು ತಲೆದೂಗಿಸಿದರು.
10. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಬದಲಾಯಿಸಿರಿ)

# ಸ್ವ ಮೌಲ್ಯ ನಿರ್ಧಾರ ಸಾಧನ

ಈ ೧ ರಿಂದ ೫ ರ ಅಡಿಯಲ್ಲಿ '೧' ಕನಿಷ್ಠ ಅಂಕವಾಗಿದ್ದು '೫' ಗರಿಷ್ಠ ಅಂಕವಾಗಿರುತ್ತದೆ. ನಿಮ್ಮ ಪ್ರಗತಿಯನ್ನು ಹೇಗೆ ಪರಿಶೀಲಿಸುತ್ತೀರಿ.

| ಕ್ರಮ ಸಂಖ್ಯೆ | ಅಭಿವೃದ್ಧಿಯ ವಿಭಾಗ | ಅಂಕ |
|---|---|---|
| 1 | ನಾನು ಸ್ವಯಂ ಸೇವೆಯಲ್ಲಿ ಮಗ್ನನಾಗಿ ಕೊಡುವುದು ಮತ್ತು ಹಂಚಿಕೆಯಲ್ಲಿ ಬೆಳೆದಿದ್ದೇನೆ. | |
| 2 | ನಾನು ಬಡವರ ಮತ್ತು ಕೊರತೆಯುಳ್ಳವರ ಸೇವೆಯಲ್ಲಿ ಹೆಮ್ಮೆ ಪಡುತ್ತೇನೆ. | |
| 3 | ನಾನು ಕೊರತೆಯುಳ್ಳವರಿಗೆ ನನ್ನ ಸಮಯ, ಕೌಶಲ್ಯ ಮತ್ತು ಸಾಮರ್ಥ್ಯವನ್ನು ಹಂಚಿಕೊಳ್ಳುವುದರಲ್ಲಿ ವಿನಿಯೋಗಿಸುತ್ತೇನೆ. | |
| 4 | ಪರಿಪೋಷಕ ಸಂಸ್ಥೆಗಳು ಏರ್ಪಡಿಸಿದ ತರಬೇತಿಗಳಿಂದ ಗಳಿಸಿದ ಜ್ಞಾನವನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತೇನೆ. | |
| 5 | ನಾನು ನನ್ನ ವೈಯಕ್ತಿಕ ಖರ್ಚುಗಳನ್ನು ನಿಯಂತ್ರಿಸಿ ಉಳಿಕೆ ಹಣವನ್ನು ಸಮುದಾಯದ ಚಟುವಟಿಕೆಗಳಿಗೆ ಹಂಚುತ್ತೇನೆ. | |
| 6 | ನನ್ನ ಸ್ವಯಂ ಸೇವೆಯನ್ನು ಸಾರ್ವಜನಿಕರು ಗುರುತಿಸಿದ್ದಾರೆ. | |
| 7 | ಸಮುದಾಯದ ಸದಸ್ಯರು ಸ್ವಯಂ ಸೇವೆ ಮತ್ತು ಹಂಚಿಕೆಯಲ್ಲಿ ಬೆಳೆದಿರುತ್ತಾರೆ. | |
| 8 | ಸಮುದಾಯದ ಅನೇಕ ಸದಸ್ಯರು ತಮ್ಮ ಸಮಯ, ಪ್ರತಿಭೆ, ಸೇವೆಯನ್ನು ಕೊಡುತ್ತಾ ಪ್ರತಿಫಲಾಪೇಕ್ಷೆಯಿಲ್ಲದೆ ಕೊರತೆಯುಳ್ಳವರಿಗೆ ಧನಸಹಾಯ ಮಾಡುತ್ತಿದ್ದಾರೆ. | |
| 9 | ಸಾಮಾನ್ಯ ಉದ್ದೇಶಗಳಿಗೆ ಅನೇಕ ಸದಸ್ಯರು ಉದಾರ ದಾನ ನೀಡುತ್ತಿದ್ದಾರೆ. | |
| 10 | ಸ್ವಯಂ ಸೇವಾ ಸಂಸ್ಕೃತಿ, ಕೊಡುಗೆ ಮತ್ತು ಹಂಚಿಕೆಯ ಅಭ್ಯಾಸವನ್ನು ಸಮುದಾಯದ ಸದಸ್ಯರು ಅಳವಡಿಸಿಕೊಂಡಿದ್ದಾರೆ. | |

ಗಮನಿಸಿ: ಸಮುದಾಯದ ಎಲ್ಲಾ ಸದಸ್ಯರು ಸ್ವ ಮೌಲ್ಯವನ್ನು ನಿರ್ಧರಿಸಲು ಪಡೆದ ಅಂಕಗಳನ್ನು ಕೊಡಿಸಲಿ, ಅಂಕಗಳ ಮೊತ್ತದ ಬಗ್ಗೆ ಸಂವಾದಿಸಲಿ.

# ಚಿಂತನೆ ಮತ್ತು ಹಂಚಿಕೆಗಳ ಪ್ರಶ್ನೆಗಳು

1. ಯಾವ ವಿಧದ ಸ್ವಯಂ ಸೇವಾ ಚಟುವಟಿಕೆಯನ್ನು ಸಮುದಾಯದ ಸದಸ್ಯರು ಹಮ್ಮಿಕೊಂಡಿದ್ದರು?
2. ಸಮುದಾಯದ ಸದಸ್ಯರು ಪರಸ್ಪರರ ಬಗ್ಗೆ ಕಾಳಜಿಯನ್ನು ಹೇಗೆ ವ್ಯಕ್ತಪಡಿಸಿದರು?
3. ತಮ್ಮ ಸಂಪನ್ಮೂಲಗಳನ್ನು ಹಂಚಿಕೊಳ್ಳುವುದರಲ್ಲಿ ಸಮುದಾಯದ ಸದಸ್ಯರು ಯಾವ ರೀತಿಯಲ್ಲಿ ಆಸಕ್ತಿ ವಹಿಸಿದರು?
4. ಯಾವ ಸಾಮಾನ್ಯ ವಿಧಾನದಲ್ಲಿ ಸಮುದಾಯದ ಸದಸ್ಯರು ಕೊಡುವ ಮತ್ತು ಹಂಚಿಕೊಳ್ಳುವ ಸೇವಾ ಸಂಸ್ಕೃತಿಯನ್ನು ರಕ್ತಗತ ಮಾಡಿಕೊಂಡಿರುವುದನ್ನು ವ್ಯಕ್ತಪಡಿಸಿದರು?
5. ಸಮುದಾಯದ ಸದಸ್ಯರು ಕೊಡುವುದು ಮತ್ತು ಹಂಚಿಕೊಳ್ಳುವುದರಲ್ಲಿ ಜಾತಿ ಮತ್ತು ಧರ್ಮಕ್ಕೆ ಅತೀತರಾಗಿದ್ದರೇ? ಬದಲಾವಣೆಯನ್ನು ಕೆಲವು ಉದಾಹರಣೆಗಳಿಂದ ವಿವರಿಸಿ.
6. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಬದಲಾಯಿಸಿರಿ)



उद्यान विभाग में संचालित योजनायें वर्ष 2014-15
आँगनबाड़ी केन्द्र-मिर्जापुर
जनपद-गोरखपुर
कुपोषण को मात, है अपने हाथ

## ಶವದಹನ ಸಂಸ್ಕಾರಕ್ಕೆ ಬೆಂಬಲ

ಶ್ರೀಮತಿ ತಾರಾಬಾಯಿ ಗುಂಪಿನ ಸದಸ್ಯೆಯಾಗಿ ಹೀಗೆಂದಳು : "ಶ್ರೀಮತಿ ಮುನ್ನಬಾಯಿ ಮಧ್ಯಪ್ರದೇಶದ ಶಾಜಾಪುರ ಜಿಲ್ಲೆಯ ಚಿಕ್ಕಜಾಜೀಪುರ ಗ್ರಾಮದ ಸ್ವ ಸಹಾಯ ಸಂಘದ ಸದಸ್ಯಳು. ಆಕೆಯ ಪತಿ ಕೂಲಿ ಕೆಲಸ ಮಾಡಿ ತನ್ನ ದೈನಂದಿನ ಸಂಪಾದನೆ ಮಾಡುತ್ತಿದ್ದನು. ಅವನ ಅತ್ತೆ ಮೃತಳಾದಾಗ ಮುನ್ನಬಾಯಿಯ ಬಳಿ ಶವದಹನ ಸಂಸ್ಕಾರಕ್ಕೆ ಹಣವಿರಲಿಲ್ಲ. ಆಕೆಯ ಪರಿಸ್ಥಿತಿಯನ್ನು ಗಮನಿಸಿದ ಗುಂಪಿನ ಸದಸ್ಯರು ಶವ ಸಂಸ್ಕಾರವನ್ನು ನೆರವೇರಿಸಲು ಸ್ವಯಂ ಪ್ರೇರಿತರಾಗಿ ಹಣ ಸಹಾಯ ಮಾಡಿದರು. ಇಲ್ಲಿ ಅವರು ಕೇವಲ ಧನ ಸಹಾಯವನ್ನು ಮಾಡಲಿಲ್ಲ. ನಾವೆಲ್ಲರೂ ಮುನ್ನಬಾಯಿಯ ದುಃಖ ವಿಲಾಪದ ಸಂದರ್ಭದಲ್ಲಿ ಅವಳೊಂದಿಗೆ ಇದ್ದೆವು."

## ಕೊಲ್ಕೊತ್ತಾದ ಸೋಲೋಭಿಘದಲ್ಲಿ ನಾವು ಶಾಲೆಯನ್ನು ಕಟ್ಟಿದೆವು

ಸೋಲೋಭಿಘ ಕೊಲ್ಕೊತ್ತಾದ ಒಂದು ಕೊಳಚೆ ಪ್ರದೇಶ ಮಾತ್ರವಲ್ಲ, ಅದು ಅನಧಿಕೃತ ಕಾಲೋನಿಯೂ ಹೌದು. ಇಲ್ಲಿ ಹಲವಾರು ನಿರ್ಗತಿಕ ಕುಟುಂಬಗಳು ವಾಸಿಸುತ್ತಿವೆ. ಇಲ್ಲಿನ ಮಕ್ಕಳು ಶಾಲೆಗೆ ಹೋಗುವುದನ್ನು ನಿಲ್ಲಿಸಿ ತ್ಯಾಜ್ಯ ವಸ್ತುಗಳನ್ನು ಶೇಖರಿಸಲು ಹೋಗುತ್ತಿದ್ದರು. ಈ ಮಕ್ಕಳಲ್ಲಿ ಕೆಲವರು ಬೇಡವಾದ ಕೆಲಸಗಳಲ್ಲೂ ಅಪರಾಧಿ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದರು. ಈ ಪರಿಸ್ಥಿತಿ ನಮ್ಮನ್ನು ಕಂಗೆಡಿಸಿತು. ಯಾವ NGOಗಳು ಈ ಕಡೆ ಸುಳಿಯದಿದ್ದುದರಿಂದ ನಾವೇ ಒಂದು ಶಾಲೆಯನ್ನು ಕಟ್ಟಲು ತೀರ್ಮಾನಿಸಿದೆವು. ಸಮುದಾಯದ ಕೆಲವು ಸದಸ್ಯರು ಈ ತೀರ್ಮಾನವನ್ನು ತಿರಸ್ಕರಿಸಿ ಅದರಲ್ಲಿ ಭಾಗವಹಿಸಲು ಬರಲಿಲ್ಲ. ನಾವು ಮೊದಲು ಪ್ರತಿ ಕುಟುಂಬದಿಂದ ೫ ರೂಪಾಯಿಗಳನ್ನು ಸಂಗ್ರಹಿಸಿದೆವು. ಕೆಲವು ಸದಸ್ಯರು ತಮ್ಮ ಉಳಿತಾಯದಿಂದ ಇಟ್ಟುಕೊಂಡ ಹಣವನ್ನೇ ಕೊಟ್ಟರು. ಕಟ್ಟಡದ ಕೆಲಸಕ್ಕೆ ನಾವು ಹೊರಗಿನಿಂದ ಯಾವ ಪರಿಣತರನ್ನೂ ಆಮಂತ್ರಿಸಲಿಲ್ಲ. ಸಮುದಾಯದ ಸದಸ್ಯರೇ ಎಂಜಿನಿಯರ್, ಗಾರೆ ಕೆಲಸದವರಾಗಿ ಕಟ್ಟಡವನ್ನು ನಿರ್ಮಿಸಿದರು. ಸಮುದಾಯದ ಸದಸ್ಯರು ಸರತಿಯಲ್ಲಿ ತಮ್ಮ ಸೇವೆಯನ್ನು ಉಚಿತವಾಗಿ ಕೊಟ್ಟರು. ಈ ಕಟ್ಟಡ ನಿರ್ಮಾಣಕ್ಕೆ ಒಟ್ಟು ೩ ಲಕ್ಷ ರೂಪಾಯಿ ತಗಲಿತು. ಈ ಮೊತ್ತ ನಮಗೆ ಅತೀ ದೊಡ್ಡದಾಗಿತ್ತು. ಅಷ್ಟಾಗುತ್ತದೆಂದು ನಾವು ಭಾವಿಸಿರಲಿಲ್ಲ, ಅಷ್ಟನ್ನು ಸಂಗ್ರಹಿಸಲು ಸಾಧ್ಯವೆಂದು ನಮಗೆ ತಿಳಿದಿರಲಿಲ್ಲ. ನಾವು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಮುಂದಕ್ಕೆ ಸಾಗಿದೆವು. ನಿರ್ಮಾಣದ ಸಂದರ್ಭದಲ್ಲಿ ಅದನ್ನು ನೋಡಿದ ಕೆಲವರು ಉದಾರ ದಾನವನ್ನಿತ್ತರು. ಆಯವ್ಯಯದ ಲೆಕ್ಕವಿಡುವುದು, ನೀಲಿ ನಕ್ಷೆ, ಯೋಜನೆ ಮತ್ತು ಅನುಷ್ಠಾನದ ಬಗ್ಗೆ ನಮಗೆ ಏನೇನೂ ತಿಳಿದಿರಲಿಲ್ಲ. ಆಗ "ನಮ್ಮ ಸಮುದಾಯ, ಸಮುದಾಯದ ಶಕ್ತಿ ಮತ್ತು ಉದಾರತೆ" ಮಾತ್ರ ನಮ್ಮ ಗಮನದಲ್ಲಿತ್ತು. ಶಾಲಾ ಕಟ್ಟಡ ಸಂಪೂರ್ಣವಾದಾಗ ಅದನ್ನು ನೋಡಿದವರೆಲ್ಲರೂ ಆಶ್ಚರ್ಯಚಕಿತರಾದರು.

CHAPTER 12

# ಆಚರಣೆ, ಹೊರನೋಟ ಮತ್ತು ಮಾನ್ಯತೆ



# ಆಚರಣೆ, ಹೊರನೋಟ ಮತ್ತು ಮಾನ್ಯತೆ

## ಉದ್ದೇಶ

ಕಡು ಬಡತನದಲ್ಲಿರುವ ಸಮುದಾಯಗಳು, ಅವು ಪಟ್ಟಣದ ಕೊಳಚೆ ಪ್ರದೇಶದಲ್ಲೇ ಇರಲಿ, ಅನತಿ ದೂರದ ಹಳ್ಳಿಗಳಲ್ಲೇ ಇರಲಿ, ಆಚರಣೆ, ಸಂಭ್ರಮಗಳು ಅವರ ಜೀವನದ ಅವಿಭಾಜ್ಯ ಅಂಗಗಳಾಗಿರುತ್ತವೆ. ಅವರು ಸ್ವಾಭಾವಿಕವಾಗಿ ಧಾರ್ಮಿಕ ಮನೋಭಾವವುಳ್ಳವರಾಗಿರುತ್ತಾರೆ. ಅವರು ಜೊತೆಗೂಡಿ ಯೋಜಿಸಿ ಆ ಆನಂದವನ್ನು ಎಲ್ಲರೊಡನೆ ಹಂಚಿಕೊಳ್ಳಲು ಸಂಘಟಿತರಾಗಿರುತ್ತಾರೆ. ಈ ಸಂದರ್ಭದಲ್ಲಿ ಅವರು ಕೆಲವು ಆಚರಣೆಗಳನ್ನು ಕಾರ್ಯರೂಪಕ್ಕೆ ತಂದು ಸಂಚಲನದ ಮುಖಾಂತರ ತಮ್ಮ ಸಾಧನೆ, ಯಶಸ್ಸು ಮತ್ತು ಬದಲಾವಣೆಯನ್ನು ವ್ಯಕ್ತಪಡಿಸುವುದು ಈ ಹಂತದ ಗುರಿಯಾಗಿದೆ. ಇಂತಹ ಸಮಾರಂಭಗಳಲ್ಲಿ ಅವರು ತಮ್ಮ ಹಿಂದಿನದನ್ನು ಜ್ಞಾಪಕಕ್ಕೆ ತಂದುಕೊಳ್ಳಲಿ, ತಾವು ಸಾಧಿಸಿದ್ದನ್ನು ಸಾರಿಹೇಳಲಿ, ತಮ್ಮತನವನ್ನು ಎಲ್ಲರ ಮುಂದೆ ಪ್ರದರ್ಶಿಸಲಿ ಹಾಗೂ ಈ ಕಾರ್ಯಕ್ರಮಕ್ಕೆ ಕಾರಣಕರ್ತರಾದವರನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸಲಿ ಎಂಬುದು ಇದರ ಉದ್ದೇಶವಾಗಿದೆ. ಈ ಆಚರಣೆಯ ಹೊರನೋಟದಲ್ಲಿ ನಿರ್ದಿಷ್ಟ ಸಂವಹನದ ರಣನೀತಿಯೂ ಅಡಕವಾಗಿದೆ. ಅದು ಸಮುದಾಯದ ಪ್ರತಿ ಒಬ್ಬೊಬ್ಬ ಸದಸ್ಯನನ್ನು ಪರಸ್ಪರ ಬಂಧಿಸುತ್ತದೆ, ಸಮುದಾಯದ ಬಗ್ಗೆ ಹೊರ ಜಗತ್ತಿಗೆ ಸಂದೇಶವನ್ನು ನೀಡುತ್ತದೆ, ಸದಸ್ಯರಲ್ಲೂ ಈ ಜಾಗೃತಿಯನ್ನು ಸೃಷ್ಟಿ ಮಾಡುತ್ತದೆ. ಈ ಸಮಾರಂಭದಲ್ಲಿ ನೀಡುವ ಬಹುಮಾನ ಮತ್ತು ಸನ್ಮಾನ ಸದಸ್ಯರ ವಿಶ್ವಾಸ ಮತ್ತು ಆತ್ಮಶಕ್ತಿಯನ್ನೂ ತಮ್ಮ ಸಾಮೂಹಿಕ ಸಾಮರ್ಥ್ಯವನ್ನು ಬಲಪಡಿಸುತ್ತಾ ಇನ್ನೂ ಹಲವಾರು ಜನರನ್ನು ಉತ್ತೇಜಿಸುತ್ತದೆ. ಇಂತಹ ಆಚರಣೆಗಳು ಬಡಜನರ ಮತ್ತು ಸಮಾಜದ ಭಾದಿತ ವರ್ಗದ ಬಗ್ಗೆ ಇದ್ದ ಕೀಳು ಅಭಿಪ್ರಾಯದ ವಿರುದ್ಧ ಜಾಗೃತಿಯನ್ನು ಮೂಡಿಸುತ್ತದೆ. ಅವರಲ್ಲಿರುವ ಸೂಕ್ತ ಶಕ್ತಿ ಮತ್ತು ಕೌಶಲ್ಯಗಳು ಬೆಳಕಿಗೆ ಬಂದು ಪ್ರಗತಿಪರ ಜೀವನಕ್ಕೆ ನಾಂದಿಯಾಗುತ್ತದೆ. ಇದರ ಪರಿಣಾಮವಾಗಿ ಸ್ವಾವಲಂಬಿ ಶಕ್ತಿ ವರ್ಧನೆ ಮತ್ತು ಸಂಚಲನದ ಸಾಮೂಹಿಕ ಅರಿವಿನ ಜಾಗೃತಿಯುಂಟಾಗಿ ಅದರಲ್ಲಿ ಎಲ್ಲರೂ ಸಂತೋಷದಿಂದ ತೇಲುತ್ತಾರೆ.

# ಸೂಕ್ತ ಸಮಯ

ಆಚರಣೆ, ಸಮಾರಂಭಗಳ ಕಾಲಕಾಲಕ್ಕೆ ನಡೆಯುವ ಘಟನೆಗಳಾಗಿದ್ದು ಗುಂಪುಗಳು ಮತ್ತು CBOಗಳು ಸಮಚಿತ್ತದಿಂದ ಕ್ರಿಯಾತ್ಮಕವಾಗಿರುವಾಗ, ಅಂದರೆ ೩ನೇ ಹಂತದಿಂದ ಪ್ರಾರಂಭಿಸಬಹುದು.

# ಸಾಗುವ ಮಾರ್ಗಗಳು

- ಗುಂಪಿನ ಮತ್ತು CBOಗಳ ಸಭೆಯಲ್ಲಿ ಮುಕ್ತ ಚರ್ಚೆಗೆ ಸವಾಲು ಹಾಕಿ ಸಮುದಾಯ ಸಂಚಲನ ನಡೆದು ಬಂದ ವಿವಿಧ ಮಜಲುಗಳನ್ನು ಕಲೆಹಾಕಿ ಯಾವ ಸಾಧನೆಗಳಿಗೆ ಸಮಾರಂಭವನ್ನು ಆಯೋಜಿಸಬೇಕು ಎಂಬುದನ್ನು ನಿರ್ದಿಷ್ಟ ಪಡಿಸಿಕೊಳ್ಳಿರಿ. ಇದು ವಿಶೇಷ ಘಟನೆಯಾಗಿದ್ದು ಸಮುದಾಯದ ಸದಸ್ಯರ ಮತ್ತು ಮುಖಂಡರ ಪಾತ್ರ ಅದರಲ್ಲಿರುತ್ತದೆ. ಸಾಧನೆಗಳು ಮೈಲಿಗಲ್ಲಾಗಿದ್ದು ಸದಸ್ಯರು ವಿಶೇಷವೆಂದು ಪರಿಗಣಿಸುವುದನ್ನು ಆಚರಣೆಯ ವಸ್ತುವಾಗಿರಬೇಕು.
- ಇಲ್ಲಿ ವಸ್ತುಗಳು ಮಾತ್ರವಲ್ಲ, ಗುಂಪುಗಳ ಕೊಡುಗೆಗೂ ಮಾನ್ಯತೆ ನೀಡುವುದನ್ನು ನಿಖರಪಡಿಸಿಕೊಳ್ಳಬೇಕು.
- ಕೆಲವು ಮಾನದಂಡ ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಮುಂದಿಟ್ಟುಕೊಂಡು ವ್ಯಕ್ತಿ ಮತ್ತು ಗುಂಪುಗಳ ಹೆಸರುಗಳ ಬಗ್ಗೆ ಚರ್ಚಿಸಬೇಕು. ಈ ವಿಧಾನವನ್ನು ಪರಿಪಾಲಿಸಿದರೆ ಪಾರದರ್ಶಕತೆ ಮತ್ತು ವ್ಯಕ್ತಿ ನಿಷ್ಠವಾಗಿರಲು ಸಾಧ್ಯವಾಗುತ್ತದೆ.
- ಸಿದ್ಧ ಮಾಡಿದ ದೊಡ್ಡ ಪಟ್ಟಿಯಿಂದ ಸನ್ಮಾನಿಸಬೇಕಾದವರನ್ನು ಆಯ್ಕೆ ಮಾಡಲು ಗುಂಪು ಮತ್ತು CBOಗಳಿಗೆ ಮಾರ್ಗದರ್ಶನ ಮಾಡಬೇಕು. ಅಂತೆಯೇ ಆಯ್ಕೆ ಮಾಡಿದ ಹೆಸರುಗಳು ಸಹಾನುಮತದಿಂದಾಗಬೇಕು.
- ಗುಂಪುಗಳು ಮತ್ತು CBO ಒಂದು ಆಯೋಜನಾ ಸಮಿತಿಯನ್ನು ರಚಿಸುವುದು ಉಚಿತ. ಈ ಸಮಿತಿಯು ಸಮಾರಂಭದ ಯೋಜನೆ, ಅನುಷ್ಠಾನ, ನಿಗಾ ಮತ್ತು ಮೌಲ್ಯಮಾಪನವನ್ನು ವಹಿಸಿಕೊಳ್ಳುತ್ತದೆ. ಈ ಸಮಿತಿಯ ಅಂಗ ಸಮಿತಿಗಳು ಇತರೆ ವಿವಿಧ ವಿಷಯಗಳಿಗೆ ಗಮನ ಕೊಡುತ್ತದೆ.
- ಈ ಕಾರ್ಯಕ್ರಮದಲ್ಲಿ ಸಾಕಷ್ಟು ಸಮುದಾಯದ ಸದಸ್ಯರನ್ನು ಸೇರ್ಪಡೆ ಮಾಡುವುದನ್ನು ನಿಖರಪಡಿಸಿಕೊಳ್ಳುವುದು.
- ಈ ಸಂಭ್ರಮದ ಒಂದು ಭಾಗವನ್ನು ಸಮುದಾಯದ ಸದಸ್ಯರ ಕೌಶಲ್ಯಗಳನ್ನು ಪ್ರದರ್ಶಿಸಲು ಮುಡಿಪಾಗಿಡಬೇಕು. ವಿಶೇಷವಾಗಿ ಯುವ ಜನರು ಮತ್ತು ಮಕ್ಕಳು ಸಭಿಕರ ಮುಂದೆ ವೇದಿಕೆಯಲ್ಲಿ ಪ್ರದರ್ಶಿಸುವ ಕಲಾಪಗಳು ಜನಜೀವನದ ಪರಿವರ್ತನೆಗೂ ಕಾರಣವಾಗಬಹುದು.
- ಈ ಸಂಭ್ರಮವನ್ನು ಸಮರ್ಥ ಜಾಲತಾಣ ಮತ್ತು ಪರವಾದಿ ಸಹಪಾಠಿಗಳಿಗೆ ಸಮುದಾಯದ ಸದಸ್ಯರ ಸಾಧನೆಗಳನ್ನು ಪ್ರದರ್ಶಿಸುವ ವೇದಿಕೆಯನ್ನಾಗಿಯೂ ಬಳಸಬಹುದು. ಈ ಆಚರಣೆ ಭವಿಷ್ಯದಲ್ಲಿ ಜಾಲತಾಣ ಮತ್ತು ಸಹಯೋಗಕ್ಕೆ ಅವಕಾಶಗಳನ್ನೂ ತೆರೆದಿಡಬಹುದು.
- ಸ್ಥಳೀಯ ಮುಖಂಡರ ಮತ್ತು ಸದಸ್ಯರ ಸನ್ಮಾನ ಮತ್ತು ಬಹುಮಾನ ಕಾರ್ಯಕ್ಕೆ ಅಧಿಕ ಹಣದ ಕಾಣಿಕೆ ಅಥವಾ ಅಧಿಕ ಬೆಲೆಬಾಳುವ ವಸ್ತುಗಳನ್ನು ನೀಡುವುದು ಅಗತ್ಯವೆಂದು ತೋರುವುದಿಲ್ಲ. ಸಾರ್ವಜನಿಕ ಮನ್ನಣೆಗೆ ಸಾಂಕೇತಿಕ ಕಾಣಿಕೆ ಹಾಗೂ ಪ್ರಶಂಸೆಯ ಮಾತುಗಳೇ ಅಮೂಲ್ಯವೆಂದು ಪರಿಗಣಿಸಬೇಕು. ಅದನ್ನು ಅಭಿನಂದನೆ ಅಥವಾ ಸ್ಮರಣಿಕೆ ಅಥವಾ ವ್ಯಕ್ತಿಗಳನ್ನು ಗೌರವಾನ್ವಿತ ವ್ಯಕ್ತಿಗಳೊಂದಿಗೆ ಆಸೀನರಗೊಳಿಸುವುದರಿಂದ ಅಥವಾ ಸಭಿಕರಿಂದ ಯಶೋಗಾಥೆಯನ್ನು ಹೇಳಿಸುವುದರಿಂದ ಪೂರೈಸಬಹುದು.

- ಸಮಾರಂಭದ ವರದಿಯನ್ನು ಸ್ಥಳೀಯ ಮುದ್ರಣ, ಗ್ರಹಣ ಮತ್ತು ದರ್ಶನ ಮಾಧ್ಯಮಗಳ ಮೂಲಕ ಸಂವಹನ ಮಾಡಿದರೆ ಸ್ಥಳೀಯ ಮುಖಂಡತ್ವಕ್ಕೆ ಪ್ರಚಾರ ಕೊಟ್ಟಂತಾಗುತ್ತದೆ.
- ಸಮಾರಂಭದ ನಂತರ ಆಯೋಜನಾ ಸಮಿತಿ ಗುಂಪುಗಳ ಮತ್ತು CBOಗಳ ಸಭೆಯನ್ನು ಕರೆದು ಪುನರ್ವರದಿಯನ್ನು ನೀಡಿ ಆಚರಣೆಯನ್ನು ಕುರಿತು ಅವರ ರಚನಾತ್ಮಕ ಅನಿಸಿಕೆಗಳನ್ನು ಸಂಗ್ರಹಿಸಬಹುದು. ಇಲ್ಲಿ ಪ್ರಶಂಸನೀಯವಾದುದೇನು, ಉತ್ತಮಪಡಿಸಬೇಕಾದುದೇನು ಎಂಬುದನ್ನು ಪರಿಗಣಿಸಬಹುದು. ಈ ಅಂಶಗಳು ಮುಂದೆ ಆಚರಿಸಲಿರುವ ಸಮಾರಂಭಕ್ಕೆ ಪೀಠಿಕೆಯಾಗಬಹುದು.
- ಸಮಾರಂಭದ ವೇದಿಕೆ ದೃಶ್ಯಗಳು ಮಾಹಿತಿ, ಶಿಕ್ಷಣ ಮತ್ತು ಸಂವಹನ (IEC) ಪರಿಕರಗಳನ್ನು ಒಳಗೊಳ್ಳುತ್ತವೆ. ಅವು ಭಿತ್ತಿಪತ್ರ, ಕರಪತ್ರ, ಹಾರುಪತಾಕೆ, ಕೈಪಿಡಿ ಪುಸ್ತಕ, ಸಾಧನಾ ಕಿರುಪುಸ್ತಿಕೆ, ಸಾಮಾಜಿಕ ಮಾಧ್ಯಮದ ಮೂಲಕ ಹೊರ ಜಗತ್ತಿನೊಂದಿಗೆ ಸಂಪರ್ಕ ಮಾಡಬಹುದು. ಇಂತಹ ವಸ್ತುಗಳನ್ನು ಸಮುದಾಯದ ಸದಸ್ಯರು ಆಗಿಂದಾಗ್ಗೆ ತಯಾರಿಸಬೇಕು. ಅವನ್ನು ಸಿದ್ಧ ಮಾಡಲು ಯುವಜನರಿಗೆ ತರಬೇತಿ ನೀಡಬಹುದು.
- ಇಂತಹ ಸಾರ್ವಜನಿಕ ಮಾನ್ಯತಾ ಸಮಾರಂಭಗಳಿಗೆ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ.
- ಸಮುದಾಯದ ಸದಸ್ಯ ಬಾಹ್ಯ ಆಚರಣೆ ಸಂಭ್ರಮಗಳಿಗೆ ಮನಸೋಲುವುದರಿಂದ ಉದಾರ ಮನಸ್ಸಿನಿಂದ ಆರ್ಥಿಕ ನೆರವನ್ನು ನೀಡುತ್ತಾರೆ. ಆದುದರಿಂದ ಗರಿಷ್ಠ ಸಂಖ್ಯೆಯಲ್ಲಿ ಅವರನ್ನು ಜೊತೆಗೂಡಿಸಬಹುದು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಸೂಚನೆಗಳು

- ಆಯೋಜನಾ ಸಮಿತಿ ಮತ್ತು ಅಂಗ ಸಮಿತಿಗಳು ಸದಸ್ಯರೊಂದಿಗೆ ಒಂದಾಗಿದ್ದು ಅವರು ಪುರುಷರು, ಮಹಿಳೆಯರು, ಮಕ್ಕಳು ಮತ್ತು PWDಗಳನ್ನು ಪ್ರತಿನಿಧಿಸಬೇಕು.
- ಈ ಪ್ರತಿನಿಧಿಗಳು ಪ್ರತಿ ಸದಸ್ಯನ ಸ್ವರ, ಅಭಿಪ್ರಾಯ ಮತ್ತು ಸೂಚನೆಗಳನ್ನು ಪರಿಗಣಿಸಿ ಮಾತನಾಡುವಂತೆ ಕ್ರಮ ಕೈಗೊಳ್ಳಬೇಕು.
- ಸಮುದಾಯದ ಸದಸ್ಯರು ಆಚರಣೆಯ ಆಯೋಜನೆಗೆ ತಮ್ಮ ಸಮಯ, ಪ್ರಯತ್ನ ಮತ್ತು ಸಂಪನ್ಮೂಲಗಳನ್ನು ನೀಡುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಅವರ ಸ್ವಾಮ್ಯದಿಂದಲೇ ಈ ಆಚರಣೆ ತನ್ನ ಉದ್ದೇಶವನ್ನು ಪೂರೈಸುತ್ತದೆ.
- ಅನೇಕ ಸಮಾರಂಭಗಳಿದ್ದರೆ ಆಯೋಜನಾ ಸಮಿತಿಯು ಸಂಯೋಜನೆಯನ್ನು ಮಾರ್ಪಡಿಸಬೇಕಾಗುತ್ತದೆ. ಹೀಗೆ ಪ್ರತಿಯೊಬ್ಬ ವ್ಯಕ್ತಿಗೆ ಅವಕಾಶವನ್ನಿತ್ತು ಅವನು ಆಯೋಜನೆ ಮತ್ತು ನಿರ್ವಹಣಾ ಕೌಶಲ್ಯವನ್ನು ಕಲಿಯಲು ಅವಕಾಶವನ್ನು ಕಲ್ಪಿಸಬೇಕು.
- ಯುವ ಸಮಿತಿಯನ್ನು ರಚಿಸಿ IEC ಪರಿಕರಗಳನ್ನು, ಸಾಮಾಜಿಕ ಮಾಧ್ಯಮ ಉತ್ಪನ್ನಗಳನ್ನು ಸಂಗ್ರಹಿಸಿ ಸಮುದಾಯದ ಯಶಸ್ಸನ್ನು ಪ್ರದರ್ಶಿಸಲು ಕ್ರಮ ಕೈಗೊಳ್ಳಬೇಕು.
- ಒಂದು ಪ್ರತ್ಯೇಕ ವೆಬ್‌ಸೈಟನ್ನು ಸೃಷ್ಟಿಸಿ ಅದರ ಮುಖಾಂತರ ವಿಸ್ತೃತ ಅಭಿಮಾನಿಗಳಿಗೆ ಯಶಸ್ಸಿನ ಕಥೆಗಳನ್ನು ಸಂವಹನಗೊಳಿಸಿದರೆ ಅದರಿಂದ ಸಹಯೋಗದ ಬೆಂಬಲವನ್ನು ಗಳಿಸಿಕೊಳ್ಳಬಹುದು.
- ಸಮುದಾಯಕ್ಕೆ ಧ್ಯೇಯವಾಕ್ಯದ 'ಲೋಗೊ'ವನ್ನು ರೂಪಿಸಲು ಸಮರ್ಥ ಯುವ ಜನರನ್ನು ಪ್ರೋತ್ಸಾಹಿಸಬೇಕು. ಲೋಗೊ ಸಮುದಾಯಕ್ಕೆ ಆತ್ಮೀಯತೆಯನ್ನಿತ್ತು ಅದರ ದರ್ಶನವನ್ನು ಸಂವಹನಗೊಳಿಸುತ್ತದೆ. ಸಾರ್ವಜನಿಕ ಮನ್ನಣೆಯನ್ನು ಗಳಿಸಲು ಅದನ್ನು ಪ್ರಚಲಿತಗೊಳಿಸಿರಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಉಪಯುಕ್ತ ಎಚ್ಚರಿಕೆಗಳು

- ಪರಿಪೋಷಕ ಸಂಸ್ಥೆಗಳು ಅಥವಾ ಸಿಬ್ಬಂದಿ ಉತ್ತಮ ಅಭ್ಯಾಸಗಳನ್ನು ಮತ್ತು ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ತಾವೇ ತೀರ್ಮಾನ ಕೈಗೊಳ್ಳಬಾರದು. ಅದು ಸಂಪೂರ್ಣವಾಗಿ ಗುಂಪುಗಳ ಹಾಗೂ ಸಮುದಾಯದ ಸದಸ್ಯರ ವಿವೇಚನೆಗೆ ಬಿಟ್ಟುಬಿಡಬೇಕು.
- ಬಾಹ್ಯ ಹೂಡಿಕೆದಾರರಾಗಿರುವ ಪರಿಪೋಷಕ ಸಂಸ್ಥೆ ಅಥವಾ ಸಚೇತಕರು ಅಥವಾ ಸರಕಾರಿ ಅಧಿಕಾರಿಗಳು ಅಥವಾ ವಿಶೇಷ ಅತಿಥಿ ಆಹ್ವಾನಿತರು ಪ್ರಮುಖ ಆಕರ್ಷಣೆಯಾಗಿರಬಾರದು. ಈ ಸಮಾರಂಭದ 'ನಕ್ಷತ್ರ'ಗಳು ಸ್ಥಳೀಯ ಮುಖಂಡರು ಮತ್ತು ಪರಿವರ್ತನಾ ವ್ಯಕ್ತಿಗಳಾಗಬೇಕು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

# ಸೂಚಿಗಳು

1. XXX ಆಚರಣಾ ಸಮಾರಂಭಗಳನ್ನು ಆಯೋಜಿಸಲಾದವು.
2. XXX ಗುಂಪುಗಳು ಮತ್ತು ವ್ಯಕ್ತಿಗಳು ಸಮಾರಂಭದ ನಿಯೋಜನೆ ಹಾಗೂ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದವು.
3. XXX ಸಮುದಾಯದ ಸದಸ್ಯರು ಸಮಾರಂಭಕ್ಕೆ ಸಮಯ, ಮಾನವ ಸಂಪನ್ಮೂಲ, ವಸ್ತು ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಒದಗಿಸಿರುತ್ತಾರೆ.
4. XXX ಸಮುದಾಯದ ಸದಸ್ಯರು ಹಾಜರಾಗಿ ಸಮಾರಂಭದಲ್ಲಿ ಭಾಗವಹಿಸಿರುತ್ತಾರೆ.
5. XXX ಸಹಾಯಕ ಏಜೆನ್ಸಿ ಮತ್ತು ಹೂಡಿಕೆದಾರರಿಗೆ ಈ ಸಂಭ್ರಮದ ಮುಖಾಂತರ ತಿಳಿಸಲಾಯಿತು.
6. XXX ಸ್ಥಳೀಯ ಮುಖಂಡರನ್ನು ಗೌರವಿಸಿ ಗುರುತಿಸಲಾಯಿತು.
7. ಈ ಸಮಾರಂಭದಲ್ಲಿ ಭಾಗವಹಿಸಿದ ನಂತರ ಇಂತಹ ಪ್ರಕ್ರಿಯೆಯನ್ನು XXX ವಿಭಾಗಗಳು ಹಮ್ಮಿಕೊಂಡಿರುತ್ತಾರೆ.
8. ಈ ಬಹಿರಂಗ ಸಮಾರಂಭದ ಪರಿಣಾಮವಾಗಿ XXX ಹೊಸ ಜಾಲತಾಣ ಮತ್ತು ಸಹಯೋಗ ಸಂಪರ್ಕಗಳನ್ನು ಸ್ಥಾಪಿಸಲಾಯಿತು.
9. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

### ಸಮುದಾಯದಿಂದ ಗುರುತಿಸಲ್ಪಟ್ಟ ಬಹುಮಾನಿತ ವ್ಯಕ್ತಿಗಳ ಪಟ್ಟಿ

| ಕ್ರಮ ಸಂಖ್ಯೆ | ಹೆಸರು | ವೈಯಕ್ತಿಕ ವಿವರಗಳು: ಲಿಂಗ, ವಯಸ್ಸು, ಸ್ಥಳ, ಉದ್ಯೋಗ, ಗುಂಪು | ವಿಶೇಷ ಕೊಡುಗೆ | ಪರಿಣಾಮ |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |

**ಸಮುದಾಯದಿಂದ ಗುರುತಿಸಲ್ಪಟ್ಟ ಬಹುಮಾನಿತ ಗುಂಪುಗಳ ಪಟ್ಟಿ**

| ಕ್ರಮ ಸಂಖ್ಯೆ | ಹೆಸರು | ವಿವರಗಳು: ಸದಸ್ಯರ ಸಂಖ್ಯೆ, ಗುಂಪು ಸ್ಥಾಪನೆಯ ದಿನಾಂಕ ಮತ್ತು ಚಟುವಟಿಕೆಗಳು | ವಿಶೇಷ ಕೊಡುಗೆ | ಪರಿಣಾಮ |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |

## ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

1. ವ್ಯಕ್ತಿ ಅಥವಾ ಗುಂಪುಗಳನ್ನು ಗುರುತಿಸಲು ಮತ್ತು ಬಹುಮಾನಿಸಲು ಸಮುದಾಯದ ಸದಸ್ಯರು ಯಾವ ಮಾನದಂಡ ಮತ್ತು ವಿಧಾನಗಳನ್ನು ಅಳವಡಿಸಿದರು.
2. ಸಮಾರಂಭವನ್ನು ಆಯೋಜಿಸುವಾಗ ಮತ್ತು ಸಂಘಟಿಸುವಾಗ ಸಮುದಾಯದ ಸದಸ್ಯರು ಎಷ್ಟು ಸಾಧ್ಯವೋ ಅಷ್ಟು ಸದಸ್ಯರನ್ನು ಅಥವಾ ಗುಂಪುಗಳ ಸಹಭಾಗಿತ್ವವನ್ನು ಖಚಿತಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರೋ? ಹೌದಾದರೆ ಸಮುದಾಯ ಹೇಗೆ ನಿಭಾಯಿಸಿತು?
3. ಈ ಸಮಾರಂಭವನ್ನು ಸಂಘಟಿಸುವಾಗ ಸಮುದಾಯ ಎದುರಿಸಿದ ಪ್ರಮುಖ ತೊಡಕುಗಳೇನು? ಅದನ್ನು ಹೇಗೆ ನಿಭಾಯಿಸಿತು?
4. ಸಮುದಾಯದ ಮುಖಂಡರು ಮತ್ತು ಸದಸ್ಯರ ಮೇಲೆ ಈ ಸಮಾರಂಭ ಯಾವ ಪರಿಣಾಮ ಬೀರಿತು?
5. ಈ ಸಮಾರಂಭ ಮತ್ತು ಘಟನೆಗಳನ್ನು ಆಚರಿಸುವುದರಿಂದ ಸಮುದಾಯದ ಕಲಿಕೆ ಏನು?
6. ಸಮುದಾಯ ಮತ್ತು ವಿಸ್ತೃತ ಸಭಿಕರಿಗೆ ಯಶಸ್ಸಿನ ಕಥೆಗಳನ್ನು ಪ್ರಸಾರಗೊಳಿಸಲು ಯಾವ ದೃಶ್ಯ ಪರಿಕರಗಳನ್ನು ಸಿದ್ಧ ಮಾಡಲಾಯಿತು?
7. ಈ ಸಮಾರಂಭಕ್ಕೆ ಸಾಕ್ಷಿಗಳಾದ ಸರಕಾರಿ ಅಧಿಕಾರಿಗಳು ಸ್ಥಳೀಯ ರಾಜಕಿಯ ಮುಖಂಡರು ಮತ್ತು ಅತಿಥಿಗಳ ಮತ್ತು ಇತರರ ಪ್ರತಿಕ್ರಿಯೆ ಏನು?
8. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

CHAPTER 13

# “ಪರಿಪೋಷಕ” ಸಂಸ್ಥೆಯ ಬದಲಿ ಪಾತ್ರಗಳು



# “ಪರಿಪೋಷಕ” ಸಂಸ್ಥೆಯ ಬದಲಿ ಪಾತ್ರ

## ಉದ್ದೇಶ

ಸಮುದಾಯ ಸಂಚಲನ ಪ್ರಕ್ರಿಯೆಯ ಮೂಲಭೂತ ಉದ್ದೇಶವೇನೆಂದರೆ, ಸಮುದಾಯದ ಸದಸ್ಯರನ್ನು ಸಮರ್ಥರೂ ಸಬಲರನ್ನಾಗಿ ಮಾಡುವುದು ಮತ್ತು ಅವರು ವೈಯಕ್ತಿಕವಾಗಿಯೂ ಸಾಮಾಹಿಕವಾಗಿಯೂ ಸ್ವಾವಲಂಬಿಯಾಗಿ ಅಭಿವೃದ್ಧಿಯ ಜವಾಬ್ದಾರಿಯನ್ನು ಸಂಘಟಿತ ಹಾಗೂ ಕ್ರಮಬದ್ಧವಾಗಿ ನಡೆಸಲು ಶಕ್ತರನ್ನಾಗಿಸುವುದು. ಈ ಕೈಪಿಡಿಯಲ್ಲಿ ವಿವರಿಸಿದಂತಹ ಪರಿಪೋಷಕ ಸಂಸ್ಥೆ ಅದರ ವಿವಿಧ ಹಂತಗಳಲ್ಲಿ “ಪೋಷಕ” ಪಾತ್ರವನ್ನು ನೆರವೇರಿಸಿಕೊಂಡು ಬಂದಿದೆ. ಈ ಪ್ರಕ್ರಿಯೆಯನ್ನು ಆರಂಭಿಸಿದ ನಂತರ ಗುಂಪುಗಳು CBO ಮತ್ತು ಸಮುದಾಯದ ಸದಸ್ಯರು ತಮ್ಮ ನಡೆಯನ್ನು ತಮ್ಮದನ್ನಾಗಿಸಿಕೊಂಡು ಬಂದಿರುತ್ತಾರೆ. ಸಮುದಾಯದ ಸದಸ್ಯರಾಗಿ ಅವರು ಕ್ರಮೇಣ ಸಮುದಾಯವನ್ನು ಮುನ್ನಡೆಸುವ ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ. ಆದುದರಿಂದ ಪರಿಪೋಷಕ ಸಂಸ್ಥೆ ತನ್ನ ಪಾತ್ರವನ್ನು ಮುಖಾಮುಖಿಯಾಗಿ ಸಮುದಾಯದ ಮುಂದೆ ಪುನರುಚ್ಚರಿಸಬೇಕಾಗುತ್ತದೆ. ಅದು ಸಮುದಾಯದ ಸದಸ್ಯರ ಬೆಳವಣಿಗೆ ಮತ್ತು ಪರಿಪಕ್ವತೆಯನ್ನು ಪ್ರಶಂಸಿಸುತ್ತದೆ. ಅಭಿವೃದ್ಧಿ ಕ್ಷೇತ್ರದಲ್ಲಿ ಈ ಹಂತವನ್ನು “ನಿರ್ಗಮನ ಅವಸ್ಥೆ” ಅಥವಾ “ನಿರ್ಗಮನ ನೀತಿ” ಎನ್ನುತ್ತಾರೆ.

“ನಿರ್ಗಮನ ನೀತಿ”ಯಾಗಲಿ “ನಿರ್ಗಮನ ಅವಸ್ಥೆ”ಯಾಗಲಿ ಒಂದು ಪ್ರಕ್ರಿಯೆ ಬದಲಾದ ಪಾತ್ರ ತಾರ್ಕಿಕ ಎಂಬ ಅರ್ಥವನ್ನು ಕೊಡುವುದಿಲ್ಲ. ಈ ಪದವೃಂದದ ಮೂಲಾರ್ಥದ ಬಗ್ಗೆ ವಿಶ್ಲೇಷಣೆ ಮಾಡದೆ ಈ ಕೈಪಿಡಿಯ ಲೇಖಕರು ಈ ಅವಸ್ಥೆಯನ್ನು ಅದರಲ್ಲಿ ನಿರ್ಗಮನವಿದ್ದರೂ “ಪರಿಪೋಷಕ ಸಂಸ್ಥೆಯ ಬದಲಾದ ಪಾತ್ರ” ಎನ್ನುತ್ತಾರೆ. ಸಮುದಾಯದ ದೃಷ್ಟಿಕೋನದಲ್ಲಿ ಈ ಹಂತವನ್ನು “ಶೇಕಡ ೧೦೦ ರಷ್ಟು” “ಸಕ್ರಿಯ ಸ್ವಾವಲಂಬಿ ಯೋಜನೆ ಮತ್ತು ತಾಂತ್ರಿಕವಾಗಿ ಸಬಲ ಸಮುದಾಯ” ಎಂದು ಪರಿಗಣಿಸಬಹುದು.

ಈ ಸಂದರ್ಭ ಸಮುದಾಯ ಮತ್ತು ಸಂಸ್ಥೆ ಕೊಟ್ಟ ಆಮಂತ್ರಣವಾಗಿದ್ದು ಇವೆರಡೂ ಬದಲಾದ ಪಾತ್ರಗಳನ್ನು ಹೊಸದಾಗಿ ನಿರೂಪಿಸಿ ತಮ್ಮ ತಮ್ಮ ಹೊಸ ಪಾತ್ರಗಳ ಇತಿಮಿತಿ ವ್ಯಾಪ್ತಿಯನ್ನು ನಿಗಧಿಪಡಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಸಂಬಂಧಗಳ ಸಂಪೂರ್ಣ ಕಡಿತವಿಲ್ಲ, ಅದನ್ನು ಸಂಸ್ಥೆಯೂ ಅಪೇಕ್ಷಿಸುವುದಿಲ್ಲ ಅಥವಾ ಅದು ಮಾನವೀಯತೆಯೂ ಅಲ್ಲ. ಇಲ್ಲಿ ಸಂಬಂಧ ವಿಭಿನ್ನ ರೂಪ ತಳೆದರೂ ಸ್ವಭಾವ ಮಾತ್ರ ಮುಂದುವರೆಯುತ್ತದೆ. ಇಲ್ಲಿ ಸಂಸ್ಥೆ ತನ್ನ ತೊಡಗುವಿಕೆ ಮತ್ತು ಪೋಷಣೆಯನ್ನು ಏಕ ಪ್ರಕಾರದಲ್ಲಿ ಕಡಿಮೆ ಮಾಡುತ್ತದೆ. ಇದುವರೆಗಿದ್ದ ಜೊತೆ ಜೊತೆತನ ಮತ್ತು ಒಳಪ್ರವೇಶದ ತೀವ್ರತೆ ಗಣನೀಯವಾಗಿ ತಗ್ಗುತ್ತದೆ. ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಇನ್ನು ಮುಂದೆ ನಾವು ಯಾವ ಮಟ್ಟದಲ್ಲಿ ಈ ಪರಿಸ್ಥಿತಿಯನ್ನು ಮುಂದುವರಿಸಬೇಕು. ಈ ಹಿಂದಿದ್ದ ಸಂಬಂಧಗಳನ್ನು ಪರಸ್ಪರ ಅರಿವು ಮತ್ತು ಸಂವಾದದ ಮುಖಾಂತರ ಜರುಗುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಅದು ನಿರ್ದಿಷ್ಟ ಸನ್ನಿವೇಶದಲ್ಲಿದ್ದು ಅದನ್ನು ಸಾಮಾನಿಕರಿಸುವಂತಿಲ್ಲ.

## ವಿನ್ಯಾಸ ಮತ್ತು ಅನುಷ್ಠಾನ

"ಬದಲಾದ ಪಾತ್ರ" ಯಾವುದೇ ಸಮಾಜ ಸೇವಾ ಸಂಸ್ಥೆಯ ಸಾಮಾನ್ಯ ರಣನೀತಿಯಾಗಿದ್ದು ಅದು ಅಭಿವೃದ್ಧಿ ಯೋಜನೆಯ ಭಾಗವಾಗಿದ್ದರೂ ಅದನ್ನು ಪ್ರಾರಂಭದಲ್ಲಿ ಬಹಿರಂಗವಾಗಿ ಪ್ರಕಟಿಸಿರಲಿಲ್ಲ. ಈಗ ಸಂಚಲನ ಮತ್ತು ಗುಂಪುಗಳು ಪ್ರಬುದ್ಧಿಯನ್ನು ಸಾಧಿಸಿರುವುದರಿಂದ ವಿಳಂಬಿಸುವಂತಿಲ್ಲ. ಈ ಪ್ರಕ್ರಿಯೆಯನ್ನು ಈಗ ಅಗತ್ಯ ವಿನ್ಯಾಸವನ್ನು ನಿಯೋಜಿಸಿ ಉಪಕ್ರಮಿಸಬೇಕಾಗುತ್ತದೆ. ಈಗ ಗುಂಪುಗಳು ಮತ್ತು CBO ಗಳು ಜೊತೆಗೂಡಿ ದುಡಿಯುವ ವಿಧಾನವನ್ನು ಕಲಿತುಕೊಂಡಿರುತ್ತಾರೆ. ಸಾಮಾನ್ಯವಾಗಿ ಬದಲಾಗುವ ಪಾತ್ರದ ಪ್ರಕ್ರಿಯೆ ನಿರಾತಂಕವಾಗಿ ಕಾರ್ಯಗತವಾಗಲು ಕನಿಷ್ಠ ೩ ವರ್ಷಗಳನ್ನು ತೆಗೆದುಕೊಳ್ಳುತ್ತದೆ.

## ಸಾಗುವ ಮಾರ್ಗಗಳು

- ಗುಂಪುಗಳೊಂದಿಗೆ ಸಂಸ್ಥೆಯ ಬದಲಾಗುವ ಪಾತ್ರದ ಬಗ್ಗೆ ಚರ್ಚಿಸಿರಿ. ಬದಲಾಗುವುದು ಅಗತ್ಯವಾಗಿತ್ತು ಮತ್ತದು ಫಲಪಕ್ವತೆಯ ಸಂಕೇತವೂ ಆಗಿತ್ತು. ಗುಂಪುಗಳು ಮತ್ತು ಸಮುದಾಯಗಳು ಹಿಂದೆ ಆರಂಭಿಸಿದ ಪ್ರಕ್ರಿಯೆಯನ್ನು ನಿರ್ವಹಿಸಲು ಪ್ರಬುದ್ಧತೆಯನ್ನು ಪಡೆದಿದೆ ಎಂಬುದನ್ನು ವಿವರಿಸಿ. ಈಗ ತೀವ್ರ ನಿಗಾ ಇಲ್ಲದೆ ಸ್ವಾವಲಂಬಿಯಾಗಿ ಮುಂದುವರಿಯುವ ತಾಂತ್ರಿಕತೆಯನ್ನು ಹೊಂದಿದೆ.
- "ನಿರ್ಗಮನ ಅವಸ್ಥೆ" ಪ್ರಕ್ರಿಯೆಯ ಬಗ್ಗೆ ಗುಂಪುಗಳು ಮತ್ತು CBOಗಳು ಅಧಿಕ ಆತ್ಮವಿಶ್ವಾಸ ಮತ್ತು ದೃಢತೆಯಿಂದ ಮುಂದುವರಿಯುವ ರಣನೀತಿಯ ಕುರಿತು ವಿವಿಧ ಮಟ್ಟದಲ್ಲಿ ಮಾತುಕತೆಯನ್ನು ಉಪಕ್ರಮಿಸಲಿ.
- ಈ ಕರಡು ಯೋಜನೆ ಅಂತಿಮ ಪಠ್ಯವಾಗುವವರೆಗೆ ಮಾತುಕತೆ ನಿಧಾನವಾಗಿ ಸಾಗಲಿ. ಏಕೆಂದರೆ ಈ ಮಧ್ಯಂತರದಲ್ಲಿ ಗುಂಪುಗಳು ಮತ್ತು CBO ಹಾಗೂ ಸಂಸ್ಥೆಯ ಮಧ್ಯೆ ಸಂವೇದನೆ ಭಾವಪೂರ್ಣವಾಗಿರುತ್ತದೆ. ಅದು ಶಮನವಾಗಬೇಕು.
- ಈ ಯೋಜನೆಯಲ್ಲಿ ಎರಡು ಹಂತಗಳಿವೆ: ಸ್ಥಿತ್ಯಂತರ ಅವಸ್ಥೆ ಮತ್ತು ಪರಿಪೋಷಕ ಸಂಸ್ಥೆಯ ಬದಲಾದ ಪಾತ್ರ.
- ಈ ಎರಡು ಹಂತಗಳ ಬಗ್ಗೆ ತೀರ್ಮಾನವಾದ ಮೇಲೆ ನಿರ್ದಿಷ್ಟ ಸಮಯದ ಬಗ್ಗೆ ಸಮುದಾಯದ ಸದಸ್ಯರು, ಸಂಬಂಧ ಪಟ್ಟ ಹೂಡಿಕೆದಾರರು ಮತ್ತು ಇತರರಿಗೆ ಈ ಸಮಾಚಾರವನ್ನು ಪ್ರಕಟಿಸುವುದು.

- ಸ್ಥಿತ್ಯಂತರ ವ್ಯವಸ್ಥೆಯ ಭಾಗವಾಗಿ ಪರಿಪೋಷಕ ಸಂಸ್ಥೆಯು ಈವರೆಗೆ ಅರಿವು ನೀಡುತ್ತಿದ್ದ ಕ್ಷೇತ್ರಗಳ ಪಟ್ಟಿ ಮಾಡಿ ಅಲ್ಲಿ ಬದಲಿ ವ್ಯವಸ್ಥೆಯನ್ನು ಮಾಡತಕ್ಕದ್ದು. ಅವನ್ನು ಸರಕಾರ ಅಥವಾ ಏಜೆನ್ಸಿಗಳ ಯೋಜನೆಗಳೊಂದಿಗೆ ಸಂಪರ್ಕ ಕಲ್ಪಿಸಿಕೊಡತಕ್ಕದ್ದು ಅಥವಾ ಸಮುದಾಯದ ಮುಖಂಡರ ಮೇಲ್ವಿಚಾರಣೆಗೆ ವಹಿಸಿಕೊಡುವುದು. ಇದನ್ನು ಅನುಷ್ಠಾನಕ್ಕೆ ತರುವಾಗ ಅದರಲ್ಲಿ ನಿರಂತರ ಪುನರಾವಲೋಕನ ಪ್ರಕ್ರಿಯೆ ಇದ್ದು ಸಮುದಾಯದ ಸದಸ್ಯರು ಭವಿಷ್ಯ ಮತ್ತು ತಮ್ಮ ಪಾತ್ರದ ಬಗ್ಗೆ ಆತ್ಮವಿಶ್ವಾಸವುಳ್ಳವರಾಗುವಂತೆ ಆಡಳಿತದ ಪೂರ್ವರುಚಿಯನ್ನು ಸೃಷ್ಟಿಸುವುದು.
- ಗುಂಪು ಮುಖಂಡರ ಮತ್ತು ಸದಸ್ಯರು ತಮ್ಮ ಪಾತ್ರದ ಬಗ್ಗೆ ಪುನರ್ಮನನ ಮಾಡಿ ಪೋಷಕ ಸಂಸ್ಥೆಯಿಂದ ಸೂಚನೆಗಳನ್ನು ಸ್ವೀಕರಿಸಿ ಸ್ಥಿತ್ಯಂತರ ನಂತರದ ವ್ಯವಸ್ಥೆಯನ್ನು ಕುರಿತು ಸಹಮತ ಏರ್ಪಡಿಸಲು ಪ್ರಯತ್ನಿಸಿ. ಸಂಸ್ಥೆಗೆ ಕೇವಲ ಸೂಚನೆ ನೀಡುವ ಅವಕಾಶವಲ್ಲದೆ ಅದು ಪರವಾದ ಮತ್ತು ಜಾಲತಾಣ ಮತ್ತಿತರ ಜವಾಬ್ದಾರಿಗಳಿಗೆ ಸೀಮಿತವಾಗಿರುತ್ತದೆ. ಯಾವುದೇ ಪಾತ್ರವಾದರೂ ಅದು ನಿರ್ದಿಷ್ಟವಾಗಿರಬೇಕು ಹಾಗೂ ಸಾಮಾನ್ಯ ಅರಿನಿಂದ ಪ್ರೇರಿತವಾಗಿರಬೇಕು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಉಪಯುಕ್ತ ಸೂಚನೆಗಳು

- ಈ ಯೋಜನೆಯನ್ನು ಪ್ರಾರಂಭಿಸಿದ ಸಮಯದಿಂದ ಪ್ರಸ್ತುತ ಸಮಯದವರೆಗೆ ಕಂಡುಕೊಂಡ ಬೆಳವಣಿಗೆಯನ್ನು ಕುರಿತು ಬದಲಾವಣೆಯ ವಾಸ್ತವತೆಯನ್ನು ಮಂಡಿಸಿರಿ.
- ಇದುವರೆಗೆ ನಡೆದು ಬಂದ ಮಾರ್ಗದ ಸುಮಧುರ ಗಳಿಗೆಗಳನ್ನು ಜ್ಞಾಪಕಕ್ಕೆ ತರಲು ಸಣ್ಣ ಕೃತಜ್ಞತಾ ಸಭೆಗಳನ್ನು ಏರ್ಪಡಿಸಿರಿ. ಹೀಗೆ ನಿರ್ಗಮನ ಅವಸ್ಥೆ ವಂದನಾರ್ಪಣೆಯ ಸುಮಧುರ ಸಮಯವಾಗಿ ಅಂತ್ಯಗೊಳ್ಳಲಿ.
- ನಿರ್ಗಮನ ನೀತಿಯ ಅನುಷ್ಠಾನ ಸ್ಫೂರ್ತಿದಾಯಕವಾಗಿರಬೇಕು. ಮುಂದಿನ ಪ್ರತಿ ೬ ತಿಂಗಳುಗಳಲ್ಲಿ ಪೋಷಕ ಸಂಸ್ಥೆ ಮತ್ತು ಸಮುದಾಯದ ಗುಂಪುಗಳು ಕುಳಿತು ಅಗತ್ಯ ಬೆಳವಣಿಗೆ ಮತ್ತು ಬದ್ಧವಿಸಿದ ಚಿತ್ರಣದ ಪುನರ್ಮನನ ಮಾಡುತ್ತಾರೆ.
- ಸಮುದಾಯ ಸಂಚಲನದ ೮ ರಿಂದ ೯ ವರ್ಷಗಳ ಅವಧಿಯಲ್ಲಿ ಅಂತಿಮ ಮೂರು ವರ್ಷಗಳು ಬದಲಾವಣೆಯ ಸಂಕ್ರಮಣಕ್ಕೆ ಸೂಕ್ತ ಸಮಯವೆನ್ನಬಹುದು.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿರಿ ಅಥವಾ ಮಾರ್ಪಡಿಸಿರಿ)

## ಉಪಯುಕ್ತ ಎಚ್ಚರಿಕೆಗಳು

- ಪೋಷಕ ಸಂಸ್ಥೆಯ ಮುಂದುವರಿಯುವಿಕೆಯ ಬಗ್ಗೆ ಕಾರಣ ಮತ್ತು ಸಮಜಾಯಿಸಿಕೊಳ್ಳುವ ವಿಧಾನಗಳು ಇದ್ದೇ ಇರುತ್ತವೆ. ಅಧಿಕ ಸಹಸಂಬಂಧದ ಯೋಚನೆಯನ್ನು ದೂರ ಮಾಡಿ.
- ಇದ್ದಕ್ಕಿದ್ದಂತೆ ನಿರ್ಗಮನ ನೀತಿಯನ್ನು ಕಾರ್ಯಗತ ಮಾಡಬೇಡಿ.
- ಪರಿಪೋಷಕ ಸಂಸ್ಥೆ ಮುಂದಿನ ಸಂಘಟನಾ ವಿಧಾನಗಳನ್ನು ಹೇರದಿರಲಿ. ಅಥವಾ ನಿರ್ಗಮನ ಅವಸ್ಥೆಯ ನಂತರದ ವ್ಯವಸ್ಥೆಯ ಬಗ್ಗೆ ವಾಗ್ದಾನ ಮಾಡದಿರಲಿ. ಯಾವುದೇ ತೀರ್ಮಾನ ಪರಸ್ಪರ ಸಹಮತದಿಂದಾಗಲಿ.
- (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ಸೂಚಿಗಳು

1. XXX ಗುಂಪುಗಳು ಮತ್ತು XXX CBOಗಳು ನಿರ್ಗಮನ ನೀತಿಯ ಬಗ್ಗೆ ಮಾಹಿತಿ ಪಡೆದಿವೆ.
2. XXX ಗುಂಪುಗಳು ಮತ್ತು XXX CBOಗಳು ಸಮುದಾಯ ಅಭಿವೃದ್ಧಿ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ಯಲು ಆತ್ಮವಿಶ್ವಾಸ ಹೊಂದಿವೆ.
3. XXX ಗುಂಪುಗಳು ಮತ್ತು XXX CBOಗಳು ಪರಿಪೋಷಕ ಸಂಸ್ಥೆಯ ಜೊತೆಗೂಡಿ ನಿರ್ಗಮನ ನೀತಿಯ ಬಗ್ಗೆ ಸವಿಸ್ತಾರ ವಿಚಾರ ವಿನಿಮಯ ಮಾಡಿರುತ್ತವೆ.
4. XXX ಗುಂಪುಗಳು ಮತ್ತು XXX CBOಗಳು ಸ್ಥಿತ್ಯಂತರ ಸ್ವಾವಲಂಬಿ ಯೋಜನೆ ಸುಗಮವಾಗಿ ಸಾಗುವಂತೆ ಸಂಯೋಜನೆ ಮಾಡಿರುತ್ತವೆ.
5. XXX ಗುಂಪುಗಳು ಮತ್ತು XXX CBOಗಳು ಸ್ವಾವಲಂಬಿ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗಲು ಸಂಪನ್ಮೂಲ ಕ್ರೋಢೀಕರಿಸುವ ವಿಧಾನಗಳನ್ನು ಖಚಿತಪಡಿಸಿಕೊಂಡಿರುತ್ತವೆ.
6. XXX ಗುಂಪುಗಳು ಮತ್ತು XXX ಸಮುದಾಯದ ಸದಸ್ಯರು ತಮ್ಮ ಸಾಮರ್ಥ್ಯ ಮತ್ತು ಸಾಧನೆಯ ಬಗ್ಗೆ ಹೆಮ್ಮೆ ಪಡುತ್ತಾ ಸಮುದಾಯದ ಉಸ್ತುವಾರಿಯನ್ನು ನೋಡಿಕೊಳ್ಳಲು ಸಿದ್ಧರಾಗಿರುತ್ತಾರೆ.
7. XXX ಗುಂಪುಗಳು ಮತ್ತು XXX CBOಗಳು ಪರಿಪೋಷಕ ಸಂಸ್ಥೆಯ ಬದಲಾದ ಪಾತ್ರ ಸೂಕ್ತ ಹೆಜ್ಜೆಯೊಂದು ತಮ್ಮ ಪಾತ್ರವನ್ನು ಗುರುತಿಸಿಕೊಂಡಿವೆ.
8. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)

## ನಿರ್ಗಮನ ನೀತಿಯ ಫಲಿತಾಂಶಗಳು

| ಕ್ರಮ ಸಂಖ್ಯೆ | ಪರಿಪೋಷಕ ಸಂಸ್ಥೆಯ ಪ್ರಮುಖ ಕೊಡುಗೆಗಳು | ಸ್ವಾವಂಬನಾ ಯೋಜನೆ ಮತ್ತು ಸಮುದಾಯದ ತಾಂತ್ರಿಕತೆ | ಜವಾಬ್ದಾರಿಯುತ ವ್ಯಕ್ತಿ ಅಥವಾ ಏಜೆನ್ಸಿ |
|---|---|---|---|
| 1. | ತರಬೇತಿ ಮತ್ತು ಸಬಲೀಕರಣ ಅಭಿವೃದ್ಧಿ | | |
| 2. | ಸಹಕಾರ ಮತ್ತು ಇತರ ಏಜೆನ್ಸಿಗಳೊಡನೆ ಪರವಾದ | | |
| 3. | ಸಹಯೋಗ, ಜಾಲತಾಣ ಮತ್ತು ಮೈತ್ರಿ | | |
| 4. | ಕ್ರಿಯೆ–ಚಿಂತನೆ ಮತ್ತು ಕಲಿಕೆಯ ಅಳವಡಿಕೆ | | |
| 5. | ಸ್ವಯಂ ಸೇವೆ, ಕೊಡುಗೆ ಮತ್ತು ಹಂಚಿಕೆ | | |
| 6. | ಕ್ಷೇತ್ರ ದರ್ಶನ ಮತ್ತು ಪೂರಕ ಕಲಿಕೆ ಅವಕಾಶ | | |
| 7. | ದಾಖಲೆ, ಪತ್ರಗಳ ಸಂರಕ್ಷಣಾ ಪ್ರಕ್ರಿಯೆ | | |
| 8. | ಮಾನವ ಸಂಪನ್ಮೂಲಗಳ ಕ್ರೋಢೀಕರಣ | | |
| 9. | ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣ | | |
| 10. | ಆಚರಣೆ ಮತ್ತು ಬಹಿರಂಗ ಸಮಾರಂಭಗಳ ಆಲೋಚನೆ | | |
| 11. | ಇತರೆ | | |

# ಚಿಂತನೆ ಮತ್ತು ಹಂಚಿಕೆಗೆ ಪ್ರಶ್ನೆಗಳು

1. ಗುಂಪುಗಳು ಮತ್ತು CBOಗಳು "ನಿರ್ಗಮನ ಪಾತ್ರ"ಗಳ ಬಗ್ಗೆ ಅದರ ಉದ್ದೇಶ ಮತ್ತು ತರ್ಕಗಳನ್ನು ಅರ್ಥಮಾಡಿಕೊಂಡಿರುವರೇ? ಭಿನ್ನಾಭಿಪ್ರಾಯದ ಕೂಗು ಏನಾದರು ಇದೆಯಾ? ಅದನ್ನು ಅವರು ಹೇಗೆ ಸ್ವೀಕರಿಸಿದ್ದಾರೆ?
2. ಸ್ಥಿತ್ಯಂತರ ನೀತಿಯನ್ನು ಹಂಚಿಕೊಂಡ ನಂತರ ಬಾಹ್ಯ ಹೂಡಿಕೆದಾರರ ಪ್ರತಿಕ್ರಿಯೆ ಏನಾಗಿತ್ತು?
3. ಸ್ಥಿತ್ಯಂತರ ಯೋಜನೆಯ ಯಾವ ಭಾಗ ಅನುಷ್ಠಾನಕ್ಕೆ ತರುವುದು ಕಷ್ಟಕರವಾಗಿತ್ತು?
4. ಯಾವ ವಿಭಾಗದಲ್ಲಿ ಸಮುದಾಯ ಆತ್ಮವಿಶ್ವಾಸವನ್ನು ಹೊಂದಿದೆ ಮತ್ತು ಯಾವ ವಿಭಾಗದಲ್ಲಿ ಸ್ವಂತವಾಗಿ ದುಡಿಯಲು ಹಿಂಜರಿಯುತ್ತಿದ್ದಾರೆ?
5. ಯಾವ ವಿಧದಲ್ಲಿ ಸಂಸ್ಥೆಯ ಪರಿಪೋಷಕತೆ ಹಿಂದಿನ ವರ್ಷಗಳಿಗೆ ಹೋಲಿಸಿದಂತೆ ಅಂತಿಮ ಅವಸ್ಥೆಯಲ್ಲಿ ವಿಭಿನ್ನವಾಗಿತ್ತು?
6. (ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ಅಥವಾ ಮಾರ್ಪಡಿಸಿರಿ)



# ಉಪಸಂಹಾರ

ಸಮುದಾಯದ ಸಂಚಲನ ಪ್ರಕ್ರಿಯೆಗಳಲ್ಲಿ ತೊಡಗಿರುವ ಅಭಿವೃದ್ಧಿ ಅಭ್ಯಾಸಿತರನ್ನು ಗಮನದಲ್ಲಿರಿಸಿ ಈ ಕೈಪಿಡಿಯನ್ನು "ಸಹಪಾಠಿ"ಯನ್ನಾಗಿ ಬರೆಯಲಾಗಿದೆ. ಅನುಭವದ ಕಲಿಕೆಯನ್ನು ಆಧಾರವನ್ನಾಗಿಸಿ ಈ ಪ್ರಕ್ರಿಯೆಯನ್ನು ಕೆಳಗಿನ ನಾಲ್ಕು ಪ್ರಮುಖ ಸ್ತಂಭಗಳ ಮೇಲೆ ನಿರ್ಮಿಸಲಾಗಿದೆ. ಇಲ್ಲಿ ೧೨ ಹೆಜ್ಜೆಗಳ ಪ್ರಕ್ರಿಯೆಯನ್ನು ಅಭಿವೃದ್ಧಿಪಡಿಸುತ್ತಾ ಈ ನಾಲ್ಕು ಸ್ತಂಭಗಳನ್ನು ಅಸ್ತಿವಾರದ ಬಾಹ್ಯ ಆಕೃತಿಯನ್ನಾಗಿಸಿಕೊಳ್ಳಲಾಗಿದೆ. ಪ್ರಗತಿಯನ್ನು ಮಾಪನ ಮಾಡಲು ಸೂಚಿಗಳಿದ್ದು ಈ ಕಂಭಗಳನ್ನು ಬಲಪಡಿಸಲು ಪಡಿಯಚ್ಚುಗಳನ್ನು ಪ್ರಮುಖವಾಗಿ ಅಭಿವೃದ್ಧಿಪಡಿಸಲಾಗಿವೆ.

**ಪ್ರಥಮತ:** ಸಮುದಾಯದ ಸದಸ್ಯರನ್ನು "ಚಾಲಕನ ಆಸನ"ದಲ್ಲಿ ಪ್ರಜ್ಞಾಪೂರ್ವಕವಾಗಿ ಕೂರಿಸಿ ಈ ಕೈಪಿಡಿ ಎಲ್ಲ ಬಾಹ್ಯ ವ್ಯಕ್ತಿಗಳಾದ NGO, ಸಚೇತಕರು, ಜನೋಪಯೋಗಿಗಳು ಮತ್ತು ತರಬೇತಿದಾರರನ್ನು "ಪರಿಪೋಷಕ" ಪಾತ್ರದಲ್ಲಿರಿಸುತ್ತದೆ. ಸೈದ್ಧಾಂತಿಕವಾದ ಈ ಆಯಕಟ್ಟು ಅನೇಕ ಜನರಿಗೆ ಒಪ್ಪಿಗೆಯಾದರೂ ಯೋಜನೆಯನ್ನು ಅನುಷ್ಠಾನಕ್ಕೆ ತಂದು ಕಾರ್ಯಗತ ಮಾಡುವಾಗ ಆಗಿಂದಾಗ್ಗೆ ಪಾತ್ರಗಳು ಪುನರಾವರ್ತನೆಗೊಳ್ಳಬಹುದು. ಅನೇಕ ಅಭ್ಯಾಸಿತರು ತರ್ಕ ಮಾಡುವುದೇನೆಂದರೆ, ಸಾಮಾಜಿಕ ಬಹಿಷ್ಕಾರದಂಥಹ ತಾರತಮ್ಯದ ಅನುಭವ, ಆರ್ಥಿಕತೆಯ ಅಪಹರಣ, ಸಾಂಸ್ಕೃತಿಕ ಬೇರ್ಪಡುವಿಕೆ ಮತ್ತು ರಾಜಕೀಯ ದ್ವೇಷ ಉದ್ದಗಲಗಳಲ್ಲಿ ಬೇರೂರಿರುವುದನ್ನು ನಾವು ಕಾಣುತ್ತೇವೆ. ಅದನ್ನು ಪಟ್ಟಣ ಮತ್ತು ಗ್ರಾಮೀಣ ಪ್ರದೇಶದ ಬಹುತೇಕ ಬಡವರು ಪ್ರಶ್ನಾತೀತವಾಗಿ ಅಂಗೀಕರಿಸಿ ಈ ನಿಷ್ಠುರ ಕೃತ್ಯವನ್ನು 'ವಾಸ್ತವಿಕ' ಕರ್ಮವೆಂದು ಸ್ವೀಕರಿಸುತ್ತಾರೆ. ಹೀಗೆ ಅವರು ವಸ್ತು ನಿಷ್ಠವಾಗಿ ವಿಶ್ಲೇಷಿಸುವ ಹಾಗೂ ಈ ಸಂಪ್ರದಾಯವನ್ನು ಪ್ರಶ್ನಿಸುವ ಶಕ್ತಿಯನ್ನು ಕಳೆದುಕೊಂಡಿರುತ್ತಾರೆ. ಇದರ ಮಧ್ಯದಲ್ಲಿ, ಬಹುತೇಕ ಜನರು ಅಕ್ಷರ ಜ್ಞಾನ, ಕೌಶಲ್ಯ, ಸಾಮರ್ಥ್ಯ ಮತ್ತು ಜೀವನ ಗುರಿಯಿಲ್ಲದವರಾಗಿದ್ದಾರೆ. ಆದುದರಿಂದ

ಸಮುದಾಯದ ಸದಸ್ಯರನ್ನು "ವಾಹಕನ ಆಸನ"ದಲ್ಲಿ ಕೂರಿಸುವುದು ಆತಂಕಕಾರಿ. ಏಕೆಂದರೆ ಅವರು "ಪರಿವರ್ತನಾ ವಾಹಕರಾಗದ" ಅಲಂಕಾರ ಮೂರ್ತಿಗಳಾಗಿ ಉಳಿಯುವರು ಎಂದು ಭಾವಿಸಬಹುದು. ಈ ತರ್ಕವನ್ನು ಭಾಗಶಃ ಅಂಗೀಕರಿಸಿದರೂ ಅದಕ್ಕೆ ಇನ್ನೊಂದು ಮುಖವಿದೆ. ಸಮುದಾಯದಲ್ಲಿ ಯಾರೂ ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸಬೇಕು ಎಂಬ ಹಂಬಲವಿಲ್ಲದವರು ಇಲ್ಲ ಎಂಬುದನ್ನು ನಿರಾಕರಿಸಲಾಗದು. ಪರಿಸ್ಥಿತಿ ಎಷ್ಟೇ ಹೀನಾಯಮಾನವಾಗಿದ್ದರೂ ಅವರು ಅನುಮಾನವಿಲ್ಲದೆ ಉತ್ತಮ ಭವಿಷ್ಯವನ್ನು ನಿರೀಕ್ಷಿಸುತ್ತಾ ಬದುಕುತ್ತಾರೆ. ಎಷ್ಟೇ ತೊಡಕುಗಳಿದ್ದರೂ ಅವರು ಸೌಹಾರ್ದ ಸೋದರತ್ವ, ಹಂಚಿಕೆ, ನ್ಯಾಯ ಮತ್ತು ಅನುಕಂಪದಂತಹ ಕೆಲವು ಮೌಲ್ಯಗಳನ್ನು ಪರಿಪಾಲಿಸುತ್ತಾ ಬಡವರ ಮಧ್ಯೆ ಬದುಕುತ್ತಾರೆ. ಸಮುದಾಯ ಸಂಚಲನದ ಮೊದಲನೆಯ ಉದ್ದೇಶವೇನೆಂದರೆ, ಸಮುದಾಯದ ಸದಸ್ಯರಿಗೆ ಕೆಲವು ಮೂಲಭೂತ ಸೌಕರ್ಯಗಳನ್ನಿತ್ತು ಅವರಲ್ಲಿ ಅತ್ಯುತ್ತಮವಾದ ಸಾಮೂಹಿಕ ಅರಿವನ್ನು ಹೊರತರುವುದು. ಅಂತಿಮವಾಗಿ ಸಮುದಾಯದ ಸದಸ್ಯರೇ ಸದಾ ಉಳಿಯುವ ಎಂದೂ ಅಳಿಯದ ಸಮಾಜ ಅಭಿವೃದ್ಧಿಯ ವಾಹಕರೂ ಚುಕ್ಕಾಣಿ ಹಿಡಿಯುವವರೂ ಆಗುತ್ತಾರೆ.

ಎರಡನೆಯದಾಗಿ, ಅಭಿವೃದ್ಧಿ ಕಾರ್ಯವನ್ನು ಅನುಷ್ಠಾನಕ್ಕೆ ತರುವಾಗ ಪೂರ್ಣ ವಿವೇಚನೆಯಿಂದ ಅದರ ಮಾದರಿಯಲ್ಲಿ ಬದಲಾವಣೆ ತರಲಾಗುತ್ತದೆ. ಇಂದಿನ ಬೇಡಿಕೆ ಏನೆಂದರೆ ಬಡತನ ನಿರೋಧನೆ ಪ್ರಕ್ರಿಯೆಯಲ್ಲಿ ದಾನಧರ್ಮಕ್ಕಿಂತ ಹಕ್ಕು ಆಧಾರಿತ ಸಾಮಾಜಿಕ ನಮೂನೆಯನ್ನು ಜಾರಿಗೆ ತರುವುದು. ಅಂತೆಯೇ ಪ್ರತಿ ವ್ಯಕ್ತಿ ಮತ್ತು ವಿಶೇಷವಾಗಿ ಭಾದಿತ ಬಡವರನ್ನು ಗಮನದಲ್ಲಿರಿಸಿ ಸಾಮೂಹಿಕ ಅರಿವು ಅಥವಾ ಜ್ಞಾನಕ್ಕೆ ಪ್ರಾಮುಖ್ಯತೆಯನ್ನೀಯುವುದು. ಸಮಾಜ ಸೇವಾ ನಿರ್ವಾಹಕರ ಮುಖಾಂತರ ಪೌರರಾದ ಅವರ ಜಂಟಿ ಸಾಮರ್ಥ್ಯವನ್ನು ಪರಿಗಣಿಸಲಾಗುವುದು. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಯುಗದಲ್ಲಿ ದೇಶಗಳು ತಮ್ಮ ಸಂವಿಧಾನಿಕ ಹೊಣೆಗಾರಿಕೆ ಮತ್ತು ಸಮರ್ಪಣೆಯಿಂದ ವಿಮುಖರಾಗುತ್ತಿರುವಾಗ ಪೌರತ್ವದ ಬಗ್ಗೆ ವಿಚಾರ ವಿನಿಮಯ ಮಾಡುತ್ತ ಅಭಿವೃದ್ಧಿ ಕ್ಷೇತ್ರದಲ್ಲಿ ಅದಕ್ಕೆ ಒತ್ತು ಕೊಡಲಾಗುತ್ತದೆ.

ಮೂರನೆಯದಾಗಿ ಸಮುದಾಯ ಬೆಂಬಲಿತ ಅಥವಾ ಜನಾಧಾರಿತ ಯೋಜನೆಗಳನ್ನು ಖಾತರಿಪಡಿಸಿಕೊಳ್ಳುವ ರಣನೀತಿಯನ್ನು ರೂಪಿಸುವುದು. ಈ ಪ್ರಕ್ರಿಯೆಯನ್ನು ಪೋಷಿಸಲು ಸಮುದಾಯ ಆಧಾರಿತ ಸಂಸ್ಥೆಗಳ ಸ್ಥಾಪನೆ ಅತ್ಯಗತ್ಯ. ಆದುದರಿಂದ ಸಮುದಾಯದ ಸದಸ್ಯರಿಗೆ ಸೇವಾ ನಿಯೋಗದ ಬಗ್ಗೆ ಸ್ಪಷ್ಟ ಮಾಹಿತಿಯನ್ನಿತ್ತು ಅವರೆಲ್ಲರೂ ಸಾಮಾನ್ಯ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ಅವರನ್ನು ಸಿದ್ಧಪಡಿಸಿರುವುದು. ಇಲ್ಲಿ ಸದಸ್ಯರಿಗೆ ತರಬೇತಿಯನ್ನಿತ್ತು ಸಬಲರನ್ನಾಗಿಸಲು ಅಗತ್ಯ ಅರಿವು, ಕೌಶಲ್ಯಗಳನ್ನು ಬಿತ್ತುವುದಲ್ಲದೆ ಪ್ರಜಾಪ್ರಭುತ್ವದ ರೀತಿ ನೀತಿಗನುಗುಣವಾಗಿ ತೀರ್ಮಾನ ಕೈಗೊಳ್ಳುವಂತೆ ಮಾಡುವುದು. ಈ ಪ್ರಕ್ರಿಯೆ ಎಷ್ಟು ಅಗತ್ಯವೋ ಅದರ ಫಲಿತಾಂಶವೂ ಅಷ್ಟೇ ಪ್ರಮುಖವಾಗುತ್ತದೆ. ಸಮುದಾಯ ಈ ಕಲಿಕೆಯನ್ನು ಅಂತರ್ಗತ ಮಾಡಿಕೊಂಡರೆ ಅವರು ಸಬಲರಾಗುವುದರಲ್ಲಿ ಎರಡು ಮಾತಿಲ್ಲ. ಹೀಗೆ ಅವರು ತಮ್ಮ ಮಾರ್ಗವನ್ನು ಸರಾಗವಾಗಿ ಕ್ರಮಿಸಲು ಶಕ್ತರಾಗುತ್ತಾರೆ. ಸಮುದಾಯದ ಸದಸ್ಯರು ಈ ಪ್ರಕ್ರಿಯೆಯ ಮೇಲೆ ಸ್ವಾಮ್ಯವನ್ನು ಸಾಧಿಸಿ ತಾವಿಡುವ ಪ್ರತಿಯೊಂದು ಹೆಜ್ಜೆಯನ್ನು ನಿರ್ಧರಿಸುತ್ತಾರೆ. ಸಹನೆ, ದಕ್ಷತೆಯೊಂದಿಗೆ ಸಮುದಾಯದ ನಾಡಿ ಮಿಡಿತಕ್ಕೆ ಅನುಗುಣವಾಗಿ ಸ್ಪಂದಿಸುವುದು ಅಗತ್ಯ.

ನಾಲ್ಕನೆಯದಾಗಿ, ಅಭಿವೃದ್ಧಿ ಪ್ರಕ್ರಿಯೆ ಕೇವಲ ಆರ್ಥಿಕ ಸಮಸ್ಯೆಯಲ್ಲ, ಅದರಲ್ಲಿ ವೈಯಕ್ತಿಕ ಮನೋಭಾವ, ಸಾಂಸ್ಕೃತಿಕ ಪರಿವರ್ತನೆ ಮತ್ತು ಜೊತೆಯಾಗಿ ಕನಸು ಕಾಣುವ ದೂರ ದರ್ಶನವೂ ಇರಬೇಕು. ಬಡವರನ್ನು ಬಹುಕಾಲದಿಂದ "ತ್ಯಾಜ್ಯ, ನಿರುಪಯುಕ್ತ ವಸ್ತು, ನಿರಕ್ಷರಿಗಳು, ಕಟುಕರು" ಮತ್ತು ಕೆಲವು ಸಂದರ್ಭಗಳಲ್ಲಿ ಅಪರಾಧಿಗಳು ಎಂದು ಕರೆಯಲಾಗುತ್ತಿತ್ತು. ಮೇಲ್ಜಾತಿಯವರು ಮತ್ತು ಆಡಳಿತರೂಢರಾದ ಪ್ರಬಲರು ಅವರನ್ನು ಹೀಗೆ ನಡೆಸಿಕೊಂಡು ಬಂದಿದ್ದರು. ಇಂದಿನ ಇಂತಹ ಸನ್ನಿವೇಶದಲ್ಲಿ ಬಡವರ ಪ್ರತಿಕ್ರಿಯೆ ಪ್ರಬಲವಾಗಿರಲೇಬೇಕು. ಅವರಲ್ಲಿ ಸಕಾರಾತ್ಮಕ ಚಿಂತನೆಯ ಬಿತ್ತನೆ, ಸ್ವಂತಿಕೆಯ ಸಮರ್ಥನೆ, ಪರ ಪ್ರಶಂಸೆ, ಸ್ವಯಂ ಸೇವಾ ಮನೋಭಾವ, ಕೊಡುಗೆ ಮತ್ತು ಹಂಚಿಕೆ ಅಪಾರ ಫಲಗಳನ್ನು ನೀಡುವುದರಲ್ಲಿ

ಅನುಮಾನವಿಲ್ಲ. ಈ ಪ್ರಕ್ರಿಯೆ ತನ್ನ ದೀರ್ಘ ನಡೆಯಲ್ಲಿ ಸ್ವಾವಲಂಬನವನ್ನು ಸಾಧಿಸುತ್ತದೆ. ಇಂಥಹ ಜನರನ್ನು ನಾವು ಮೆಚ್ಚಿಕೊಳ್ಳಬೇಕು. ಹೊಸ ಚಿಂತನೆಗಳನ್ನು ಪ್ರಯೋಗ ಮಾಡುವ ಅವಕಾಶವನ್ನು ಅವರಿಗೆ ಕೊಡುವುದರ ಜೊತೆಗೆ ಅವರ ಸ್ವ ಕೊಡುಗೆಯನ್ನೂ ಗುರುತಿಸಬೇಕು. ಬಹಿರಂಗವಾಗಿ ಅವರನ್ನು ಗೌರವಿಸಿದಾಗ ವ್ಯಕ್ತಿತ್ವ ವಿಕಸನಗೊಂಡು ಅದು ಸಾರ್ವಜನಿಕ ಕ್ಷೇತ್ರದಲ್ಲೂ ಗೋಚರಿಸುತ್ತದೆ. ಈ ಪ್ರಕ್ರಿಯೆಗಳು ಅವರ ಬಾಳಿನ "ಅಪೂರ್ವ ಆಸ್ತಿ"ಯಾಗುವುದು ಮಾತ್ರ ಖಚಿತ.

ಕೋವಿಡ್-೧೯ ನಮ್ಮ ದೇಶದ ಅಭಿವೃದ್ಧಿ ಕ್ಷೇತ್ರದ ಮೇಲೆ ಕಠಿಣ ಪ್ರತಿಕೂಲ ಪರಿಣಾಮವನ್ನು ಬೀರಿದೆ. ನಿರುದ್ಯೋಗ, ವಲಸೆ ಮತ್ತು ಮರುವಲಸೆಯ ಸಂಕಷ್ಟ ರಾಜ್ಯ ಸರಕಾರದಿಂದ ಸಾಮಾಜಿಕ ರಕ್ಷಣಾ ಕ್ಷೇತ್ರದಿಂದ ನಿರ್ಗಮನ, ಕಾರ್ಮಿಕ ಸುರಕ್ಷಾ ಕಾಯಿದೆಯ ವಿಸರ್ಜನೆ ಹಾಗೂ ದುರ್ಬಲತೆ, ಬಹುತೇಕ ಇವು ಮಧ್ಯಮ ಮತ್ತು ಕೆಳ ವರ್ಗದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ. ಇಲ್ಲಿ ಸರಕಾರದ ನಿಲುವು ಮತ್ತು ಇಬ್ಬಗೆಯ ನುಡಿ ಮತ್ತು ದುರಾಸೆಯ ವಾಣಿಜ್ಯ ವರ್ಗದ ಒಡನಾಟ ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಬಹಿರಂಗವಾಗಿದೆ. ಹೊಸ ಮುಕ್ತ ಮಾರುಕಟ್ಟೆ ಅವರನ್ನು ಕಂಗೆಡಿಸಿದೆ. ಹೀಗೆ ಉಂಟಾದ ಶೂನ್ಯತೆ ಮತ್ತು ಜನರ ಕೂಗನ್ನು ಭರಿಸಬೇಕಾಗಿದೆ. ದೇಶದ ಪೌರರ ಗೌರವಾನ್ವಿತ ಜೀವನದ ಬೇಡಿಕೆ, ಸಾಮಾನ್ಯ ಜನರ ಸ್ವಾಯತ್ತ ಜೀವನದ ಬೇಡಿಕೆ, ಪರಿಸರ ಪ್ರೇಮಿಗಳ ಕೋರಿಕೆಗಳು ಈಡೇರಬೇಕಾಗಿದೆ. ಕೋವಿಡ್ ನಂತರದ ಜನಬೆಂಬಲಿತ ಸಮುದಾಯಗಳ ಸಂಚಲನ ಹಿಂದೆಂದಿಗಿಂತಲೂ ಇಂದು ಪ್ರಮುಖವಾಗಿದ್ದು ಹೊಸ ಯುಗಕ್ಕೆ ತನ್ನ ಕ್ರಿಯಾತ್ಮಕತೆಯಿಂದ ಮೆರೆಯಲಿದೆ.

ಈಗಾಗಲೇ ಪ್ರಾಸ್ತಾವಿಕ ಅಧ್ಯಾಯದಲ್ಲಿ ನಿರೂಪಿಸಿರುವಂತೆ ಸಮುದಾಯ ಆಗ್ರಹಿತ ಪ್ರಕ್ರಿಯೆಯ ಆಯಕಟ್ಟನ್ನು ಉಪಕ್ರಮಿಸುವ ಪ್ರಯತ್ನ ಮಾಡಲಾಗಿದೆ. ಅಂತೆಯೇ ವಿವರಿಸಲಾದ ೧೨ ಹೆಜ್ಜೆಗಳು ಸಂಪೂರ್ಣ ಅಥವಾ ವಿಧಿಬದ್ಧವೆಂದು ಪರಿಗಣಿಸಲಾಗದು. ಈ ಹೆಜ್ಜೆಗಳನ್ನು ಬುಡಮಟ್ಟದ ವಾಸ್ತವತೆಯೊಂದಿಗೆ ಸಾಣೆ ಹಿಡಿಯಬೇಕು, ಪ್ರಯೋಗಿಸಬೇಕು. ಯಾವ ಸಂಸ್ಥೆ ಈ ೧೨ ಹೆಜ್ಜೆಗಳ ವಿಧಾನವನ್ನು ಅನುಸರಿಸುತ್ತದೋ ಅದು ನಾಲ್ಕು ಕಂಬಗಳ ಬಗ್ಗೆ ಗಮನವಹಿಸಿದರೆ ಅವುಗಳ "ಪರಿಪೋಷಕತೆ" ಯ ಬಗ್ಗೆ ಸಮುದಾಯದ ಸದಸ್ಯರು ಎಂದೆಂದೂ ಅದನ್ನು ಸ್ಮರಿಸದೆ ಇರುವುದಿಲ್ಲ.







# Select Bibliography


Boud, D., and N. Miller. (1997). *Working with Experience: Animating Learning*. London: Routledge

Dernbach, J. C. (2003). 'Achieving sustainable development: The Centrality and multiple facets of integrated decision-making'. *Indiana Journal of Global Legal Studies*, 247-285.

Gerard McElwee et. al. (2017). "Conceptualising animation in rural communities: The Village SOS case".

Gibbs, G., (1988). Learning by Doing: A guide to teaching and learning methods. Further Education Unit. Oxford Polytechnic: Oxford.

Heinrich C. J., (2002). "Outcomes-based Performance Management in the Public Sector: Implications for Government Accountability and Effectiveness". *Public Administration Review*, Vol. 62, No. 6, pp. 712–725.

Kenny, S. (2007). *Developing Communities for the Future* (3rd ed.). South Melbourne: Thompson.

Kovach, Margaret. (2009). *Indigenous methodologies. Characteristics, conversations and contexts*. Toronto: University of Toronto Press. p. 171.

Osborne, S. (2002). *Public Management – A Critical Perspective*, London: Routledge.

Schnarch, B. (2004). Ownership, control, access, and possession (OCAP) or self-determination applied to research: A critical analysis of contemporary First Nations research and some options for First Nations communities.

Smith, R. (2013). “Developing and Animating Enterprising Individuals and Communities: A Case Study from Rural Aberdeenshire, Scotland.” *Journal of Enterprising Communities, People and Places in the Global Economy* 6 (1): 57–83.

Spivak, G.C. (1988). *Can the Subaltern Speak?* Basingstoke: Macmillan, 1988.

Stoddart, H. (2011). *A Pocket guide to sustainable development governance*. Stakeholder Forum.

Strauss, Anselm L. (1978). “A Social World Perspective”, *Studies in Symbolic Interaction* 1: 119-128.



**ಡಾ. ಜೋಸೆಫ್ ಕ್ಷೇವಿಯರ್ ಎಸ್.ಜೆ.**

ಮಾನವ ಹಕ್ಕು ವಿಷಯದಲ್ಲಿ ಸ್ನಾತಕೋತ್ತರ, ಮಾನವ ಹಕ್ಕು ಮತ್ತು ಅಪರಾಧ ಶಾಸ್ತ್ರದಲ್ಲಿ ಪಿ.ಎಚ್.ಡಿ. ೨೦೦೧ ರಿಂದ ೨೦೦೭ ರವರೆಗೆ ದಕ್ಷಿಣ ಏಷಿಯದಲ್ಲಿ ಯೇಸು ಸಭೆಯ ಸಾಮಾಜಿಕ ಕಾರ್ಯಕ್ರಮದ ಕಾರ್ಯದರ್ಶಿಯಾಗಿ ಸೇವೆ. ೨೦೧೨–೨೦೧೫ರವರೆಗೆ ದೆಹಲಿಯ ISI ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ. ತ್ರೈಮಾಸಿಕ ಪತ್ರಿಕೆ "Social Action" ನ ಸಂಪಾದಕ ಮತ್ತು ೨೦೧೭ ರಿಂದ ೨೦೧೯ರ ವರೆಗೆ ರೋಮಿನ ಯೇಸು ಸಭೆಯ ವಲಸಿಗರ ಸೇವಾಕಾರ್ಯದಲ್ಲಿ ಅಂತರ ರಾಷ್ಟ್ರೀಯ ಸಹಾಯಕ ನಿರ್ದೇಶಕ. ಇವರು ೫ ಪುಸ್ತಕಗಳ ಗ್ರಂಥಕರ್ತರು. ಪ್ರತಿಷ್ಠಿತ ಕಾಲಿಕ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿರುತ್ತಾರೆ ಹಾಗೂ ಅರ್ಧ ಡಜನ್ ಮೌಲ್ಯಮಾಪನ ಅಧ್ಯಯನಗಳನ್ನು ನಡೆಸಿಕೊಟ್ಟಿರುತ್ತಾರೆ. ಇವರು ಲೋಕ್ ಮಂಚ್ ವೇದಿಕೆಯ ಒಬ್ಬ ಸಂಸ್ಥಾಪಕರು. ಇವರು ಸಂಶೋಧನಾ ಕಾರ್ಯವಿಧಾನದ ಕ್ರಿಯಾ ಯೋಜನೆ ಮತ್ತು ಅಭಿವೃದ್ಧಿ ಸಂಘಟನೆಗಳ ಪ್ರಕ್ರಿಯೆಯ ಚರ್ಚಾ ಕಾರ್ಯಗಾರಗಳನ್ನು ನಡೆಸಿಕೊಡುತ್ತಾರೆ. ಇವರು "ಭಾರತದ ಧರ್ಮಸಭೆಯಲ್ಲಿ ದಲಿತ ಸಬಲೀಕರಣ ನೀತಿ ಸಂಹಿತೆ ಸೇರ್ಪಡೆ ಸಮುದಾಯಗಳ ನಿರ್ಮಾಣ ಕಾರ್ಯದಲ್ಲಿ ನೈತಿಕ ವಿಧೇಯಕ"ದ ಮುಖ್ಯ .ಸಂಪಾದಕರು. ಪ್ರಸ್ತುತ ಇವರು ಬೆಂಗಳೂರಿನ ಇಂಡಿಯನ್ ಸೋಷಿಯಲ್ ಇನ್ಸ್ಟಿಟ್ಯೂಷನ್‌ನ ನಿರ್ದೇಶಕರಾಗಿದ್ದಾರೆ.



**ಶ್ರೀಮತಿ ಶ್ರೀ ವಿದ್ಯಾ ಸಾಯಿನಾಥನ್**

ಭೌತ ರಸಾಯನ ಶಾಸ್ತ್ರ ಮತ್ತು ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಅಭಿವೃದ್ಧಿ ಕ್ಷೇತ್ರದಲ್ಲಿ ೧೮ ವರ್ಷಗಳ ಸೇವಾ ಅನುಭವ. ಇವರು ಆರೋಗ್ಯ ಮತ್ತು ಪೋಷಣಾ ವಿಷಯ, ಪ್ರತ್ಯೇಕವಾಗಿ ಶಿಶು ಮತ್ತು ತಾಯಿ ಆರೋಗ್ಯ ವಿಭಾಗದಲ್ಲಿ ವಿಸ್ತೃತ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ಅಂತರ ರಾಷ್ಟ್ರೀಯ NGO, CARE ಸಂಸ್ಥೆಯ ಭಾಗವಾಗಿಯೂ ಖಾಸಗಿ ಸಲಹಾಗಾರರೂ ಆಗಿದ್ದಾರೆ. ಮಹಿಳಾ ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆಯಲು ಮಹಿಳಾ ಘಟಕದಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕವಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಜೀವನೋಪಾಯ, ಲಿಂಗ, ಯುವ ಆರೋಗ್ಯ, ವಿಕಲತೆ, ಸಾಮಾಜಿಕ ಸೇರ್ಪಡೆ, ಭಾವನಾತ್ಮಕ ಮತ್ತು ಸಾಮಾಜಿಕ ಒಳಿತು ಹಾಗೂ ಸಂಶೋಧನಾ ಅಧ್ಯಯನ, ಅಭಿವೃದ್ಧಿ ನಿಗಾ ವ್ಯವಸ್ಥೆ, ಪರಿಣಾಮಕಾರಿ ಮೌಲ್ಯ ಮಾಪನ, ದಾಖಲಾತಿ ಮತ್ತು ಉತ್ತಮ ಅಭ್ಯಾಸಗಳ ಗುರುತಿಸುವಿಕೆ, ಇಂತಹ ವಿಷಯಗಳ ಗುರುತಿಸುವಿಕೆಯಲ್ಲಿ ಪರಿಣತೆಯನ್ನು ಗಳಿಸಿರುತ್ತಾರೆ.



**ಡಾ. ಸದಾನಂದ್ ಭಾಗ್**

ನವದೆಹಲಿಯ ಜವಾಹರ್‌ಲಾಲ್ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಪಿ.ಎಚ್.ಡಿ. ಪದವಿ. ಇವರು ಅಭಿವೃದ್ಧಿ ಕ್ಷೇತ್ರದಲ್ಲಿ ಪ್ರತ್ಯೇಕವಾಗಿ ಸಂಶೋಧನೆ ಸಂಬಂಧಿತ ಕ್ಷೇತ್ರದಲ್ಲಿ ಪರವಾದ ಮತ್ತು ಆಂದೋಲನ, ಮಾನವ ಹಕ್ಕುಗಳು, ಮಹಿಳಾ ಸಬಲೀಕರಣ, ಪಂಚಾಯತ್ ರಾಜ್ ಸಂಸ್ಥೆಗಳು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ೧೫ಕ್ಕೂ ಅಧಿಕ ವರ್ಷಕಾಲ ಉದ್ಯೋಗ ಸೇವಾ ಅನುಭವವನ್ನು ಹೊಂದಿರುತ್ತಾರೆ. ಇವರು ಭಾರತದಲ್ಲಿರುವ ದಾನಿ ಸಂಸ್ಥೆ ಮಿಸೆರಿಯೋರ್, ಜರ್ಮನಿ, ಮತ್ತು SKN ನೆದರ್‌ಲ್ಯಾಂಡ್‌ಗಳ ವಿವಿಧ ಯೋಜನೆಗಳ ಮೌಲ್ಯ ಮಾಪನ ಮಾಡುವ ಅನುಭವವನ್ನು ಪಡೆದಿರುತ್ತಾರೆ. ಪ್ರಸ್ತುತ ಇವರು ನವದೆಹಲಿಯ ಕಾರಿತಾಸ್ ಇಂಡಿಯಾ ಸಂಸ್ಥೆಯಲ್ಲಿ ಸಂಶೋಧನೆ ಮತ್ತು ಸಂಪನ್ಮೂಲ ವಿಭಾಗದ ನಿರ್ವಹಣಾ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಾ ಇದ್ದಾರೆ.

With financial support of
the Federal Ministry for
Economic Cooperation and Development

**Caritas India**
CBCI Centre
1 Ashok Place
New Delhi - 110001
www.caritasindia.org

**Indian Social Institute**
24 Benson Road
Benson Town
Bengaluru - 560046
www.isibangalore.com

ISBN: 978-81-947949-1-2

Printed @ Jyoti Printers, Noida. Ph: 9289199317